ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 42
ಅಕ್ಟೋಬರ್ 14, 2012

ಪುಟ 16 ರೂ. 5/-






'ಸೆಕ್ಯುಲರ್' ಮುಖವಾಡದ ಹುಡುಕಾಟದಲ್ಲಿ ಬಿಜೆಪಿ



ತಾರಕಕ್ಕೇರಿದ ಕಾವೇರಿ ರಾಜಕೀಯ ಕಾವು

ಯುಪಿಎ-2 ಕಳಂಕ ಮುಕ್ತಗೊಳ್ಳುವ ಕಸರತ್ತು

ಉತ್ತಮ ಭಾರತಕ್ಕಾಗಿ ಯುವಜನ ಸಂಕಲ್ಪ



ಅಧ್ಯಕ್ಷರ ಪಟ್ಟ ಕೊಡ್ತಿರೋ ಇಲ್ಲ.... ಹುತಾತ್ಮ ಪಟ್ಟ ?


"ನಾನು ಖಾನ್, ಉಗ್ರನಲ್ಲ"

ಎರಿಕ್ ಹಾಬ್ಸ್‌ಬಾಮ್ ಅಂತರ್ರಾಷ್ಟ್ರೀಯ ಇತಿಹಾಸಕಾರ

— ಪ್ರಕಾಶ್ ಕಾರಟ್

ಅಕ್ಟೋಬರ್ 1 ರಂದು ನಿಧನ ಹೊಂದಿದ 95 ವರ್ಷದ ಎರಿಕ್ ಹಾಬ್ಸ್‌ಬಾಮ್ ಅತ್ಯಂತ ಪ್ರಭಾವಶಾಲಿ ಮಾರ್ಕ್ಸ್‌ವಾದಿ ಇತಿಹಾಸಕಾರರಾಗಿದ್ದರು. ಅವರು ಸಮಕಾಲೀನ ಯುಗದ ಇತಿಹಾಸಕಾರ ಮಾತ್ರವಲ್ಲ, ಸಮಾಜ ವಿಜ್ಞಾನಗಳ ಮತ್ತು ಮಾನವಿಕ ಶಾಸ್ತ್ರಗಳ 'ವಿಶ್ವಕೋಶ'ದಂತಿದ್ದ ಮಹಾನ್ ವಿದ್ವಾಂಸರಾಗಿದ್ದರು. ಅವರು ಸಮಕಾಲೀನ ರಾಜಕೀಯ ಮತ್ತು ಚಾರಿತ್ರಿಕ ಘಟನೆಗಳ (ಅದರಲ್ಲೂ ಅವು ಎಡಪಂಥಕ್ಕೆ ಸಂಬಂಧಿಸಿದಾಗ) ವಿವರಗಳ ಮೇಲೆ ಅಸಾಧಾರಣ ಪ್ರಭುತ್ವ ಹೊಂದಿದ್ದರು. ಬಹುಶಃ ಹಾಬ್ಸ್‌ಬಾಮ್ ಇತಿಹಾಸ ಬರವಣಿಗೆಗೆ ಅಮೂಲ್ಯ ಕೊಡುಗೆ ನೀಡಿದ ಕಮ್ಯುನಿಸ್ಟ್ ಇತಿಹಾಸಕಾರರ ಗುಂಪಿನಲ್ಲಿ ಬದುಕಿ ಉಳಿದಿದ್ದ ಕೊನೆಯ ಸದಸ್ಯರಾಗಿದ್ದರು.

ಅವರ 'ಮಹಾನ್ ನಾಲ್ಕು' ಎಂದು ಹೆಸರಾದ ಪುಸ್ತಕಗಳು ಜಗತ್ತಿನ ಎಲ್ಲಾ ಪ್ರಗತಿಪರ ಜನರ ಮತ್ತು (ಅವರೇ ಗುರುತಿಸಿದ ವಿಶಿಷ್ಟ ವಿಭಾಗವಾದ) 'ಬುದ್ಧಿವಂತ ಸಾಮಾನ್ಯ ಜನ'ರ ಬೌದ್ಧಿಕ ಉಪಕರಣದ ಭಾಗವಾಗಿತ್ತು. ಆ 'ಮಹಾನ್ ನಾಲ್ಕು' ಪುಸ್ತಕಗಳು ಎಂದರೆ – 'ದಿ ಏಜ್ ಆಫ್ ರಿವೊಲ್ಯುಶನ್ (ಕ್ರಾಂತಿ ಯುಗ): ಯುರೋಪ್ 1789–1848', 'ದಿ ಏಜ್ ಆಫ್ ಕ್ಯಾಪಿಟಲ್ (ಬಂಡವಾಳದ ಯುಗ): 1848–1875', 'ಧಿ ಏಜ್ ಆಫ್ ಎಂಪೈರ್ (ಸಾಮ್ರಾಜ್ಯ ಯುಗ): 1875–1914', 'ದಿ ಏಜ್ ಆಫ್ ಎಕ್ಸ್‌ಟ್ರೀಮ್ಸ್ (ಅತಿಗಳ ಯುಗ): 1914–1991'. ಅವರು ಜಗತ್ತಿಗೆ ಹಲವಾರು ಶಬ್ದಗಳು ಮತ್ತು ಪರಿಕಲ್ಪನೆಗಳನ್ನು ಕೊಟ್ಟರು. ಅವುಗಳಲ್ಲಿ ಪ್ರಮುಖವಾದವು – 'ಪರಂಪರೆಯನ್ನು




ಸೃಷ್ಟಿಸುವುದು', ಇತಿಹಾಸದಲ್ಲಿ ಜನಜಂಗುಳಿ ವಹಿಸಿದ ಪಾತ್ರ, 'ಆದಿಮ ಬಂಡಾಯಗಾರರು', 'ಸಾಮಾಜಿಕ ದರೋಡಿಕೆ'.

ಹಾಬ್ಸ್‌ಬಾಮ್ ಪ್ರಸಿದ್ಧಿ ಪಡೆದದ್ದು ಬರಿಯ ಬ್ರಿಟಿಷ್ ಇತಿಹಾಸಕಾರರಾಗಿ ಅಲ್ಲ. ಅವರು ನಿಜವಾಗಲೂ ಅಂತರ್ರಾಷ್ಟ್ರೀಯ ಇತಿಹಾಸಕಾರರಾಗಿದ್ದರು. ಯುರೋಪು ಮತ್ತು ಲ್ಯಾಟಿನ್ ಅಮೆರಿಕದ ಇತಿಹಾಸ ಮತ್ತು ರಾಜಕೀಯದ ಬಗ್ಗೆ ಬಹಳ ಬರೆದಿದ್ದು, ಅವರನ್ನು ಆ ಪ್ರದೇಶಗಳಲ್ಲಿ ಬಹಳ ಗೌರವದಿಂದ ಕಾಣಲಾಗುತ್ತಿತ್ತು. ಅವರ ಪ್ರಕಟವಾದ ಪುಸ್ತಕಗಳಲ್ಲಿ ಕೊನೆಯ ಪುಸ್ತಕ 'ಜಗತ್ತನ್ನು ಬದಲಾಯಿಸುವುದು *ಹೇಗೆ : ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದ–1840–2011'*, ಅಪರೂಪದ ಮಣಿ. ಅದು ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದವನ್ನು ಪುನಃ–ಕಂಡುಕೊಳ್ಳುವುದಕ್ಕೆ ಹೊಸ ಬೆಳಕಿನಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಿತು.

ಹಾಬ್ಸ್‌ಬಾಮ್ ರಶ್ಯನ್ ಕ್ರಾಂತಿಯಾದ ವರ್ಷವೇ (ಅಂದರೆ 1917ರಲ್ಲಿ) ಹುಟ್ಟಿದ್ದರು. ಅವರು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷವನ್ನು ಸ್ಪಾನಿಷ್ ಆಂತರಿಕ ಯುದ್ಧದ ಆರಂಭವಾದಾಗ (1936ರಲ್ಲಿ) ಸೇರಿದ್ದರು. ಅವರು ದುಡಿಯುವ ಜನರ ಪರವಾದ ರಾಜಕೀಯ 'ಪಕ್ಷಪಾತ'ವನ್ನು ಯಾವತ್ತೂ ಬಿಟ್ಟುಕೊಡಲಿಲ್ಲ. ಮಾರ್ಕ್ಸ್‌ವಾದದ ಬಗ್ಗೆ ಅವರ ಅಸಾಂಪ್ರದಾಯಿಕ ಅಭಿಪ್ರಾಯಗಳು ಕಮ್ಯುನಿಸ್ಟ್ ಪಕ್ಷಗಳಲ್ಲಿ ಹಲವರಿಗೆ ಸ್ವೀಕಾರಾರ್ಹವಾಗಿರಲಿಲ್ಲ. ಅವರು ಕೊನೆವರೆಗೂ 20ನೇ ಶತಮಾನದ ಸ್ಥಾಪಿತ ಸಮಾಜವಾದದ ಪ್ರಭಾವಶಾಲಿ ಮತ್ತು ಸಹಾನುಭೂತಿಯುತ ವಿಮರ್ಶಕ ಆಗಿದ್ದರು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಅವರು ತಮ್ಮ ಹಿಂದಿನ ಕಮ್ಯುನಿಸ್ಟ್ ಜೀವನ ಮತ್ತು ಎಡ ಉದ್ದೇಶಗಳಿಗೆ ಬದ್ಧತೆಯನ್ನು ಎಂದೂ ಬಿಟ್ಟು ಕೊಡಲಿಲ್ಲ.

ನಾನು ಹಾಬ್ಸ್‌ಬಾಮ್ ಅವರನ್ನು ಕೊನೆಯ ಬಾರಿ ಭೇಟಿ ಆಗಿದ್ದು ಅವರ ಲಂಡನ್ ಮನೆಯಲ್ಲಿ ನವೆಂಬರ್ 2011ರಲ್ಲಿ. ಅವರು ಹಿಂದಿಗಿಂತ ಹೆಚ್ಚು ದುರ್ಬಲರಾಗಿದ್ದರು. ಆದರೆ ಎಂದಿನಂತೆ ಅವರ ಮನಸ್ಸು ಜಾಗ್ರತವಾಗಿತ್ತು. ಕುತೂಹಲದಿಂದ ಇತ್ತು. ಅವರ ಜತೆಗೆ ಕಳೆ ಒಂದು ಗಂಟೆಯಲ್ಲಿ ಅವರು ಭಾರತದ ರಾಜಕೀಯ ಮತ್ತು ಎಡಪಂಥದ ಬಗ್ಗೆ ವಿವರವಾಗಿ ಮಾತನಾಡಿದರು. ಜಗತ್ತಿನಾದ್ಯಂತ ಮತ್ತು ಲ್ಯಾಟಿನ್ ಅಮೆರಿಕದ ಘಟನೆಗಳು ಮತ್ತು ಬೆಳವಣಿಗೆಗಳ ಬಗೆಗೂ ಮಾತನಾಡಿದರು. ಅದೊಂದು ವಿಶಿಷ್ಟವಾದ ಹಾಬ್ಸ್‌ಬಾಮ್–ಥರದ ವಿಶ್ವಪರ್ಯಟನೆಯಾಗಿತ್ತು.




ಪ್ರಗತಿಪರ ಅಧ್ಯಯನ ಮತ್ತು ಯೋಚನೆಗಳ ಜಗತ್ತು ಒಬ್ಬ ಅಪ್ರತಿಮ ಬುದ್ಧಿಜೀವಿಯನ್ನು ಕಳೆದುಕೊಂಡಿದೆ.

ರೈತ

ನೀ ಉತ್ತಿ ಬಿತ್ತಿ ಬೆಳೆದ
ಫಲವ ನೀನು ಉಣಲಿಲ್ಲ
ಬೆವರ, ರಕ್ತ ಬಸಿದರೂ
ನಿನಗೆ ನೇಣ ಕುಣಿಕೆ ತಪ್ಪಲಿಲ್ಲ
    ಅವರು ಬದುಕಲು ನೀ ಬೆಳಿಬೇಕಲ್ಲ
    ನಿನ್ನ ಬದುಕು ಅವರಿಗೆ ಬೇಕಿಲ್ಲ........
    ನಿನ್ನಿಂದ ಸಂಭ್ರಮದಿ ಉಣತಾರ
    ಕಣ್ಣೀರಾಗ ನಿನ ಕೈಯ ತೊಳಿಸ್ತಾರ
ನೀನು ಬದುಕುವ ಜೊತೆಗೆ
ಜಗ ಬದುಕಲಿ ಎಂಬ ನಿನ ಧರ್ಮ
ನೀನೇ ಬದುಕದಂಗಾಗ್ಯೆತಿ
ಅವರ ಪಾಲಸಿಗಳ ಮರ್ಮ
    ನೀನೆ ಈ ರಾಷ್ಟ್ರದ ಬೆನ್ನೆಲುಬು
    ಹೆಮ್ಮೆಯಿಂದಲೆ ಹೇಳತಾರ
    ನಿನ್ನ ಬೆನ್ನಿಗಂಟಿದ ಹೊಟ್ಟೆನೋಡಿ
    ಚೆ ಚೆ ಹಿಂಗಾಗಬಾರದಿತ್ತು ಅಂತಾರ
    ನೀನು ಬೆಳೆವುದು ಎಲ್ಲರಿಗಾಗಿ ಅಂತಾರ
    ನಿನ್ನ ಬೆಳೆಯ ನಿನಗಿಲ್ದಂಗ ಮಾಡ್ಯಾರ
ಮಕ್ಕಳ ಸಾಲಿ, ಮನಿ ಸಂಗತಿ
ನೀ ಚಿಂತಿ ಮಾಡಾಂಗಾಯ್ತು
ಬಡ್ಡಿರೊಕ್ಕ ತಂದು ಸಾಲ ತೀರಿಸ್ದ
ಸಾವಿಗೆ ಶರಣಾಗುವಂಗಾಯ್ತು
    ನೀ ಸತ್ತರೂ ಇವರಿಗೇನಾಗಲ್ಲ
    ಆದರೂ ಚುನಾವಣೆಗೊಮ್ಮೆ
    ನಿನ್ನ ಇವರು ಮರೆಯೊಂಗಿಲ್ಲ
    ನಾವಿರೋದೆ ರೈತರಿಗಾಗಿ ಅಂತಾರ
    ನೀ ಗೊಬ್ಬರ ಬೀಜ ಕೇಳಿದರ..........
ನಿನ ಮ್ಯಾಲ ಗೋಲಿಬಾರ್ ಮಾಡ್ತಾರ
ನಿನಗ ಹಿಂಗಾದ್ರ ಜಗದ ಗತಿ ಏನು
ನೇಣಿಗೆ ತಳ್ಳುವರನ, ನೀ ತಳ್ಳಿ ಏಳು
ನಿನ ಜಗದ ಬೆಳೆಗೆ ತೊಡಕಾದ.........
ಈ ಕಳೆ ಕಸವ ಕಿತ್ತೊಗೆದು ನೀ ಬಾಳು

ಬಸವರಾಜ, ಪೂಜಾರ
ಹಾವೇರಿ.



ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

"ನನ್ನ ಹೆಸರು ಖಾನ್, ಆದರೆ ನಾನೊಬ್ಬ ಉಗ್ರನಲ್ಲ"

1994 ರಲ್ಲಿ ಅಹ್ಮದಾಬಾದ್‌ನಲ್ಲಿ ಜಗನ್ನಾಥ ಪುರಿ ಯಾತ್ರೆಯ ವೇಳೆ ಕೋಮು ಹಿಂಸಾಚಾರವನ್ನು ಉಂಟು ಮಾಡಲು ಪಿತೂರಿ ನಡೆಸಿದ್ದರು ಎಂದು ಆರೋಪಿಸಿ ಟಾಡಾ ಮತ್ತು ಇತರ ಕಾಯ್ದೆಗಳ ಅಡಿಯಲ್ಲಿ ಬಂಧಿಸಿ ಜೈಲು ಶಿಕ್ಷೆಗೆ ಒಳಪಡಿಸಲಾಗಿದ್ದ ಅಶ್ರಫ್ ಖಾನ್ ಮತ್ತು ಇತರ 10 ಮಂದಿಯನ್ನು ಆರೋಪ ಮುಕ್ತಗೊಳಿಸಿ ಬಿಡುಗಡೆಗೊಳಿಸಿದ ದೇಶದ ಸುಪ್ರೀಂ ಕೋರ್ಟಿನ ತೀರ್ಪು ಕರ್ನಾಟಕದ ಜನತೆಯ ಗಮನ ಸೆಳೆದಿರಲಿಕ್ಕಿಲ್ಲ. ನ್ಯಾಯ ಮೂರ್ತಿಗಳಾದ ಹೆಚ್.ಎಲ್.ದತ್ತು ಮತ್ತು ಸಿ.ಕೆ. ಪ್ರಸಾದರನ್ನು ಒಳಗೊಂಡ ಪೀಠವೂ ಸೆ. 26 ರಂದು ನೀಡಿದ ತೀರ್ಪಿನ ಭಾಗವಾಗಿ ಗುಜರಾತ್ ಪೊಲೀಸರಿಗೆ ನೀಡಿರುವ ಸೂಚನೆ ಗಮನಾರ್ಹವಾದುದು.

ಯಾವನೊಬ್ಬ ನಿರಪರಾಧಿಯನ್ನು ಅವನು ಅಲ್ಪ ಸಂಖ್ಯಾತ ಕೋಮಿಗೆ ಸೇರಿದವನು ಎನ್ನುವ ಕಾರಣಕ್ಕಾಗಿ ಅವನನ್ನು ಉಗ್ರನೆಂದು ಪರಿಗಣಿಸಿ ಜೈಲಿಗಟ್ಟಬಾರದು ಎಂದು ನ್ಯಾಯಪೀಠ ನೀಡಿದ ಸೂಚನೆ ಕರ್ನಾಟಕ ಪೊಲೀಸರಿಗೂ ಅನ್ವಯವಾಗುತ್ತದೆ. ಒಬ್ಬನ ಹೆಸರು 'ಖಾನ್' ಎನ್ನುವ ಕಾರಣಕ್ಕಾಗಿ ಆತನನ್ನು ಭಯೋತ್ಪಾದಕ ಎಂದು ಪರಿಗಣಿಸಬಾರದು ಎಂದು ತೀಕ್ಷ್ಣವಾದ ಅಭಿಪ್ರಾಯವನ್ನು ನ್ಯಾಯ ಮೂರ್ತಿಗಳು ವ್ಯಕ್ತಪಡಿಸಿದರು.

ತೀರ್ಪನ್ನು ಬರೆಯುತ್ತಾ ನ್ಯಾಯ ಮೂರ್ತಿ ಪ್ರಸಾದ್ ಹೀಗೆ ಹೇಳುತ್ತಾರೆ. " ಭಯೋತ್ಪಾದನೆಯನ್ನು ತಡೆಗಟ್ಟುವ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಪೊಲೀಸರ ಕರ್ತವ್ಯನಿಷ್ಠೆಯನ್ನು ಮನಗಾಣುತ್ತೇವೆ. ಭಯೋತ್ಪಾದನೆ ಎಮಬುದು ಅತ್ಯಂತ ಗಂಭೀರ ಸ್ವರೂಪದ ಅಪರಾಧ. ಅದರ ಪರಿಣಾಮಗಳೂ ಗಂಭೀರ ಸ್ವರೂಪದ್ದಾಗಿವೆ. ಸಂಘಟಿತ ಗುಂಪುಗಳು, ಹೊರಗಿನ ಬೆಂಬಲದೊಂದಿಗೆ ಭಯೋತ್ಪಾದನೆಯಲ್ಲಿ ತೊಡಗಿದಾಗ, ಅಂತಹ ಕೃತ್ಯಗಳನ್ನು ತಡೆಗಟ್ಟುವ ಕೆಲಸ ಇನ್ನೂ ಹೆಚ್ಚು ಕಷ್ಟಕರವಾಗುತ್ತದೆ. ಆದರೂ ಕೂಡ ನಿರಪರಾಧಿಗಳನ್ನು ಬಂಧಿಸದಂತೆ ಪೊಲೀಸರು ಎಚ್ಚರವಹಿಸಬೇಖೆಂದು ನಾವು ಪುನಃ ಹೇಳಬಯಸುತ್ತೇವೆ".

ಭಯೋತ್ಪಾದನೆಯನ್ನು ತಡೆಗಟ್ಟುವ ಹೆಸರಿನಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಕರ್ನಾಟಕವೂ ಮುಸ್ಲಿಂ ಯುವಕರನ್ನು ಬಂಧಿಸುವುದು ಹೆಚ್ಚಾಗುತ್ತಿದೆ. ಎಲ್ಲಾದರೂ ಒಂದು ಸ್ಫೋಟ ಸಂಭವಿಸಿದರೆ ಯಾರನ್ನಾದರೂ ಬಂಧಿಸಲೇ ಬೇಕಾದ ಒತ್ತಡಕ್ಕೆ ನಮ್ಮ ಪೊಲೀಸರು ಒಳಗಾಗುತ್ತಾರೆ. ಜನರನ್ನು ಸಮಾಧಾನ ಪಡಿಸಲು, ಸ್ಥಳೀಯ ಕೆಲವು ಮುಸ್ಲಿಂ ಯುವಕರನ್ನು ವಶಕ್ಕೆ ತೆಗೆದುಕೊಳ್ಳುವುದು ಪೊಲೀಸರಿಗೆ ಅತ್ಯಂತ ಸುಲಭದ ಕೆಲಸ, ಅವರು ನಿರಪರಾಧಿಗಳಾಗಿರಬಹುದು ಎಂಬ ಕಿಂಚಿತ್ತೂ ಕಾಳಜಿ ಪೊಲೀಸರಿಗೆ ಇರುವುದಿಲ್ಲ. ಎಷ್ಟೋ ಸಲ ಅಂತಹ ಯುವಕರು ಅಮಾಯಕರೇ ಆಗಿರುತ್ತಾರೆ. ಕ್ರಿಮಿನಲ್ ಪ್ರವೃತ್ತಿ ಯುಳ್ಳ ಆಡಳಿತಾರೂಢ ರಾಜಕಾರಣಿಗಳು ತಮಗೆ ಬೇಕಾದಾಗ ಜನರ ಗಮನವನ್ನು ಬೇರೆಕಡೆಗೆ ಸೆಳೆಯಲು ಪೊಲೀಸರ ಮೂಲಕ ನಿರಪರಾಧಿಗಳ ಬಂಧನ ಮಾಡಿಸುತ್ತಾರೆ.

ಪೊಲೀಸರು ವಶಕ್ಕೆ ತೆಗೆದುಕೊಳ್ಳುವ ಮುಸ್ಲಿಂ ಯುವಕರ ಬಗ್ಗೆ ನಮ್ಮ ಪತ್ರಿಕೆಗಳು ಸಹ-ಅನೇಕ ಸಲ ನ್ಯಾಯಾಧೀಶರೆಂಬಂತೆ ತೀರ್ಪುಗಳನ್ನೇ ನೀಡುತ್ತವೆ. ಅಮಾಯಕ ಯುವಕರು ಬಿಡುಗಡೆಯಾದಾಗ ಅದು ಸುದ್ದಿಯಾಗುವುದೇ ಇಲ್ಲ. ಮೇಲೆ ಉಲ್ಲೇಖಿಸಲಾದ ಗುಜರಾತ್ ಮುಸ್ಲಿಂ ಯುವಕರನ್ನು ಸುಪ್ರಿಂ ಕೋರ್ಟ ನಿರಪರಾಧಿಗಳೆಂದು ಘೋಷಿಸಿ ಬಿಡುಗಡೆ ಮಾಡಿದ ಸುದ್ದಿ ನಮ್ಮ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಲೇ ಇಲ್ಲ.

ಜೈಲಿನಿಂದ ಬಿಡುಗಡೆಯಾಗಿ ಬಂದರೂ, ಈ ಅಮಾಯಕ ಯುವಕರು ಸಮಾಜದಲ್ಲಿ ತಲೆಯತ್ತಿ ಬದುಕಲು ಸಾಧ್ಯವೆ? ಅವರಿಗೆ ಯಾರಾದರೂ ಉದ್ಯೋಗ ನೀಡಲು ಸಾಧ್ಯವೇ ಮದುವೆಯಾಗದಿರುವ ಯುವಕರಾಗಿದ್ದರೆ ಅವರನ್ನು ಮದುವೆಯಾಗಲು ಯುವತಿಯರು ಮುಂದೆ ಬರುವುದು ಸಾಧ್ಯವೇ? ಹೀಗೆ ಅವಮಾನಕ್ಕೆ ಒಳಗಾಗುವ ಯುವಕರಲ್ಲಿ ಹತಾಶೆ, ಪರಕೀಯ ಭಾವನೆ ಬೆಳೆಯದೆ ಇರಲು ಸಾಧ್ಯವೇ? ಇಂತಹ ಯುವಕರನ್ನೇ ಹುಡುಕುತ್ತಿರುವ ವಿದೇಶಿ ಉಗ್ರ ಸಂಘಟನೆಗಳತ್ತ ನಮ್ಮ ಯುವಕರನ್ನು ನಾವೇ ತಳ್ಳಿದಂತಾಗುವುದಿಲ್ಲವೆ?


ಮುಸ್ಲಿಂ ಉಗ್ರರ ಮರೆಯಲ್ಲೇ ಕೇಸರಿ ಉಗ್ರರು ಅವಿತುಕೊಂಡು ಬೆಳೆಯುತ್ತಿದ್ದಾರೆ ಎಂಬ ಆತಂಕಕಾರಿ ವಿದ್ಯಮಾನವನ್ನೂ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಮಾಜ ಇಡಿಯಾಗಿ ಎಚ್ಚೆತ್ತು ಕೊಳ್ಳಬೇಕಾಗಿದೆ. ಪೊಲೀಸ್ ನೀತಿ ಬದಲಾಗಬೇಕಾಗಿದೆ. ಉಗ್ರರನ್ನು ಹುಟ್ಟು ಹಾಕುವ ಪೊಲೀಸ್ ವ್ಯವಸ್ಥೆ ತುರ್ತಾಗಿ ಬದಲಾಗಬೇಕಾಗಿದೆ.

ಕಾವೇರಿ ವಿವಾದ-ಭಾವೋನ್ಮಾದ: ರಾಜಕೀಯ ನಾಟಕಕ್ಕೆ ಜನರೇಕೆ ಬಲಿಯಾಗಬೇಕು?

ಕಾವೇರಿ ನದಿ ನೀರು ಹಂಚಿಕೆ ಪ್ರಾಧಿಕಾರದ ನಿರ್ದೇಶನದಂತೆ ತಮಿಳುನಾಡಿಗೆ 9000 ಕ್ಯೂಸೆಕ್ಸ್ ನೀರು ಬಿಡಬೇಕೆಂಬ ನಿರ್ದೇಶನವನ್ನು ವಿರೋಧಿಸಿ ಮುಖ್ಯವಾಗಿ ಮಂಡ್ಯ ಜಿಲ್ಲೆಯಲ್ಲಿ ಚಳುವಳಿಯ ಕಾವು ಹೆಚ್ಚುತ್ತಿದೆ. ಅಕ್ಟೋಬರ್ 6ರಂದು ಕೆಲವು ಸಂಘಟನೆಗಳು ಕರ್ನಾಟಕ ಬಂದ್ ಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ ಇನ್ನಷ್ಟು ಹೆಚ್ಚುವ ಸಂಭವವಿದೆ.

ಎಂತಹ ಸಂದೇಶಗಳಿವು?

ಚಳುವಳಿಗೆ ಕೆಲವು ಮಠಾಧೀಶರು, ತದ ನಂತರದಲ್ಲಿ ಬಹುತೇಕ ಬಂಡವಾಳಶಾಹಿ ಆಳುವ ಮತ್ತು ವಿರೋಧ ಪಕ್ಷಗಳು ಬೆಂಬಲಿಸಿದ ನಂತರ ಕಾವು ಹೆಚ್ಚಾಗಿದೆ. ಬಸ್ ಸಂಚಾರ ಮಂಡ್ಯ ಮಾರ್ಗದಲ್ಲಿ ಹಗಲಿನಲ್ಲಿ ನಿಂತಿದೆ. ಕೃಷ್ಣರಾಜ ಸಾಗರ ಡ್ಯಾಂಗೆ ಮುತ್ತಿಗೆ ಹಾಕಲು ತಂಡಗಳು ಹೊರಟಿರುವುದು ನಿಜಕ್ಕೂ ಉದ್ವಿಗ್ನಕಾರಿ. ಕೆಲವರಂತೂ ಬೆಂಗಳೂರಿನ ನಿವಾಸಿಗಳು ತಮ್ಮನ್ನು ಬೆಂಬಲಿಸಬೇಕೆಂದು ಕುಡಿಯುವ ನೀರಿನ ಸರಬರಾಜನ್ನೇ ನಿಲ್ಲಿಸಿರುವುದು ವಿಚಿತ್ರವೇ ಆಗಿದೆ.ಇನ್ನು ಕೆಲವರು ತಮಿಳು ನಾಯಕನಿಂದ ಚಿತ್ರದ ಕ್ಯಾಸೆಟ್ ಬಿಡುಗಡೆ ಕೂಡದೆಂದು ,ಇಲ್ಲವಾದಲ್ಲಿ ಪರಿಣಾಮ ನೆಟ್ಟಗಾಗುವುದಿಲ್ಲವೆಂದು ಮಂಡ್ಯದ ನಿರ್ದೇಶಕನಿಗೆ ಧಮಕಿ ಹಾಕಿದ್ದಾರೆ.ಇನ್ನು ತ.ನಾ ಮು,ಮಂ.ಯ ಶವಯಾತ್ರೆ, ಚಪ್ಪಲಿ ಸೇವೆ ನಿತ್ಯದ ಹೋರಾಟದ ಐಟಂಗಳು!. ಇವು ಏನು ಸಂದೇಶ ರವಾನಿಸುತ್ತವೆ?



ಬಂದ್- ಶಾಂತಿ, ಸಂಯಮವಿರಲಿ

ಅಕ್ಟೋಬರ್ 6ರ ಬಂದ್ ಏನಾಗುತ್ತದೆ ಎಂಬ ಆತಂಕ ವ್ಯಾಪಕವಾಗಿ ಎಲ್ಲರನ್ನು, ವಿಶೇಷವಾಗಿ ಭಾಷಾ ಅಲ್ಪಸಂಖ್ಯಾತರನ್ನೂ ಕಾಡುತ್ತಿರುವುದಕ್ಕೆ ಕಾರಣ ಇಲ್ಲದಿಲ್ಲ. ಪ್ರತಿಭಟನೆ ಎಲ್ಲರ ಹಕ್ಕು ನಿಜ. ಆದರೆ ಅದಕ್ಕೆ ನಾಗರಿಕ ವಿಧಾನಗಳು, ಚೌಕಟ್ಟು ಇವೆ. ಈ ಹಿಂದೆ ಇಂತಹ ಬಂದ್ ನಂತಹ ಪ್ರತಿಭಟನೆಗಳು ನಡೆದಾಗಲೆಲ್ಲಾ ವ್ಯಾಪಕ ಹಿಂಸೆ ಸಂಭವಿಸಿವೆ. ಇಂತಹ ಅವಕಾಶಗಳಿಗೆ ಕಾದಿರುವ ಸಮಾಜದ್ರೋಹಿಗಳು ಉನ್ಮಾದದ ಉಬ್ಬರದಲ್ಲಿ ಅಪಾರ ಹಾನಿ ಉಂಟು ಮಾಡಿರುತ್ತಾರೆ. ಆಡಳಿತ, ವಿರೋಧ ಪಕ್ಷಗಳು ಅವರದ್ದೇ ರೀತಿಯಲ್ಲಿ 'ನಾಡ ಸೇವೆ'ಗೆ 'ತಮ್ಮ ಕಾಣಿಕೆ' ಅರ್ಪಿಸಿ ಬೇಳೆ ಬೇಯಿಸಿಕೊಳ್ಳಲು ಸ್ಪರ್ದೆ ನಡೆಸುತ್ತಾರೆ. ಜನರ ಗಮನ ನಿಜ ಸಮಸ್ಯೆಗಳಿಂದ ಬೇರೆಡೆಗೆ ಸೆಳೆದು ಹಾದಿ ತಪ್ಪಿಸಲು ಇಂತಹವುಗಳನ್ನು ಬಳಸುತ್ತಾರೆ. ಬಿಜೆಪಿ ಆಡಳಿತದಲ್ಲಿ ಅಂತಹ ಸನ್ನಿವೇಶ ಏರ್ಪಡಲಾರದು ಎಂದು ಹೇಳುವುದು ಕಷ್ಟ. ಹಾಗಾಗದಿರಲಿ ಎಂಬುದೇ ನಮ್ಮೆಲ್ಲರ ಆಶಯ,ಆಗ್ರಹ.

ಬೀದಿಗಳಲ್ಲಿ ಅಮಾಯಕರನ್ನು ಬಡಿದರೆ ಕಾವೇರಿ ನಮಗೆ ದಕ್ಕುತ್ತಾಳಾದರೂ ಹೇಗೆ? ಸಮಸ್ಯೆಯ ಮೂಲ ಇರುವುದಾದರೂ ಎಲ್ಲಿಯೆಂದು ಯೋಚಿಸಬಾರದೇ? ಭಾವಾವೇಶ ವಿವೇಚನೆಯನ್ನು ಬಲಿ ತೆಗೆದುಕೊಳ್ಳುತ್ತದೆ.

ಪುಟ 15 ಕ್ಕೆ



ಅಂಗನವಾಡಿ ನೌಕರರ ರಾಜ್ಯ ಸಮ್ಮೇಳನ ಉತ್ಸಾಹದ ಸಿದ್ದತೆಗಳು

ಮಹಿಳೆ ಮತ್ತು ಶಿಶು ಮಕ್ಕಳ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುವವರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು. ಜೀವನಾವ್ಯಕತೆಗೆ ತಕ್ಕ ವೇತನವಾಗಲೀ ಶ್ರಮಕ್ಕೆ ತಕ್ಕ ಪ್ರತಿಫಲವಾಗಲೀ ಸೂಕ್ತ ಉದ್ಯೋಗ ಭದ್ರತೆಯಾಗಲಿ ಇಲ್ಲದೇ ದುಡಿಯುವವರು ಇವರು. ಆಗಿರುವ ವೇತನ ಹೆಚ್ಚಳ, ಸಿಕ್ಕಿರುವ ಒಂದಷ್ಟು ಸೇವಾ ಭದ್ರತೆ ಎಲ್ಲವೂ ದಕ್ಕಿರುವುದು ನಿರಂತರ ಹೋರಾಟಗಳಿಂದಾಗಿ ಮಾತ್ರ. ಸರ್ಕಾರದ ಆಡಳಿತ ಯಂತ್ರದ ಕೆಳಸ್ಥರದಲ್ಲಿ ಕಾರ್ಯನಿರ್ವಹಿಸುವವರು ಯೋಜನೆ ಯಶಸ್ಸಿಗೆ ಶ್ರಮಿಸುವವರು ಇವರು. ಸರ್ಕಾರಕ್ಕೆ ಇವರು ಕೇವಲ ಕೆಲಸಗಳನ್ನು ಹೇಳಲು ಮಾತ್ರ ಬೇಕು. ತಾಯಿ ಮಕ್ಕಳ ಆರೋಗ್ಯ ರಕ್ಷಣೆ ಮಾತ್ರವಲ್ಲ ಆಳುವ ಸರ್ಕಾರಗಳ ಸಾಕಷ್ಟು ಯೋಜನೆಗಳ ಅನುಷ್ಠಾನದಲ್ಲಿ ಇವರು ಶ್ರಮ ಬೇಕೇ ಬೇಕು.

ಸಾಕಷ್ಟು ಸಮಸ್ಯೆಗಳ ಮಧ್ಯದಲ್ಲಿ ಜೀವನ ನಡೆಸುತ್ತಿರುವ ಈ ನೌಕರರು ಸಂಘಟನೆ ಮತ್ತು ಹೋರಾಟದ ಶಕ್ತಿಯನ್ನು ಮನಗಂಡು ದಿನೇ ದಿನೇ ಹೆಚ್ಚು ಹೆಚ್ಚು ಸಂಘಟಿತರಾಗುತ್ತಾ ಬರುತ್ತಿದ್ದಾರೆ.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು ಸಂಯೋಜಿತ) ವು ಕರ್ನಾಟಕ ರಾಜ್ಯದಲ್ಲಿ ಈ ನೌಕರರ ಪ್ರಶ್ನೆಗಳ ಆಧಾರದಲ್ಲಿ ಸಮರಶೀಲ ಹೋರಾಟಗಳನ್ನು ನಡೆಸುತ್ತಾ ನೌಕರರನ್ನು ಸಂಘಟಿಸುತ್ತಾ ಬರುತ್ತಿದೆ.

ಪ್ರಸ್ತುತ ಈ ನೌಕರ ಸಮುದಾಯದ ಎದುರಿಸುತ್ತಿರುವ ಸವಾಲುಗಳು ಹಾಗೂ ಅದನ್ನು ಎದುರಿಸಲು ಅನುಸರಿಸಬೇಕಾದ ಹೋರಾಟದ ದಾರಿಯ ಕುರಿತು ಚರ್ಚಿಸಿ ಪ್ರಜಾಸತ್ತಾತ್ಮಕವಾದ ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಇದೇ ನವೆಂಬರ್ 3 ರಿಂದ 5, 2012 ವರೆಗೆ ಮೈಸೂರಿನಲ್ಲಿ ಸಂಘಟನೆಯ ರಾಜ್ಯ ಸಮ್ಮೇಳನ ನಡೆಯುತ್ತಿದೆ. ಅದರ ಪೂರ್ವ ಭಾವಿಯಾಗಿ ತಾಲ್ಲೂಕ ಮತ್ತು ಜಿಲ್ಲಾ ಸಮ್ಮೇಳಗಳು ನಡೆಯುತ್ತಿವೆ.

ಇದೇ ಹಿನ್ನೆಲೆಯಲ್ಲಿ ವಿಜಾಪುರ ಜಿಲ್ಲಾ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮ್ಮೇಳನ ಸೆಪ್ಟೆಂಬರ್ ತಿಂಗಳಿನಲ್ಲಿ ಯಶಸ್ವಿಯಾಗಿ ಜರುಗಿತು. ಅಂದು ಬಿಜಾಪುರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಘೋಷಣೆ ಕೂಗುತ್ತಾ ಗಾಂಧಿ ಚೌಕ ಮುಖಾಂತರ ಬಸವೇಶ್ವರ ವೃತ್ತದಲ್ಲಿರುವ ಬಾರಾಕಮಾನದ ಹತ್ತಿರ ನೌಕರರು ಸಮಾವೇಶಗೊಂಡರು.



ಸಮ್ಮೇಳನದ ಉದ್ಘಾಟನೆ ಮಾಡಿದ ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್. ವರಲಕ್ಷ್ಮಿಯವರು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ದೇಶದಲ್ಲಿರುವ 100 ಮಕ್ಕಳಲ್ಲಿ 60 ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. 1000 ಮಕ್ಕಳಲ್ಲಿ 35 ಮಕ್ಕಳ ಆರೋಗ್ಯ ಸೌಲಭ್ಯದಿಂದ ವಂಚಿತರಾಗಿ ಸಾಯುತ್ತಿದ್ದಾರೆ, ರಕ್ತಹೀನತೆಯಿಂದ ಅನೇಕ ತಾಯಂದಿರು ಸಾಯುತ್ತಿದ್ದಾರೆ. ಇದಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಅಭದ್ರತೆಯೇ ಕಾರಣ. 35 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ. ಅಂಗನವಾಡಿಗಳು ಸುಧಾರಣೆಯಾಗಬೇಕಾದರೆ ಕೇಂದ್ರ ಸರ್ಕಾರವು 73 ಸಾವಿರ ಕೋಟಿ ರೂ ನೀಡಬೇಕು, ಆದರೆ ಮನಮೋಹನಸಿಂಗ್ ಹಾಗೂ ಸೋನಿಯಾಗಾಂಧಿ-ಒಟ್ಟಾರೆ ಯುಪಿಎ ಸರ್ಕಾರ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ಜಗತ್ತಿನ ಪ್ರತಿ 5 ಮಕ್ಕಳಲ್ಲಿ 2 ಮಕ್ಕಳು ಹಸಿವಿನಿಂದ ಬಳಲುತ್ತಿದ್ದು ಆ ಎರಡೂ ಮಕ್ಕಳು ಭಾರತದವರೇ ಆಗಿದ್ದಾರೆ. ಚುನಾವಣೆ ಹತ್ತಿರವಾಗುತ್ತಿದ್ದಂತೆ ಜಾತಿ ಸಂಘಟನೆ ಮಾಡುವವರಿಗೆ ರಾಜಕಾರಣಿಗಳು ಧಾರಾಳವಾಗಿ ಹಣ ಹೆಂಡ ನೀಡುತ್ತಾರೆ. ದೇಶದಲ್ಲಿ ಯುಪಿಎ ಸರ್ಕಾರವು ಹಲವಾರು ಹಗರಣಗಳಲ್ಲಿ ತೊಡಗಿ ಸಾವಿರಾರು ಕೋಟಿ ರೂ ಲೂಟಿ ಮಾಡುತ್ತಿದೆ. ಅದೇ ರೀತಿಯಾಗಿ ಕರ್ನಾಟಕದ ಬಿಜೆಪಿ ಸರ್ಕಾರದಲ್ಲಿ ಕಾಮುಕರು, ಸದನದಲ್ಲಿ ನೀಲಿ ಚಿತ್ರ ನೋಡುವವರು, ಜೈಲಿಗೆ ಹೋಗಿಬಂದವರು ಮತ್ತು ಮೋಜು ಮಸ್ತಿಯಲ್ಲಿ ತೊಡಗಿರುವವರು ವಿಧಾನಸೌಧದಲ್ಲಿ ಕುಳಿತಿದ್ದಾರೆ. ಅಂಗನವಾಡಿ ನೌಕರರ ಕಷ್ಟ ಸುಖ ಕೇಳುವವರು ಯಾರೂ ಇಲ್ಲದಂತಾಗಿದೆ. ದಕ್ಷಿಣ ಭಾರತದಲ್ಲಿ ಕರ್ನಾಟಕ ರಾಜ್ಯವು ಅತಿ ಹೆಚ್ಚು ಬಡವರನ್ನು ಹೊಂದಿದೆ. ಅಂದರೆ 1 ಕೋಟಿ ಜನ ಬಡವರಾಗಿದ್ದಾರೆ. ದೇಶದಲ್ಲಿ 120 ಕೋಟಿ ಜನರಲ್ಲಿ 40 ಕೋಟಿ ಜನರು ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ. ದಿನದಿಂದ ದಿನಕ್ಕೆ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರುತ್ತಿವೆ, ಯುಪಿಎ ಸರ್ಕಾರ ತೈಲ ಬೆಲೆಯನ್ನು 14 ಬಾರಿ ಏರಿಕೆ ಮಾಡಿದೆ. ಅಂಗನವಾಡಿ ನೌಕರರು ಸಂಘಟಿತರಾಗಿ ಹೋರಾಟಗಳ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳುವುದರ ಜೊತೆಗೆ ಆಳುವ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಅರಿತು ಅವುಗಳನ್ನು ಸೋಲಿಸುವ ನಿಟ್ಟಿನಲ್ಲಿಯೂ ಶ್ರಮಿಸಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಭೀಮಶಿ ಕಲಾದಗಿ, ಅಣ್ಣಾರಾಯ ಈಳಗೇರ, ಮನ್ನುಸಾಬ ಕಲಾದಗಿ, ಭಾರತಿ ವಾಲಿ, ಸುರೇಖಾ ರಜಪೂತ, ಮುಂತಾದವರು ಮಾತನಾಡಿದರು. ಸುನಂದಾ ನಾಯಕ, ಸೋಮಪ್ಪ ಆಯಟ್ಟಿ, ಲಕ್ಷ್ಮಣ ಹಂದ್ರಾಳ, ಜಯಶ್ರೀ ಎಸ್, ಪೂಜಾರಿ, ಕಾಳಮ್ಮ ಬಡಿಗೇರ, ಸಚಿನ್ ತಳಕೇರಿ, ಸರಸ್ವತಿ ಹಲಗಣಿ, ವ್ಹಿ.ಎಂ, ಸೊನ್ನದ, ಮುಂತಾದವರು ಭಾಗವಹಿಸಿದ್ದರು. ಸಮ್ಮೇಳನವು ಸರಸ್ತಿ ಹಲಗಣಿ ಅವರನ್ನು ಅಧ್ಯಕ್ಷರನ್ನಾಗಿಯೂ, ಸುನಂದಾ ನಾಯಕ ಪ್ರಧಾನ ಕಾರ್ಯದರ್ಶಿಯನ್ನಾಗಿ, ಭಾರತಿ ವಾಲಿ ಖಜಾಂಜಿಯಾಗಿರುವ ನೂತನ ಜಿಲ್ಲಾ ಸಮಿತಿಯನ್ನು ಚುನಾಯಿಸಿತು.

■ ಸುನಂದಾ ನಾಯಕ



ಗುಲ್ಬುರ್ಗಾ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಸಮ್ಮೇಳನದ ವೇದಿಕೆಯಲ್ಲಿ ಮಾತನಾಡುತ್ತಿರುವ ರಾಜ್ಯ ಮುಖಂಡರು.

ಸಮ್ಮೇಳನದಲ್ಲಿ ಭಾಗವಹಿಸಿದ ಕಾರ್ಯಕರ್ತೆಯರು




ಕನ್ನಡ ವಾರಪತ್ರಿಕೆ

ಅಧ್ಯಕ್ಷ ಪಟ್ಟ ಕೊಡ್ತಿರೋ ಇಲ್ಲವೆ ಹುತಾತ್ಮ ಪಟ್ಟ ?

ಎಸ್.ವೈ.ಗುರುಶಾಂತ್

ಕೇಂದ್ರ ಕಾಂಗ್ರೆಸ್ ಪಕ್ಷದ ವೈಫಲ್ಯಗಳು ತನ್ನ ಗೆಲುವಿಗೆ ಮೆಟ್ಟಿಲೆಂದೇ ಭ್ರಮಿಸಿರುವ ಬಿಜೆಪಿ ಅದೇ ಹುರುಪಿನಲ್ಲಿ ಸೂರಜ್ ಕುಂಡ್ ನ ಕಾರ್ಯಕಾರಿಣಿ ಸಭೆಯಲ್ಲಿ ಬೀಗಿದ್ದು ವಿಶೇಷ. ಆದರೆ ಆರಂಭದಲ್ಲಿ ಅರಳಿದ್ದ ಕಮಲದ ಹುರುಪು ಅಂತ್ಯದಲ್ಲಿ ಕಮರಿದ್ದು ವಾಸ್ತವ. ಪ್ರಧಾನಿ ಪಟ್ಟ ತಮಗೇ ಗಿಟ್ಟಬೇಕೆಂಬ ಅಂತರ್ ಯುದ್ಧದಲ್ಲಿ ಅದ್ವಾನಿ, ಮೋದಿ, ಜೇಟ್ಲಿ, ಸುಷ್ಮಾ ನಂತಹ ನಾಯಕರು ದಿಕ್ಕಿಗೊಬ್ಬರಂತೆ ನಿಂತು ಕಾದಾಡುತ್ತಿದ್ದರೂ ತಾವೆಲ್ಲಾ ಒಂದು ಎಂದು ತೋರಿಸಲು ಅಲ್ಲಿ ಹೆಣಗಿದ್ದು ವಿಪರ್ಯಾಸ. ಅವರ ನಾಯಕತ್ವದ ಎನ್.ಡಿ.ಎ ನಲ್ಲಿಯೇ ಬಿರುಕು ಕಾಣಿಸಿಕೊಂಡದ್ದನ್ನು ಅವರಿಗೆ ಮುಚ್ಚಿಡಲಾಗಲಿಲ್ಲ. ಕಲಾಪಗಳು ಸಮಾರೋಪಗೊಳ್ಳುವ ಮೊದಲೇ ರಾಜ್ಯಗಳಲ್ಲಿ ಪಕ್ಷದ ನಾಯಕರು ಪರಸ್ಪರ ಕಿತ್ತಾಟ- ಕೆಸರೆರಚಾಟದಲ್ಲಿ ಮುಳುಗೇಳುತ್ತಿರುವುದು ಅದರ ದಯನೀಯ ಸ್ಥಿತಿಯನ್ನು ಸಾರುವಂತಿತ್ತು. ವಿಶೇಷವಾಗಿ ಕರ್ನಾಟಕದ ವಿಧ್ಯಮಾನಗಳು ನಾಯಕತ್ವಕ್ಕೆ ಮತ್ತೇ ಸವಾಲು ಎಸೆದು ಅದರ ಅಸಹಾಯಕತೆಯನ್ನು ತೋರ್ಪಡಿಸಿದ್ದು ಕೊಳೆಯುತ್ತಿರುವ ಅದರ ಗಾಯಗಳನ್ನು ಮತ್ತಷ್ಟೂ ಕೆದಕಿ ಹಸಿಯಾಗಿಸಿತು.

ಬಿಜೆಪಿ ತಲುಪಿರುವ ಅಧಃಪತನ ಎಂತಹದ್ದೆಂದರೆ ಆ ಗಾಯಗಳ ನವೆ, ಬಾಧೆ ತಾಳದೇ ಮತ್ತೇ ಮತ್ತೇ ತನ್ನ ಕೋಮುವಾದೀ ಮುಳ್ಳು ನಾಲಿಗೆಯಿಂದ ನೆಕ್ಕುತ್ತಾ ಇನ್ನಷ್ಟು ಗಾಯಗಳನ್ನು ಮಾಡಿಕೊಳ್ಳುವುದು, ಯಾತನೆ ಅನುಭವಿಸುವುದೇ ಆಗಿದೆ . ಒಬ್ಬರಿಗೆ ಒಂದೇ ಹುದ್ದೆ ಎಂಬ ನಿರ್ಣಯ ಅಂಗೀಕರಿಸಿರುವ ಬಿಜೆಪಿ ಪಕ್ಷ ಕರ್ನಾಟಕದಲ್ಲಿ ರಾಜ್ಯಾದ್ಯಕ್ಷ ಈಶ್ವರಪ್ಪನವರಿಗೆ ಉಪ ಮುಖ್ಯಮಂತ್ರಿ ಪದವಿಯನ್ನೂ ದಯಪಾಲಿಸಿದೆ. ಮಾತ್ರವಲ್ಲ



ತನ್ನ ನೀತಿಯನ್ನೇ ಗಾಳಿಗೆ ತೂರಿ ಒಂದಲ್ಲಾ ಎರಡು ಡಿ.ಸಿ.ಎಂ. ಹುದ್ದೆಗಳನ್ನೂ ಸೃಷ್ಟಿಸಿದೆ. ಇವೆಲ್ಲಾ ಆ ಪಕ್ಷದೊಳಗಿನ ಅಧಿಕಾರ ದಾಹದ ಕಿತ್ತಾಟದಲ್ಲಿ ಪ್ರಬಲವಾಗಿರುವ ಗುಂಪುಗಳನ್ನು ಸಂತೈಸಲು ಮತ್ತು ಹೇಗಾದರೂ ಅಧಿಕಾರದಲ್ಲಿ ಮುಂದುವರಿದು ಅಕ್ರಮ, ಭ್ರಷ್ಟ ಮಾರ್ಗಗಳಿಂದ ರಾಜ್ಯವನ್ನು ಲೂಟಿ ಹೊಡೆದು ಪಾಲು ಪಡೆಯುತ್ತಾ ಹೋಗುವುದೇ ಆಗಿದೆ. ಕಾರ್ಯಕಾರಿಣಿ ಸಭೆ ಈ ಯಾವುದಕ್ಕೂ ಕೊನೆ ಹೇಳಲಿಲ್ಲ. ಬದಲಾಗಿ ಈ ಕದನವನ್ನು ಇನ್ನಷ್ಟೂ ಹೆಚ್ಚಿಸಿತು.

ಕಿತ್ತಾಟ ಜಾರಿಯಲ್ಲಿ!

ಕಾರ್ಯಕಾರಿಣಿ ಸಭೆಯಲ್ಲಿ ಕರ್ನಾಟಕ ರಾಜ್ಯ ಘಟಕಕ್ಕೆ ಹೊಸ ಅಧ್ಯಕ್ಷರನ್ನು ಸೂಚಿಸುವುದಾಗಿ ಹೇಳಲಾಗಿತ್ತಾದರೂ ಅದು ಸಾಧ್ಯವೇ ಆಗಲಿಲ್ಲ. ಪ್ರಧಾನವಾಗಿ ಹಗರಣ, ಮೊಕದ್ದಮೆಗಳಿಂದ ಪದಚ್ಯುತಗೊಂಡಿರುವ ಬಿ.ಎಸ್.ಯಡಿಯೂರಪ್ಪ ಈ ಕೂಡಲೇ ಮುಖ್ಯಮಂತ್ರಿಯಾಗದಿದ್ದರೂ ಮುಂದಿನ ಗುರಿಯಿಟ್ಟುಕೊಂಡು ರಾಜ್ಯಾಧ್ಯಕ್ಷನಾಗಲು ಬಾರೀ ಕಸರತ್ತು ನಡೆಸಿದ್ದಾರೆ. ಆದರೆ ಬಿಜೆಪಿಯೊಳಗಿನ ಅನಂತಕುಮಾರ್, ಈಶ್ವರಪ್ಪನವರ ಯಡಿಯೂರಪ್ಪ ವಿರೋಧಿ ಗುಂಪುಗಳ ತೀವ್ರ ವಿರೋಧವಿದ್ದು ಅದೇನಿದ್ದರೂ ಬೇರೆ ಅಭ್ಯರ್ಥಿಯನ್ನೇ ನೇಮಿಸಬೇಕೆಂದು ಪಟ್ಟು ಹಿಡಿದಿವೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿ ಅನಂತ್ ಕುಮಾರನ ಬೆಂಬಲಿಗನಾದ ಸಂಸದ ಪ್ರಹ್ಲಾದ ಜೋಶಿ ಮತ್ತು ಕಲ್ಲಡ್ಕ ಪ್ರಭಾಕರ ಭಟ್ಟರ ಕರಾವಳಿ ಆರೆಸ್ಸೆಸ್ ನ ಅಭ್ಯರ್ಥಿ ಸಂಸದ ನಳೀನ್‌ಕುಮಾರ್ ಕಟೀಲು ರವರ ಹೆಸರು ಕೇಳಿಬಂದವು. ಹೈಕಮಾಂಡ್ ನಲ್ಲೂ ಇದೇ ಯೋಚನೆಯಿರುವುದನ್ನು ಮೊದಲೇ ಅರಿತ್ತಿದ್ದ ಯಡಿಯೂರಪ್ಪ ಕಾರ್ಯಕಾರಿಣಿ ಸಭೆಯನ್ನೇ ಬಹಿಷ್ಕರಿಸಿ ಸೆಡ್ಡು ಹೊಡೆದದ್ದು. ಇದರ ಪೂರ್ವಭಾವಿಯಾಗಿ ಬಿಜೆಪಿ ವಕ್ತಾರ ಆಯನೂರು ಮಂಜುನಾಥ ಸಾರಿಗೆ ನೌಕರರ ಮುಷ್ಕರವನ್ನು ನೆಪವಾಗಿರಿಸಿಕೊಂಡು ಸರ್ಕಾರ ಮಾಡಿಕೊಂಡ ಒಪ್ಪಂದ ಕಾರ್ಮಿಕರಿಂದ 300 ಕೋಟಿಯಷ್ಟು ರೂ ಹಣವನ್ನು ಕಸಿಯುತ್ತದೆಂಬ ಸತ್ಯವನ್ನು ಹೇಳಿ ಸಾರಿಗೆ ಸಚಿವ, ಡಿಸಿಎಂ ಅಶೋಕರವರ ರಾಜೀನಾಮೆಗೆ ಒತ್ತಾಯಿಸಿದ್ದು ಬಿಜೆಪಿಯೊಳಗಿನ ಬಿಕ್ಕಟ್ಟು ತಿರುವು ಪಡೆಯಲು ಕಾರಣವಾಯಿತು. ಅಲ್ಲದೆ ಕೆ.ಎಸ್.ಈಶ್ವರಪ್ಪ ನವರು ಉಪಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಪೂರ್ಣಾವಧಿಯಾಗಿ ಪಕ್ಷವನ್ನು ಸಂಘಟಿಸಬೇಕೆಂದು ಸ್ವತಃ ಯಡಿಯೂರಪ್ಪನವರೇ ಬಹಿರಂಗವಾಗಿ ಹೇಳಿದ್ದು ಮತ್ತೊಂದು ಸುತ್ತಿನ ಯುದ್ಧಕ್ಕೆ ಕಹಳೆ ಊದಿತಂತಾಯಿತು. ಹೈಕಮಾಂಡ್ ಇದರಿಂದ ವಿಚಲಿತವಾಗಿತ್ತು. ಈ ಹಿನ್ನೆಲೆಯಲ್ಲೇ ತಮ್ಮ ಬಲ ತೋರಿಸಲು ವಿರೋಧಿ ಗುಂಪು ಬಿಎಸ್‌ವೈ ನ

ಪುಟ 10 ಕ್ಕೆ

ಕಾಂಗ್ರೆಸ್: ಜಾತಿ ರಾಜಕಾರಣದ ಅಸಹ್ಯತನ

ರಾಜ್ಯದ ಬಿಜೆಪಿ ಸರಕಾರದ ವೈಫಲ್ಯಗಳೇ ತನಗೆ ಅಧಿಕಾರದ ಗದ್ದುಗೆ ಏರುವ ಏಣಿಯಾಗಲಿದೆ ಎಂದು ಭಾವಿಸಿರುವ ಕಾಂಗ್ರೆಸ್ ಪಕ್ಷ ತಾನೂ ಚುನಾವಣೆಯ ತಯಾರಿಯಲ್ಲಿದ್ದೇನೆ ಎಂದು ತೋರಿಸುತ್ತಿದೆ. 'ಕಾಂಗ್ರೆಸ್ ಗೆ ಬನ್ನಿ ಬದಲಾವಣೆ ತನ್ನಿ' ಎಂಬ ಅದರ ರಾಜ್ಯ ವ್ಯಾಪಿ ಅಭಿಯಾನ ಇನ್ನೂ ಯಾರನ್ನೂ ಆಕರ್ಷಿಸುವುದು ಸಾಧ್ಯವಾಗಿಲ್ಲ ಮಾತ್ರವಲ್ಲ ತಮ್ಮೊಳಗಿನ ಜಗಳ ನಿಲ್ಲಿಸಿದ ಬದಲಾವಣೆಯನ್ನೂ ತಂದಿಲ್ಲ. ಕೂಸು ಹುಟ್ಟುವ ಮೊದಲೇ ಕುಲಾಯಿ ಹೊಲಿಸುವುದರಲ್ಲಿ ನಿಸ್ಸೀಮರಾಗಿರುವ ಇವರು ತಮ್ಮ ಘನ ಅದ್ಯಕ್ಷತೆಯಲ್ಲಿಯೇ ಪಕ್ಷ ಗೆದ್ದು ಬಿಟ್ಟಿತೆಂದೂ, ಆದ್ದರಿಂದ ತಾವೇ ಸಿಎಂ ಸ್ಥಾನದ ಸಹಜ ಆಯ್ಕೆಯೆಂದೂ ಹೇಳಿಕೊಳ್ಳಲು ಸ್ಪರ್ಧೆಗಿಳಿದು ನಗೆಪಾಟಲಿಗೀಡಾಗಿದ್ದಾರೆ. ಜಾತಿ ಕ್ರೋಢೀಕರಣಕ್ಕೇ ಶರಣಾಗಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ಒಕ್ಕಲಿಗ ಸಮುದಾಯದ ನಡುವೆ ಬಲ ಪಡೆಯುತ್ತಿರುವ ಜೆಡಿ ಎಸ್, ಬಿಜೆಪಿ ವಿರೋಧಿ ನೆಲೆಯನ್ನು ಕಿತ್ತುಕೊಳ್ಳದಂತೆ, ಅದರ ಲಾಭ ತನಗೇ ಸಿಗುವಂತೆ ಮಾಡಲು ಕಾಂಗ್ರೆಸ್ ತಂತ್ರ ಅನುಸರಿಸಲು ಯತ್ನಿಸುತ್ತಿದೆ.





ಇನ್ನೊಂದೆಡೆ, ರಾಜ್ಯದಲ್ಲಿನ ಪ್ರಬಲ ಲಿಂಗಾಯತ ಸಮುದಾಯ ಬಿಜೆಪಿ ಹಿಂದಿರುವುದರಿಂದ ಬಿಜೆಪಿಯೇ ಅಧಿಕಾರಕ್ಕೆ ಬಂದಿತೆಂದೂ ಭಯ ಹುಟ್ಟಿಸಿ ಲಿಂಗಾಯತ ಮುಖಂಡರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿದರೆ ಗೆಲುವು ನಿಶ್ಚಿತವೆಂದೂ ಹೇಳುತ್ತಾ ಹೈಕಮಾಂಡ್‌ಗೆ ಹಾಲಿ ಅಧ್ಯಕ್ಷ ಪರಮೇಶ್ವರ್ ರವರನ್ನು ಬದಲಾಯಿಸಲು ಒತ್ತಡ ಹಾಕುತ್ತಿದ್ದಾರೆ. ಇದರಲ್ಲಿ ಉದ್ಯಮಿ, ಕೆಪಿಸಿಸಿ ಖಜಾಂಚಿ ಶಾಮನೂರು ಶಿವಶಂಕ್ರಪ್ಪ ಮುಂಚೂಣಿಯಲ್ಲಿದ್ದಾರೆ. ಈ ಪ್ರಸಂಗವು ವಿಪರೀತಕ್ಕಿಳಿದು ಪರ ವಿರೋಧದ ಜಾತಿ ಆಧಾರಿತ ಅಸಹ್ಯ ಸಮರವಾಗಿ ಮಾರ್ಪಟ್ಟಿದೆ. ಅಧ್ಯಕ್ಷ /ಸಿಎಂ ಗಾದಿಯ ಗ್ರಹಣದತ್ತ ಕೇಂದ್ರದ ಹಲವು ಸಚಿವರೂ ಇಳಿದಿರುವುದರಿಂದ ಪರಮೇಶ್ ರವರ ಪದಚ್ಯುತಿ ಯತ್ನ ಬಿರುಸಾಗಿಯೇ ಇತ್ತು. ಆದರೆ ಜಾತಿಗಳ ಸಂಯೋಜನೆ, ಮರು ಹೊಂದಾಣಿಕೆಗಳ ಬಗ್ಗೆ ಅಷ್ಟು ಖಾತರಿ ಹೈಕಮಾಂಡ್‌ಗೂ ಇಲ್ಲವಾಗಿದೆ. ಇತ್ತ ಲಿಂಗಾಯತರೂ ಇಲ್ಲದ, ಅದರ ಮೊದಲಿನ ಬೆಂಬಲಿಗರಾದ ದಲಿತರು, ಹಿಂದುಳಿದವರೂ ಇಲ್ಲದ ಸ್ಥಿತಿ ಏರ್ಪಟ್ಟರೇ ಹೇಗೆ ಎಂದು ಚಿಂತಿತವಾಗಿದೆ. ಮತ್ತು ದಾಳ ಹಾಕಿ ಕಾದಿರುವ (ಇನ್ನೊಬ್ಬ ಪ್ರಬಲ ಲಿಂಗಾಯತ ನಾಯಕ) ಯಡಿಯೂರಪ್ಪ ಹಾಗೂ ಬಿಜೆಪಿ ಯೊಳಗಿನ ವಿದ್ಯಮಾನಗಳು ಸ್ಪಷ್ಟ ರೂಪ ತಾಳದಿರುವುದ ರಿಂದಲೂ ತಕ್ಷಣ ಅಧ್ಯಕ್ಷರ ಬದಲಾವಣೆಯ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಂಡಿಲ್ಲ.

ಈ ಸಂದರ್ಭದಲ್ಲೇ ತನಗೆ ಮೇಲುಗೈ ಯಿದೆಯೆಂದು ಪರಮೇಶ್ವರ್ ಭಾವಿಸಿ ಸಭೆಗೆ ಗೈರುಹಾಜರಾಗಿದ್ದ ಶಾಮನೂರರಿಗೆ ನೋಟೀಸ್ ಕಳುಹಿಸಲು ಧೈರ್ಯ ತೋರಿದ್ದು ಕಾಂಗ್ರೆಸ್ ಗುಂಪುಗಾರಿಕೆಗೆ ಮತ್ತಷ್ಟು ಇಂಬು ನೀಡಿತು. ಈ ಎಲ್ಲಾ ವಿಧ್ಯಮಾನಗಳು ಕಾಂಗ್ರೆಸ್ ನಲ್ಲಿ ಐಕ್ಯತೆ ಮೂಡಿಸುವ ಬದಲು ಅನೈಕ್ಯತೆಯನ್ನೇ ಹೆಚ್ಚಿಸಿವೆ. ಕೇಂದ್ರದ ಜನದ್ರೋಹಿ ನೀತಿಗಳು ಮತ್ತು ರಾಜ್ಯದಲ್ಲಿ ವಿರೋಧ ಪಕ್ಷವಾಗಿ ಅದು ತೋರಿದ ವೈಫಲ್ಯಗಳು ಜನರ ಆಕ್ರೋಶ ಹೆಚ್ಚಿಸಿರುವಾಗಲೂ ಅದರ ಪರಿವು, ಸಂವೇದನೆಯೇ ಇಲ್ಲದ ಈ ನಾಯಕರ ಒಳಜಗಳ, ಅಧಿಕಾರದಾಹದ ಸ್ಪರ್ಧೆಗಿಂತ ಬೇರೆ ಶತೃಗಳ! ಅವಶ್ಯಕತೆ ಯಾದರೂ ಅದಕ್ಕೆ ಯಾಕಿದೆ? ಹೀಗಾಗಿ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಇವರು ಒಗ್ಗಟ್ಟಿನ ಸೋಗು ಹಾಕಿದ್ದು ಕಾಂಗ್ರೆಸ್ ಬಗ್ಗೆ ಜನರಲ್ಲಿ ಯಾವ ನಿರೀಕ್ಷೆಯನ್ನು ಹುಟ್ಟು ಹಾಕಲಿಲ್ಲ.

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಅಪಾಯಕಾರಿ – ಬಿ. ಮಾಧವ

1994 ರಲ್ಲಿ ಅಂದಿನ ನರಸಿಂಹ ರಾವ್ ನೇತೃತ್ವದ ಕಾಂಗ್ರೇಸ್ ಸರ್ಕಾರವು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದಾಗಲೇ ಭಾರತದ ಸಾರ್ವಭೌಮತೆಯನ್ನು ವಿದೇಶಿಯರಿಗೆ ಒತ್ತೆ ಇಡಲಾಗಿತ್ತು. ಆ ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದಾದ Trade-Related Investment Measures - TRIMS (ವ್ಯಾಪಾರ ಸಂಬಂಧಿ ಹೂಡಿಕೆ ಕ್ರಮಗಳು) ಪ್ರಕಾರ ಎಲ್ಲಾ ದೇಶಗಳೂ ವಿದೇಶಿ ಬಂಡವಾಳಕ್ಕೆ ಮುಕ್ತ ಪ್ರವೇಶ ನೀಡಬೇಕು ಎಂಬ ಶರ್ತವಿದೆ. ಇದರ ಭಾಗವಾಗಿಯೇ ಸರ್ಕಾರವು ಇಂದು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಡುವ ಬಲವಂತಕ್ಕೆ ಒಳಗಾಗಿದ್ದು, ಅಪರಾಧ ಪ್ರಜ್ಞೆಯಿಂದ ಬಳಲುತ್ತಿರುವ ಕಾಂಗ್ರೇಸ್ ನಾಯಕರು ತಾವು ಹೀಗೆ ಮಾಡದಿರುತ್ತಿದ್ದರೆ ಜಾಗತಿಕ ಮಟ್ಟದಲ್ಲಿ ಭಾರತದ ವಿಶ್ವಾಸಾರ್ಹತೆಗೆ ಚ್ಯುತಿ ಬರಬಹುದಿತ್ತು ಎಂದು ಪರಿತಪಿಸುತ್ತಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಮಾಧವ ಅವರು ಹೇಳಿದರು. ಅವರು 'ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ'ಯ ಕುರಿತು ಮಂಗಳೂರು ನಗರದ ಹ್ಯಾಮಿಲ್ಟನ್ ವೃತ್ತದ ಬಳಿಯಿರುವ 'ವಿಕಾಸ' ಕಚೇರಿಯಲ್ಲಿ ಜರುಗಿದ ವಿಚಾರಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ವಾಲ್‌ಮಾರ್ಟ್‌ನಂತಹ ವಿದೇಶಿ ದಿಗ್ಗಜಗಳು ಭಾರತದ ಚಿಲ್ಲರೆ ಮಾರುಕಟ್ಟೆಯನ್ನು ಪ್ರವೇಶಿಸಿದರೆ ಸುಮಾರು 4 ಕೋಟಿ ಜನರು ಉದ್ಯೋಗ ಕಳಕೊಳ್ಳಲಿದ್ದಾರೆ ಎಂದು ಅವರು ಆತಂಕ ವ್ಯಕ್ತ ಪಡಿಸಿದರು.


ವರದಿ : ವಾ.ಉ.

ವಿದೇಶಿ ನೇರ ಹೂಡಿಕೆಯ ಕುರಿತು ಕಾಂಗ್ರೇಸ್ ಮತ್ತು ಬಿಜೆಪಿಯ ಎಡಬಿಡಂಗಿ ನೀತಿಗಳನ್ನು ಪಟ್ಟಿ ಮಾಡುತ್ತಾ 1980 ದಶಕದಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರು ಭಾರತವನ್ನು 21 ನೇ ಶತಮಾನಕ್ಕೆ ಕೊಂಡು ಹೋಗುವ ಅಬ್ಬರದ ಪ್ರಚಾರಗಳೊಂದಿಗೆ ವಿದೇಶಿ ಸರಕುಗಳಿಗೆ ಬಾಗಿಲು ತೆರೆದಾಗ ವಿದೇಶಗಳಿಂದ ಭಾರತಕ್ಕೆ ಸರಕುಗಳ ಮಹಾಪೂರವೇ ಹರಿಯಿತು. ಇದರಿಂದಾಗಿ ವಿದೇಶಿ ವಿನಿಮಯದ ಕೊರತೆ ಉಂಟಾಗಿ 'ಪಾವತಿ ಬಾಕಿ' (Balance of payment) ಬಿಕ್ಕಟ್ಟು ಉದ್ಭವಿಸಿತು. ಈ ಬಿಕ್ಕಟ್ಟಿನಿಂದ ಹೊರ ಬರಲು ಭಾರತ ಸರ್ಕಾರವು 1990ರಲ್ಲಿ 47 ಟನ್ ಚಿನ್ನವನ್ನು ವಿದೇಶದಲ್ಲಿ ಒತ್ತೆ ಇಟ್ಟಿತು. 2002 ರಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರವು ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಲು ತೀರ್ಮಾನಿಸಿದಾಗ ಕಾಂಗ್ರೇಸ್ ಪಕ್ಷವನ್ನೂ ಒಳಗೊಂಡು ಎಲ್ಲಾ ವಿರೋಧ ಪಕ್ಷಗಳೂ ವಿರೋಧಿಸಿದ ಕಾರಣ ಆ ಪ್ರಸ್ತಾಪವನ್ನು ಕೈ ಬಿಡಲಾಯಿತು. 2004 ರ ಚುನಾವಣೆಯ ಸಂದರ್ಭದಲ್ಲಿ ಎನ್.ಡಿ.ಎ. ಬಿಡುಗಡೆ ಮಾಡಿದ ಮುನ್ನೋಟ ದಸ್ತಾವೇಜು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಸಮರ್ಥಿಸಿತ್ತು. ಕಾಂಗ್ರೇಸ್ ನೇತೃತ್ವದ ಯುಪಿಎ1 ರ ಅವಧಿಯಲ್ಲಿ ಮತ್ತೊಮ್ಮೆ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಬರಮಾಡಿಕೊಳ್ಳುವ ಪ್ರಯತ್ನ ನಡೆಯಿತು. ಆದರೆ ಎಡ ಪಕ್ಷಗಳ ಪ್ರಬಲ ವಿರೋಧದಿಂದಾಗಿ ಈ ಪ್ರಯತ್ನವನ್ನು ಕೈಬಿಡಲಾಯಿತು ಎಂದು ಅವರು ವಿವರಿಸಿದರು.

ವಿದ್ಯಾರ್ಥಿ ನಾಯಕ ಜೀವನ್ ರಾಜ್ ಕುತ್ತಾರು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಡಿವೈಎಫ್‌ಐ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಕಾರ್ಯದರ್ಶಿ ವಾಸುದೇವ ಉಚ್ಚಿಲ್ ಉಪಸ್ಥಿತರಿದ್ದರು.

ಆನಗಳ್ಳಿ : ಮನೆ, ನಿವೇಶನ ರಹಿತರಿಂದ ಪಂಚಾಯತ್ ಮುತ್ತಿಗೆ

ಕುಂದಾಪುರ ತಾಲೂಕು ಆನಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಹೋರಾಟ ಸಮಿತಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ – ಆನಗಳ್ಳಿ, ಕಳಂಜಿ ಹಾಗೂ ಹೇರಿಕುದ್ರು ಪ್ರದೇಶದ ನಿವೇಶನ ರಹಿತರಿಂದ ಸ್ವೀಕರಿಸಿದ 223 ಅರ್ಜಿಗಳನ್ನು ಸರಕಾರಿ ನಿವೇಶನ ಸ್ಥಳ ಹಕ್ಕು ಪತ್ರ ಮಂಜೂರಾತಿ ಒತ್ತಾಯಿಸಿ ನಿವೇಶನ ರಹಿತರು ಬೃಹತ್ ಸಮಾವೇಶದ ಮೂಲಕ ಆನಗಳ್ಳಿ ಗ್ರಾಮ ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿ ಸರಕಾರವನ್ನು ಒತ್ತಾಯಿಸಿದರು.



ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ನಿವೇಶನ ರಹಿತರ ಸಮಾವೇಶದಲ್ಲಿ ಮಾತನಾಡುತ್ತಾ – ಸರಕಾರಿ ಸ್ಥಳವನ್ನು ಗುರುತಿಸಿ ನಿವೇಶನ ರಹಿತರಿಗೆ ಹಕ್ಕುಪತ್ರ ಮಂಜೂರು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು, ತಾಲೂಕಿನಾದ್ಯಂತ ಗ್ರಾಮ ಪಂಚಾಯತ್ ಮಟ್ಟದಲ್ಲಿ ನಿವೇಶನ ರಹಿತರ ಸಮಾವೇಶವನ್ನು ಸಂಘಟಿಸಿ, ನಿವೇಶನ ಹಕ್ಕು ಪತ್ರಕ್ಕಾಗಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಹೇಳಿದರು. ಆನಗಳ್ಳಿ ಗ್ರಾಮದಲ್ಲಿರುವ ಸರಕಾರಿ ಸ್ಥಳ ಸ.ನಂ. 217/1 ವಿಸ್ತೀರ್ಣ 9.68 ಎಕ್ರೆಯನ್ನು ಬಡ ನಿವೇಶನ ರಹಿತರಿಗೆ ವಿತರಿಸುವಂತೆ ಗ್ರಾಮ ಪಂಚಾಯತ್ ವಸತಿ ಸಮಿತಿಯಲ್ಲಿ ನಿವೇಶನ ರಹಿತರ ಅಂತಿಮ ಪಟ್ಟಿ ಸಿದ್ಧಪಡಿಸಿ, ಸೂಕ್ತ ಕ್ರಮ ಕೈಗೊಳ್ಳಲು ತಾಲೂಕು ಪಂಚಾಯತ್‌ಗೆ ಕಳುಹಿಸುವುದಕ್ಕೆ ಸಮಾವೇಶದಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ವೆಂಕಟೇಶ್ ಕೋಣಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಗಳ ರಾಜ್ಯ ಸಮಿತಿಯ ಕರೆಯ ಮೇರೆಗೆ ನವೆಂಬರ್ 5 ರಂದು ರಾಜ್ಯಾದ್ಯಂತ ಜರಗುವ ಜಿಲ್ಲಾ ಮತ್ತು ತಾಲೂಕು ಮಟ್ಟದ ನಿವೇಶನ ರಹಿತರ 'ಜೈಲ್ ಭರೋ' ಹೋರಾಟ ಕಾರ್ಯಕ್ರಮವನ್ನು ಕುಂದಾಪುರದಲ್ಲೂ ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕುವುದರ ಮೂಲಕ 'ಜೈಲ್ ಭರೋ' ಹೋರಾಟವನ್ನು ಯಶಸ್ವಿಗೊಳಿಸಲು ಸಮಾವೇಶದಲ್ಲಿ ತೀರ್ಮಾನಿಸಲಾಯಿತು. ಮನೆ, ನಿವೇಶನ ರಹಿತ ಅರ್ಜಿದಾರರಿಂದ ಸ್ವೀಕರಿಸಿದ ಅರ್ಜಿಗಳನ್ನು, ಸರಕಾರಿ ನಿವೇಶನ ಸ್ಥಳ ಮಂಜೂರಾತಿಗೆ ಒತ್ತಾಯಿಸಿ ನಿವೇಶನ ರಹಿತರು ಗ್ರಾಮ ಪಂಚಾಯತ್ ಅಧ್ಯಕ್ಷ ಎಚ್. ಗಂಗಾಧರ್ ಶೆಟ್ಟಿ ರವರಿಗೆ ಸಾಮೂಹಿಕವಾಗಿ ಹಸ್ತಾಂತರಿಸಿದರು.

ಆನಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಅರ್ಜಿಗಳನ್ನು ಪರಿಶೀಲಿಸಿ, ನಿವೇಶನ ರಹಿತರ ಅಂತಿಮ ಪಟ್ಟಿಯನ್ನು ಆಯ್ಕೆ ಮಾಡಿ ಸೂಕ್ತ ಕ್ರಮಕ್ಕಾಗಿ ಕುಂದಾಪುರ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾ[illegible] ಕಳುಹಿಸಲಾಗುವುದು ಹಾಗೂ ಆನಗಳ್ಳಿಯ ಸರಕಾರಿ ಸ್ಥಳವನ್ನು (ಸ.ನಂ. 217/1 – 9.68 ಎಕ್ರೆ) ಗುರುತಿಸಿ ಸ್ಥಳೀಯ ನಿವೇಶನ ರಹಿತರಿಗೆ ಮಂಜೂರು ಮಾಡಲು . ಸರಕಾರವನ್ನು ಒತ್ತಾಯಿಸಲಾಗುವುದು ಎಂದು ಪಂಚಾಯತ್ ಅಧ್ಯಕ್ಷರು ಭರವಸೆ ನೀಡಿದರು.

ನಿವೇಶನ ರಹಿತರ ಸಮಾವೇಶವನ್ನು ಉದ್ದೇಶಿಸಿ ಕೋಟೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ, ಹಾಲಿ ಪಂಚಾಯತ್ ಸದಸ್ಯ ಕರಿಯ ದೇವಾಡಿಗ, ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹ ಮಾತನಾಡಿದರು. ಆನಗಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಆನಗಳ್ಳಿ ಶಂಕರ, ವಡೇರಹೋಬಳಿ ಶಂಕರ ಉಪಸ್ಥಿತರಿದ್ದರು. ಶಂಕರ ಆನಗಳ್ಳಿ ಕಾರ್ಯಕ್ರಮ ನಿರೂಪಿಸಿದರು. ಶಂಕರ ಎ. ಸಭೆಗೆ ವಂದಿಸಿದರು.

ವರದಿ : ವೆಂಕಟೇಶ್ ಕೋಣಿ.

ಬಿ.ಸಿ.ರೋಡ್‌ನಲ್ಲಿ ನಿವೇಶನ ರಹಿತರ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ಬಂಟ್ವಾಳ ತಾಲೂಕು ಸಮಿತಿಯ ಆಶ್ರಯದಲ್ಲಿ ಮನೆ ನಿವೇಶನ, ಹಕ್ಕುಪತ್ರ ಮತ್ತು ಅಕ್ರಮ ಸಕ್ರಮೀಕರಣಕ್ಕೆ ಆಗ್ರಹಿಸಿ ಸಪ್ಟೆಂಬರ್ 25 ರಂದು ಬಿ.ಸಿ.ರೋಡಿನಲ್ಲಿ ಭೂ ರಹಿತರ ಸಮಾವೇಶವನ್ನು ನಡೆಸಲಾಯಿತು.

ಸಮಾವೇಶವನ್ನು ಉದ್ಘಾಟಿಸಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಆರ್.ಶ್ರೀಯಾನ್ ಮಾತನಾಡಿದರು. ಹಲವು ವರ್ಷಗಳಿಂದ ಸರಕಾರಿ ಭೂಮಿಯಲ್ಲಿ ಅನಿವಾರ್ಯವಾಗಿ ವಾಸವಾಗಿರುವ ಬಡಜನರಿಗೆ ಹಕ್ಕುಪತ್ರ ನೀಡಲು ಮೀನಾಮೇಷ ಎಣಿಸುತ್ತಿರುವ ಸರಕಾರ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬೇಕಾಬಿಟ್ಟಿ ಭೂಮಿ ನೀಡುತ್ತಿದೆ ಎಂದು ಅವರು ಟೀಕಿಸಿದರು. ಈ ನೆಲದ ಬಡ ಬಗ್ಗರ ಬಗ್ಗೆ ಇಲ್ಲದ ಉದಾರತೆ ವಿದೇಶಿ ಕಂಪೆನಿಗಳ ಮೇಲೆ ಯಾಕಾಗಿ ನಮ್ಮ ಸರಕಾರಗಳು ತೋರ್ಪಡಿಸುತ್ತಿವೆ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಹಿರಿಯ ರೈತ ಕಾರ್ಮಿಕ ಮುಖಂಡ ಬಿ.ವಾಸು ಗಟ್ಟಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಉಪಾಧ್ಯಕ್ಷ ಹರಿದಾಸ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ರೈತ ಸಂಘದ ಮುಖಂಡರಾದ ವಾಸುದೇವ ಉಚ್ಚಿಲ, ಶೀನ ಬಂಗೇರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ತಾಲೂಕು ಸಮಿತಿ ಕಾರ್ಯದರ್ಶಿ ಬಿ.ನಾರಾಯಣ ಸ್ವಾಗತಿಸಿ, ವಂದಿಸಿದರು

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿಜೆಪಿಯ ಹಳೆಯ ಹುಲಿ ಈಗ ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವ ಮಾತಾಡುತ್ತಿರುವುದು ನಿಜಕ್ಕೂ ಒಂದು ವಿಪರ್ಯಾಸ. ಆದರೆ ಬಿಜೆಪಿಯ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ತಮ್ಮ ಲಿಖಿತ ಭಾಷಣದಲ್ಲಿನ ಇದಕ್ಕೆ ಸಂಬಂಧಪಟ್ಟ ಭಾಗಗಳನ್ನು ಏಕೆ ಅವರು ಓದದೇ ಬಿಟ್ಟರು ಎಂಬ ಬಗ್ಗೆ ಬಿಜೆಪಿಯಿಂದ ಅಧಿಕೃತ ವಿವರಣೆಯಂತೂ ಬಂದಿಲ್ಲ. ಜಾತ್ಯಾತೀತತೆಯ ಸೋಗು ಹಾಕುವ ಬಿಜೆಪಿಯ ಇಂತಹ ಪ್ರಯತ್ನಗಳ ಉದ್ದೇಶ ಆರೆಸ್ಸೆಸ್‌ನ ಸೈದ್ಧಾಂತಿಕ ಯೋಜನೆಯನ್ನು ಮುಂದೊಯ್ಯಲು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಳ್ಳಲಿಕ್ಕಾಗಿಯೇ ಎಂಬುದು ಸುಸ್ಪಷ್ಟ. ಇಂತಹ ಪ್ರಯತ್ನಗಳನ್ನು ಬಯಲಿಗೆಳೆಯಬೇಕು ಮತ್ತು ಸೋಲಿಸಲೂ ಬೇಕು.

ಬಿಜೆಪಿಯ ಹೊಸ ಮುಖವಾಡ
ಜಾತ್ಯಾತೀತತೆಯ ಕಪಟ ನಾಟಕ ಪ್ರದರ್ಶನ

ಸೀತಾರಾಂ ಯೆಚೂರಿ

ಕಳೆದ ವಾರ ಬಿಜೆಪಿಯ ರಾಷ್ಟ್ರೀಯ ಮಂಡಳಿಯ ಸಭೆಯ ಕಾಲದಲ್ಲಿ ಎನ್‌ಡಿಎ ಯನ್ನು ಬಾಧಿಸುತ್ತಿರುವ ವೈರುಧ್ಯ ಮತ್ತೆ ಎಲ್ಲರ ಗಮನ ಸೆಳೆದಿದೆ. ಪರಿಹರಿಸಲಾಗದ ಈ ವೈರುಧ್ಯ ಹೀಗಿದೆ: ಬಿಜೆಪಿಗೆ ಹೆಚ್ಚಿನ ಚುನಾವಣಾ ಬೆಂಬಲ ಗಿಟ್ಟಿಸಲು ಸಾಧ್ಯವಾಗುವುದು ಜನಗಳ ನಡುವೆ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಿದರೆ ಮಾತ್ರ. ಆದರೆ ಇದು ಅತ್ತ ಅದರ ಹಲವಾರು ಮಿತ್ರರನ್ನು ದೂರ ಸರಿಸುತ್ತದೆ. ಏಕೆಂದರೆ ಈ ಪ್ರಾದೇಶಿಕ ಪಕ್ಷಗಳು ಧಾರ್ಮಿಕ ಅಲ್ಪಸಂಖ್ಯಾತರನ್ನು, ಅದರಲ್ಲಿಯೂ ಮುಸ್ಲಿಮರನ್ನು ದೂರಮಾಡಿಕೊಳ್ಳಲಾರವು. ಈಗಾಗಲೇ ಇಂತಹ ಸದ್ದು ಎನ್‌ಡಿಎ ಒಳಗಿಂದ ಕೇಳಬಂದಿದೆ– ಜೆಡಿ(ಯು)ನ ಬಿಹಾರ ಮುಖ್ಯಮಂತ್ರಿಗಳು ನರೇಂದ್ರ ಮೋದಿಯವರನ್ನು ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸುವ ವಿಚಾರದಲ್ಲಿ ಗುಡುಗಿದ್ದಾರೆ.

ಈ ವೈರುಧ್ಯವನ್ನು ಮೀರಿ ನಿಲ್ಲಲು ಬಿಜೆಪಿಯ ಹಳೆಯ ಹುಲಿ ಎಲ್.ಕೆ.ಅಡ್ವಾಣಿಯವರು ಹೊಸದೊಂದು ಮುಖವಾಡ ಧರಿಸುವ ಪ್ರಯತ್ನ ಮಾಡಿದ್ದಾರೆ, ಅಂದರೆ ಬಿಜೆಪಿಯಿಂದ ಜಾತ್ಯಾತೀತತೆಯ ಪ್ರತಿಪಾದನೆ. ಯಾರ ನೇತೃತ್ವದ ರಥಯಾತ್ರೆ ತಾನು ಸಾಗಿದ ದಾರಿಯುದ್ದಕ್ಕೂ ಸಾವು-ನೋವಿನ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿ ಅಂತಿಮವಾಗಿ ಬಾಬ್ರಿ ಮಸೀದಿ ಧ್ವಂಸಕ್ಕೆ ಕಾರಣವಾಯಿತೋ ಅದೇ ಶ್ರೀಯುತ ಅಡ್ವಾಣಿ ಈಗ ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವ ಮಾತಾಡುತ್ತಿರುವುದು ನಿಜಕ್ಕೂ ವಿಪರ್ಯಾಸ. ಶ್ರೀಯುತ ಅಡ್ವಾಣಿಯವರು ತಮ್ಮ ಲಿಖಿತ ಭಾಷಣದಲ್ಲಿನ ಇದಕ್ಕೆ ಸಂಬಂಧಪಟ್ಟ ವಾಕ್ಯಗಳನ್ನು ಓದದಿದ್ದುದು ಅದಕ್ಕೆ ಅನುರೂಪವಾದದ್ದೇ ಸರಿ. ಈ ಮೂಲಕ ಅವರು ತಮ್ಮನ್ನು ಬಿಜೆಪಿ ಭೂತಕಾಲದಿಂದ ಪ್ರತ್ಯೇಕಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸೂಚನೆಯಂತೂ ಸ್ಪಷ್ಟವಾಗಿ ಸಿಗುತ್ತದೆ. ಸಂಬಂಧಪಟ್ಟ ಪರಿಚ್ಛೇದಗಳನ್ನು ಓದದಿರುವ ಮೂಲಕ ಅವರು ಭೀತರಾದರು ಎಂಬುದರ ಸೂಚನೆ ಮಾತ್ರವಲ್ಲ, ಬಿಜೆಪಿ ತನ್ನ ಕಟ್ಟಾ ಹಿಂದುತ್ವ ಅಜೆಂಡಾದಿಂದ ದೂರ ಸರಿಯಲು ಅಸಮರ್ಥವಾಗಿದೆ ಎಂಬುದರ ಸೂಚನೆಯನ್ನೂ ಕೊಟ್ಟಂತಾಗಿದೆ ಎಂಬ ಇಂಗಿತ ಮಾಧ್ಯಮಗಳ ವರದಿಗಳಲ್ಲಿ ಕಾಣ ಬಂದಿದೆ. ಶ್ರೀಯುತ ಅಡ್ವಾಣಿಯವರು ಈ ಭಾಗಗಳನ್ನು ಏಕೆ 'ಓದದೇ ಇದ್ದರು ಎಂಬ ಬಗ್ಗೆ ಬಿಜೆಪಿಯಿಂದ ಅಧಿಕೃತ ವಿವರಣೆಯಂತೂ ಬಂದಿಲ್ಲ.

ಏಕೆ ಓದದೆ ಬಿಟ್ಟರು?

ಈಗಲೂ, ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಕಣ್ಣೋಟದ ಆಧಾರದಲ್ಲಿಯೇ ಬಿಜೆಪಿ ಸುತ್ತ ಅಣಿನೆರೆಯುವ ಕಟ್ಟಾ ಬೆಂಬಲದ ನೆಲೆ ತಪ್ಪಿಹೋಗಬಹುದು ಎಂಬ ಭಯದಿಂದಲೇ ಅವರು ಈ ಪ್ಯಾರಾಗಳನ್ನು ಓದದೇ ಬಿಟ್ಟರು ಎಂಬುದಂತೂ ಸ್ಪಷ್ಟ.





ಲಿಖಿತ ಭಾಷಣದ ಓದದೇ ಇದ್ದ ಭಾಗಗಳು ಬಿಜೆಪಿ "ಜಾತ್ಯಾತೀತತೆಗೆ ನಮ್ಮ ಬದ್ಧತೆಯನ್ನು ಕಲ್ಪನಾಶೀಲವಾಗಿ ಪುನರ್ರೂಪಿಸಿಕೊಳ್ಳಬೇಕು" ಎಂದು ಕರೆ ನೀಡಿವೆ. ಈ ಆಧಾರದಲ್ಲಿ ತಮ್ಮ ಮಿತ್ರರಾಗಬಹುದಾದವರು "ಬಿಜೆಪಿಯೊಂದಿಗೆ ಪಾಲುದಾರರಾಗಲು ಭಯಪಡಬೇಕಾದ್ದು ಏನೂ ಇಲ್ಲ" ಎಂದು ಮನವಿ ಮಾಡಲಾಗಿದೆ. ಇಂತಹ ಮನವಿಗಳು, ಕೇಂದ್ರದಲ್ಲಿ ಒಂದು ಸರಕಾರ ರಚಿಸಲು ಅಗತ್ಯವಾದ ಸಂಖ್ಯೆಯನ್ನು ಗಳಿಸುವ ಕಣ್ಕಟ್ಟುಗಳಷ್ಟೇ ಎಂಬುದು ಕೂಡ ಬೇಗನೇ ಸ್ಪಷ್ಟವಾಗಿದೆ–" ಈ ಸನ್ನಿವೇಶದಲ್ಲಿ ನೀತಿಗಳಲ್ಲಿ ದೃಢತೆಯೊಂದಿಗೆ ಕಾರ್ಯತಂತ್ರದಲ್ಲಿ ಒಂದು ರೀತಿಯ ಮೆದುತನ ಬೇಕಾಗುತ್ತದೆ" ಎಂಬ ಅವರ ಪದಗಳಲ್ಲೇ. ಕಾರ್ಯತಂತ್ರಗಳು ಮಿತ್ರಪಕ್ಷಗಳನ್ನು ಮತ್ತು ಜನತೆಯನ್ನು ದಾರಿ ತಪ್ಪಿಸಲು, ಹಾಗೂ ನೀತಿಗಳು ಎಂದರೆ ಆರೆಸ್ಸೆಸ್‌ನ 'ಹಿಂದೂ ರಾಷ್ಟ್ರ' ಅಜೆಂಡಾದ ಬೀಜಸೂತ್ರ.

'ರಥಯಾತ್ರಿಕ'ನ ಬಾಯಿಂದಲೇ...?

ಅಲ್ಪಸಂಖ್ಯಾತರ ತುಷ್ಟೀಕರಣದ ಒಂದು ರೀತಿಯ ಉಲ್ಟಾ ಮಾದರಿಯಲ್ಲಿ ಶ್ರೀಯುತ ಅಡ್ವಾಣಿ ಜಗತ್ತಿನ ವಿವಿಧ ಭಾಗಗಳಲ್ಲಿ ಹಿಂಸಾಚಾರಗಳನ್ನು ಉದ್ರೇಕಿಸಿದ ಇಸ್ಲಾಮ್-ವಿರೋಧಿ ಚಲಚ್ಚಿತ್ರವನ್ನು ಖಂಡಿಸಿದರು. ಭಾರತದ ನಿರ್ದಿಷ್ಟ ಸಂದರ್ಭದ ಬಗ್ಗೆ ಹೇಳುತ್ತಾ ಅವರು "ಈ ಮತದ ಸದಸ್ಯರು ಆರಾಧಿಸುವ ಯಾರ ಬಗ್ಗೆಯಾಗಲೀ ಅಗೌರವ ಹರಡಿಸುವುದು ತಪ್ಪು. ನಾವು, ನಮ್ಮ ವೈವಿಧ್ಯತೆಯ ಸಮಾಜದಲ್ಲಿ ವಿವಿಧ ವಿಭಾಗಗಳೊಡನೆ ವ್ಯವಹರಿಸುವಾಗ ಯಾವುದೇ ಪಕ್ಷಪಾತ ಅಥವ ಅನ್ಯಾಯಕ್ಕೆ ಆಸ್ಪದ ಕೊಡುವುದಿಲ್ಲ ಎಂದು ಅಲ್ಪಸಂಖ್ಯಾತ ಸಮುದಾಯಗಳ ಸೋದರರಿಗೆ ಸಂಪೂರ್ಣ ದೃಢಭಾವದಿಂದ ಭರವಸೆ ಕೊಡುತ್ತೇವೆ" ಎಂದಿದ್ದಾರೆ. ಬಾಬ್ರಿ ಮಸೀದಿ ಇದ್ದ ಜಾಗದಲ್ಲೇ ರಾಮ ದೇವಸ್ಥಾನ ಕಟ್ಟುತ್ತೇವೆ ಎಂಬ ವಿಷಯದ ಆಧಾರದಲ್ಲಿಯೇ ರಥಯಾತ್ರೆಗೆ ನೇತೃತ್ವ ನೀಡಿದಾತನ ಬಾಯಿಂದಲೇ ಎಂತಹ ಮಾತುಗಳು! 'ಬಾಬರ್ ಕೀ ಔಲಾದ್'(ಬಾಬರನ ಸಂತಾನ) ಎಂಬಿತ್ಯಾದಿ ಆಗಿನ ಉನ್ಮತ್ತ ಘೋಷಣೆಗಳನ್ನೂ ನೆನಪಿಸಿಕೊಳ್ಳಿ!

ಇವೆಲ್ಲಾ, ಹೇಗಾದರೂ ಮಾಡಿ ಜನತೆ ಮತ್ತು ಪ್ರಾದೇಶಿಕ ಪಕ್ಷಗಳಲ್ಲಿ ತಮ್ಮ ಮಿತ್ರರಾಗಬಹುದಾದವರನ್ನು ದಾರಿ ತಪ್ಪಿಸಿ, ಮುಂಬರುವ ಸಾರ್ವತ್ರಿಕ ಚುನಾವಣೆಗಳ ನಂತರದ ಲೋಕಸಭೆಯಲ್ಲಿ ಒಂದು ಬಹುಮತಕ್ಕೆ ಬೆಂಬಲ ಗಿಟ್ಟಿಸುವ ಪ್ರಯತ್ನಗಳೆಂಬುದು ಸುಸ್ಪಷ್ಟ ಇಂತಹ ನಿರೀಕ್ಷೆಗಳು ವಿಫಲವಾಗಿಯೇ ಆಗುತ್ತವೆ ಎಂಬುದು ಆ ಸಭೆಯಲ್ಲಿಯೇ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಸ್ಥಾನಮಾನದಿಂದ ಕಂಡುಬಂತು. ಏನೇ ಹೇಳಿಕೊಂಡರೂ, ಈಗ ಗುಜರಾತಿನ ವಿಧಾನಸಭಾ ಚುನಾವಣೆಗಳ ಪ್ರಕಟಣೆಯಾಗಿದ್ದು, ಡಿಸೆಂಬರಿನಲ್ಲಿ ಅದರ ಫಲಿತಾಂಶಗಳೇ ಬಹುಮಟ್ಟಿಗೆ ಬಿಜೆಪಿ/ಆರೆಸ್ಸೆಸ್‌ನ ಆಯ್ಕೆಯ ಮೇಲೆ ಪ್ರಭಾವ ಬೀರುತ್ತವೆ. ಇಂತಹ ಸನ್ನಿವೇಶದಲ್ಲಿ ಬಿಜೆಪಿ ಮತ್ತಷ್ಟು ಪ್ರತ್ಯೇಕಗೊಳ್ಳುವ ಒಂದು ಸನ್ನಿವೇಶ ಬರಬಹುದೆಂಬ ಸಂದೇಹದಿಂದಲೇ, ನಂತರ ಒಂದು ಸಂದರ್ಭದಲ್ಲಿ ಶ್ರೀಯುತ ಅಡ್ವಾಣಿಯವರು ಬಿಜೆಪಿ ಎದುರಿಸುತ್ತಿರುವ ಒಂದು ರೀತಿಯ ರಾಜಕೀಯ ಅಸ್ಪೃಶ್ಯತೆಯನ್ನು ಕ್ರಿಮಿನಲ್ ಅಪರಾಧವಾಗಿ ಮಾಡಬೇಕು ಎಂದಿದ್ದಾರೆ!

ದಾರಿ ತಪ್ಪಿಸುವ ಕುಯುಕ್ತಿ

ಬಿಜೆಪಿ ಈ ರೀತಿಯಲ್ಲಿ ಎಲ್ಲರಿಂದ ಪ್ರತ್ಯೇಕಗೊಳ್ಳುತ್ತಿದ್ದರೆ ಅದಕ್ಕೆ ಕಾರಣ, ಅದು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರಕ್ಕೆ ಸಂಪೂರ್ಣ ವ್ಯತಿರಿಕ್ತವಾದ ಒಂದು ಅಜೆಂಡಾವಿರುವ ಆರೆಸ್ಸೆಸ್‌ನ ರಾಜಕೀಯ ಅಂಗವಾಗಿರುವುದು. ಈಗಿನ ಈ ಪ್ರಯತ್ನ ಬಿಜೆಪಿಯ ಸೈದ್ಧಾಂತಿಕ ನಿಲುವುಗಳಲ್ಲಾಗಲೀ, ಆರೆಸ್ಸೆಸ್‌ನ ಯೋಜನೆಯಲ್ಲಾಗಲೀ ಸ್ಪಷ್ಟತೆಯ ಅಭಾವವನ್ನೇನೂ ಬಿಂಬಿಸುತ್ತಿಲ್ಲ. ಬದಲಿಗೆ ಇದು ಜನತೆಯನ್ನು ಮತ್ತು ತನ್ನ ರಾಜಕೀಯ ಮಿತ್ರರಾಗಬಹುದಾದವರನ್ನು ದಾರಿ ತಪ್ಪಿಸುವ ಅದರ ಕುಯುಕ್ತಿಯ ಪ್ರಯತ್ನವಷ್ಟೇ.

ಬಿಜೆಪಿಯನ್ನು ಈ ಚಾಣಕ್ಯ ಕಸರತ್ತುಗಳಷ್ಟೇ ಅಲ್ಲ, ಹಿಂದಿನ ದಿನಗಳಲ್ಲಿ ಕಂಡು ಬರದಿದ್ದ ಸಂಘಟನಾ ಸಮಸ್ಯೆಗಳೂ ಬಾಧಿಸುತ್ತಿವೆ. ಕರ್ನಾಟಕ ಬಿಜೆಪಿಯ ಬಲಿಷ್ಟ ವ್ಯಕ್ತಿ ಮತ್ತು ರಾಜ್ಯದ ಮಾಜೀ ಮುಖ್ಯಮಂತ್ರಿ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಹಾಜರಾಗದೆ, ಬಿಜೆಪಿ ಅಧ್ಯಕ್ಷರಿಗೆ ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ ಬಿಜೆಪಿ ಅಧ್ಯಕ್ಷರದ್ದು ತನ್ನಂತವರು ಜನತೆಗೆ ನೀಡಿದ ವಚನಗಳನ್ನು ಪಾಲಿಸಲಾರದ ನೇತೃತ್ವ ಎಂದು ಖಂಡಿಸಿದ್ದಾರೆ. ಆ ಪತ್ರವನ್ನು ಪತ್ರಿಕಾ ಸಮ್ಮೇಳನವೊಂದರಲ್ಲಿ ಬಿಡುಗಡೆ ಮಾಡುತ್ತಾ, "ಒಂದೆಡೆ ನೀವು ಉನ್ನತ ತತ್ವಗಳ ಮಾತಾಡುತ್ತೀರಿ. ಆದರೆ ನೀವು ನಡೆದುಕೊಳ್ಳುತ್ತಿರುವ ಬಗೆಯಾದರೂ ಏನು?" ಎಂದು ಅವರು ಬಿಜೆಪಿ ಅಧ್ಯಕ್ಷರನ್ನು ಕೇಳಿದ್ದಾರೆ.

ಜಾತ್ಯಾತೀತತೆಯ ಸೋಗು ಹಾಕುವ ಬಿಜೆಪಿಯ ಇಂತಹ ಪ್ರಯತ್ನಗಳ ಉದ್ದೇಶ ಆರೆಸ್ಸೆಸ್‌ನ ಸೈದ್ಧಾಂತಿಕ ಯೋಜನೆಯನ್ನು ಮುಂದೊಯ್ಯಲು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಳ್ಳಲಿಕ್ಕಾಗಿಯೇ. ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿ ಯನ್ನು ಕಾಪಾಡಿಕೊಂಡು, ಅದನ್ನು ಬಲಪಡಿಸಬೇಕಾದರೆ ಇಂತಹ ಪ್ರಯತ್ನಗಳನ್ನು ಬಯಲಿಗೆಳೆಯಬೇಕು ಮತ್ತು ಸೋಲಿಸಲೂ ಬೇಕು.



ಉತ್ತಮ ಭಾರತಕ್ಕಾಗಿ ಯುವಜನತೆಯ ಐಕ್ಯತೆಗೆ ಸಂಕಲ್ಪ

ಕೇಂದ್ರ ಸರ್ಕಾರ ಕೇವಲ ಬಂಡವಾಳಿಗರ ಪರವಾದ ಆರ್ಥಿಕ ಧೋರಣೆಗಳನ್ನು ತಾಳುತ್ತಿರುವುದರಿಂದ ಯುಜನತೆಯ ಸಂಕಷ್ಟಗಳು ದಿನೇ ದಿನೇ ಹೆಚ್ಚುತ್ತಿವೆ. ಇತ್ತ ರಾಜ್ಯದಲ್ಲಿ ಭೀಕರ ಬರ ರಾಜ್ಯದಾದ್ಯಂತ ಆವರಿಸಿಕೊಂಡಿದೆ. ಕುಡಿಯುವ ನೀರಿನ ಬರ ನಗರ–ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರ ಮತ್ತು ಕೃಷಿಕೂಲಿಕಾರರ ಬವಣೆ. ನಗರಗಳಲ್ಲಿ ಬಡ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಜೀವಗಳು ಶೋಷಣೆ ಹೆಚ್ಚುತ್ತಿದೆ. ಇಂಥ ಸಂದರ್ಭದಲ್ಲಿ ಜನ ಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಗಮನ ಕೊಡದ ಬಿಜೆಪಿ ಅಧಿಕಾರಕ್ಕಾಗಿ ಪರಸ್ಪರ ಕಚ್ಚಾಡಿಕೊಂಡು, ಎಸಗಿರುವ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು ಕೋಮುಗಲಭೆಗಳನ್ನು ಸೃಷ್ಟಿಸುತ್ತಿದೆ. ಅಧಿಕಾರಕ್ಕಾಗಿ ಇಡೀ ಯುವಜನತೆಯನ್ನು ದಿಕ್ಕು ತಪ್ಪಿಸಿ ವಂಚಿಸುವಂತಹ ನೀತಿಗಳನ್ನು ಎಗ್ಗಿಲ್ಲದೆ ತರುತ್ತಿದೆ. ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಯುವಜನರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನಗಳು ವ್ಯಾಪಕವಾಗಿವೆ. ಇಂಥಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲೇ ಡಿ.ವೈ.ಎಫ್.ಐ 9 ನೇ ಅಖಿಲ ಭಾರತ ಸಮ್ಮೇಳನವನ್ನು ನಡೆಸುವುದು ಸೂಕ್ತವೆಂದು ತೀರ್ಮಾನಿಸಲಾಗಿತ್ತು.

ಸ್ವಾಗತ ಸಮಿತಿ ರಚನೆ ಸಂದರ್ಭದಲ್ಲೇ ಸಮ್ಮೇಳನದ ಯಶಸ್ಸನ್ನು ಖಾತರಿಗೊಳಿಸಿದ ಕರ್ನಾಟಕ:

ರಾಜ್ಯದಲ್ಲಿ ಪ್ರಥಮ ಭಾರಿಗೆ ಯುವಜನ ಸಮ್ಮೇಳನ ನಡೆಯುತ್ತಿದೆ. ರಾಜ್ಯಧ ಯುವಜನರ ಪಾಲಿಗೆ ಒಂದು ಅವಕಾಶ. ಇಂದಿನ ಅರಾಜಕೀಯ ಮತ್ತು ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯಲ್ಲಿ ಸಮಗ್ರ ಕಣ್ಣೋಟ ಮತ್ತು ವೈಜ್ಞಾನಿಕ ಮನೋಭಾವದೊಂದಿಗೆ, ಬದ್ಧತೆಯಿಂದ ದೇಶದ ಏಳ್ಗೆಗಾಗಿ ಶ್ರಮಿಸುತ್ತಿರುವ ಡಿವೈಎಫ್ಐ ನ ಅಖಿಲ ಭಾರತ ಸಮ್ಮೇಳನ ನಮ್ಮ ಬೆಂಗಳೂರಿನಲ್ಲಿ ಯಶಸ್ವಿಗೊಳಿಸೋಣ. ಸಮ್ಮೇಳನದ ನಿರ್ಣಯಗಳು ಯುವಭಾರತವನ್ನು ಎಚ್ಚರಿಸಲಿ ಎಂಬ ಆಶಯದೊಂದಿಗೆ ಏಪ್ರಿಲ್ 1, 2012 ರಂದು ರಚನೆಗೊಂಡ ಸ್ವಾಗತ ಸಮಿತಿಯು ಸೆಪ್ಟೆಂಬರ್ 11–15, 2012 ರಂದು ಜರುಗಿದ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿ ದೇಶಾದ್ಯಂತ ಯುವಜನತೆಯನ್ನು ಪ್ರತಿನಿಧಿಸಿ ಬಂದಿದ್ದ ಪ್ರತಿನಿಧಿಗಳಿಂದ ಮತ್ತು ಬಾಗವಹಿಸಿದ್ದ ಎಲ್ಲರಿಂದಲೂ ಮೆಚ್ಚುಗೆಯನ್ನು ಗಳಿಸಿತು.

ಮೂರು ತಿಂಗಳು ಮುಂಚಿತವಾಗಿಯೇ ಗೋಡೆ ಬರಹ. ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಜನರ ಪಾತ್ರ, ಜನಪರ ಚಳುವಳಿಯಲ್ಲಿ ಮಾಧ್ಯಮಗಳ ಪಾತ್ರ, ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಪೂರಕ ಯೋಜನೆಗಳು. ವರದಕ್ಷಿಣೆ ವಿರುದ್ಧದ ಹೋರಾಟದಲ್ಲಿ ಯುವಜನರ ಪಾತ್ರ, ಹೀಗೆ ಹಲವಾರು ವಿಚಾರಗಳ ಕುರಿತು ವಿಚಾರ ಸಂಕಿರಣಗಳು. ರಾಜ್ಯದಾದ್ಯಂತ ವಿವಿಧ ವೈವಿಧ್ಯಮಯ ಕಾರ್ಯಕ್ರಮಗಳು. ರಕ್ತದಾನ ಶಿಬಿರಗಳು. ಕ್ರೀಡಾ ಕೂಟಗಳು. ಬೈಕ್ ಜಾಥಾಗಳು ಹೀಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಸಮ್ಮೇಳನಕ್ಕೆ ಪೂರಕವಾಗಿ ಅಯೋಜಿಸಲಾಗಿತ್ತು.

ಆರಂಭದಲ್ಲಿ ಮಿತಿಯಾಗಿಯೇ ಸಮ್ಮೇಳನದ ತಯಾರಿ ಕೆಲಸಗಳು ನಡೆದಿದ್ದರೂ ನಂತರದಲ್ಲಿ ಎಲ್ಲವೂ ವೇಗಗೊಂಡು ಸಮ್ಮೇಳನವನ್ನು ನಡೆಸಲು ಬೆಂಗಳೂರು ಸಿದ್ಧಗೊಂಡಿತು. ಸಾವಿರ ಜನಕ್ಕೆ ಊಟ–ವಸತಿ, ಸಾರಿಗೆ ಹಾಗೂ ಪ್ರಚಾರ ಮತ್ತು ವಿದೇಶಗಳ ಸೌಹಾರ್ದ ಪ್ರತಿನಿಧಿಗಳಿಗೆ ಅತಿಥ್ಯ ಮತ್ತು ಸಮ್ಮೇಳನದಲ್ಲಿ ಭಾಗವಹಿಸುವ ಎಲ್ಲಾ ಗಣ್ಯರಿಗೆ ಸ್ವಾಗತ, ವ್ಯವಸ್ಥೆ ಇತ್ಯಾದಿಯನ್ನು ಸ್ವಾಗತ ಸಮಿತಿಯು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಬಂದ ಹೆಮ್ಮೆಯ ನೆನಪು ಮತ್ತೊಮ್ಮೆ ಮತ್ತೊಮ್ಮೆ ಮರುಕಳಿಸುತ್ತಿದೆ.

ಯುವಜನತೆಯ ಐಕ್ಯತೆಯನ್ನು ಪ್ರತಿಬಿಂಬಿಸಿದ ಯುವಜನ ರ್‍ಯಾಲಿ:

ಪುಟ್ಟ ಮಕ್ಕಳು ಹೊತ್ತ ಬೃಹತ್ ಗಾತ್ರದ ಡಿವೈಎಫ್ಐ ನ ಬಾವುಟ: ಕೋಮುವಾದಿಗಳ ಮತ್ತು ಪಟ್ಟಭದ್ರರ ಅಟ್ಟಹಾಸಕ್ಕೆ ಬಲಿಯಾದ ವೀರ ಯೋಧರ ಸ್ಮರಣೆ ಮತ್ತು ಅವರ ಭಾವಚಿತ್ರಗಳು. ಜಾನಪದ ತಮಟೆ ವಾದ್ಯಗಳು. ಕೊಡಗು, ಮಂಗಳೂರು, ಬಳ್ಳಾರಿ, ಕೋಲಾರ ಮೊದಲಾದ ಜಿಲ್ಲೆಗಳಿಂದ ಬಂದಿದ್ದ ವೈವಿಧ್ಯಮಯ ಸಾಂಸ್ಕೃತಿಕ ಅನಾವರಣಗಳು. ವಿವಿಧ ವಾದ್ಯಮೇಳಗಳು ಸಂಗೀತ ಮತ್ತು ನೃತ್ಯ, ಧ್ವನಿಗಳು ಮೊಳಗುತ್ತಿದ್ದವು. ಇವುಗಳ ಜೊತೆಗೆ ಸಾಲು ಸಾಲಾಗಿ ರಟ್ಟೆಗಳನ್ನೆತ್ತಿ ಸಾಮ್ರಾಜ್ಯ ಶಾಹಿ ವಿರುದ್ಧ, ಕೋಮುವಾದಿಗಳ ವಿರುದ್ಧ, ನಿರುದ್ಯೋಗ ವಿರುದ್ಧ, ದೇಶದ ಐಕ್ಯತೆಗಾಗಿ ಸಮಗ್ರತೆಗಾಗಿ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಡಿವೈಎಫ್ಐ ಶ್ವೇತ ಪತಾಕೆಗಳು ಮತ್ತು ಯುವಜನತೆಯ ಬೇಡಿಕೆಗಳ ಮತ್ತು ಹಕ್ಕೊತ್ತಾಯಗಳ ಫಲಕಗಳು. ಏನಿದು ಎಂದು ನೋಡಲು ನೆರೆದಿದ್ದವರಿಗೂ " ಅವು ನಮ್ಮವೇ ಆಗಿವೆ. ನಾನು ಹೋಗಿ ಸೇರುವೆ" ಅನಿಸಿ ಸಾರ್ವಜನಿಕರು ಬಂದು ಸೇರಿದ್ದು ಉಂಟು. ನಾನೂ ಈ ಯುವಜನ ಆಂದೋಲನದಲ್ಲಿ ಸೇರಬೇಕೆನ್ನುವ ಹಂಬಲ. ಹೀಗೆ ಸಾರ್ವಜನಿಕರನ್ನು ಆಕರ್ಷಿಸುವಂತಹ ರೀತಿಯಲ್ಲಿ ದೇಶದ ಎಲ್ಲಾ ರಾಜ್ಯಗಳನ್ನು ಪ್ರತಿನಿಧಿಸಿ ಬಂದಿದ್ದ ಸಾವಿರ ಪ್ರತಿನಿಧಿಗಳು. ವಿದೇಶಿ ಸೌಹಾರ್ದ ಪ್ರತಿನಿಧಿಗಳು ಕೇರಳ ಮತ್ತು ತಮಿಳು ನಾಡು ಸೇರಿದಂತೆ ನಮ್ಮ ರಾಜ್ಯವನ್ನು ಪ್ರತಿನಿಧಿಸಿ 10 ಸಾವಿರಕ್ಕೂ ಮೀರಿ ಯುವಜನ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಸಿ.ಐ.ಟಿ.ಯು. ಬ್ಯಾಂಕ್, ವಿಮಾ ನೌಕರರ ಸಂಘಟನೆಗಳು ಮತ್ತು ಭಾರತ ವಿದ್ಯಾರ್ಥಿ ಫೆಡರೇಶನ್ ಸೇರಿದಂತೆ ವಿವಿಧ ಸೋದರ ಸಂಘಟನೆಗಳ ಕಾರ್ಯಕರ್ತರು ಅಲ್ಲಲ್ಲಿ ನಿಂತು ರ್‍ಯಾಲಿಗೆ ಸ್ವಾಗತ ಕೋರಿದರು.



ಉದ್ಘಾಟನಾ ಸಮಾರಂಭದಲ್ಲಿ ಗಣ್ಯರು

ಯುವಜನರ ಸಶಕ್ತೀಕರಣಕ್ಕಾಗಿ ಸಜ್ಜಾಗಲು ಬಹಿರಂಗ ಸಭೆಯ ಕರೆ

ಕ್ಯಾ.ಲಕ್ಷ್ಮಿ ಸೆಹಗಲ್ ವೇದಿಕೆಯಾಗಿ ಶೃಂಗಾರ ಗೊಂಡಿದ್ದ ಭೂಮಿಕೆಯಲ್ಲಿ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸೀತಾರಾಂ ಯೆಚೂರಿಯವರು ಯುವಭಾರತದ ಭವಿಷ್ಯ ನಿರ್ಮಾಣಕ್ಕಾಗಿ ಯುಜನರೇ ಎದ್ದು ಬರಬೇಕು. ಯುವಭಾರತ ಕಂಗೆಟ್ಟಿದೆ. ನವ ಉದಾರೀಕರಣ ನೀತಿಗಳನ್ನು ಜಾರಿಗೆ ತಂದು ಇಂದು ಕೇವಲ ಶ್ರೀಮಂತರ ಸವಲತ್ತುಗಳನ್ನು ಇನ್ನಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ. ಆದರೆ 85 ಕೋಟಿಗೂ ಮೀರಿ ಭಾರತದ ಜನತೆ ಅದರಲ್ಲೂ ಯುವಜನತೆ ದಿನ ನಿತ್ಯದ ಜೀವನ ಸಾಗಿಸಲು ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮುಂದಿನ ತಮ್ಮ ಭವಿಷ್ಯಕ್ಕಾಗಿ ಯುವಜನತೆಯ ದೊಡ್ಡ ಆಂದೋಲನ ಎದ್ದು ಬರಬೇಕಿದೆ. ಈ ದಿಸೆಯಲ್ಲಿ ಡಿವೈಎಫ್ಐ ಮುಂದಾಗಲಿ ಎಂದು ಆಶಿಸಿದರು. ಡಿವೈಎಫ್ಐ ಮಾಜಿ ಅಖಿಲ ಭಾರತ ಅಧ್ಯಕ್ಷರಾದ ಎಂ.ಎ. ಬೇಬಿಯವರು, ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್. ದೊರೆಸ್ವಾಮಿ, ಜಿ.ವಿ.ಶ್ರೀರಾರೆಡ್ಡಿಯವರು, ಶ್ರೀರಾಮಕೃಷ್ಣನ್ ಮತ್ತು ತಪಸ್ ಸಿನ್ಹಾ ರವರು ಸ್ವಾಗತ ಸಮಿತಿಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿಯವರು ಹಾಗೂ ವಿದೇಶಿ ಪ್ರತಿನಿಧಿಗಳು ಮತ್ತು ಡಿವೈಎಫ್ಐ ನ ಅಖಿಲ ಭಾರತ ಮುಖಂಡರು ಉಪಸ್ಥಿತರಿದ್ದರು. ಬಿ.ರಾಜಶೇಖರಮೂರ್ತಿ ಸ್ವಾಗತ ಕೋರಿದರು ಮತ್ತು ನಿರೂಪಣೆಯನ್ನು ಎನ್.ಎಲ್. ಭರತ್ ರಾಜ್ ನಡೆಸಿದರು. ಬರಗೂರು ರಾಮಚಂದ್ರಪ್ಪ ವಿರಚಿತ, ವಿ. ಮನೋಹರ್‌ರವರ ಸಂಗೀತ ಸಂಯೋಜಿತ ಸ್ವಾಗತ ಗೀತೆಯನ್ನು ಯುವ ಹಾಡುಗಾರರ ಹಾಡನ್ನು ಹಾಡಿದರು. ಖ್ಯಾತ ಹೋರಾಟದ ಹಾಡುಗಾರ ಜೆನ್ನಿಯವರ ಹಾಡುಗಳು ಮತ್ತು ಲಿಂಗರಾಜುರವರ ವಂದನಾರ್ಪಣೆಯೊಂದಿಗೆ ಬಹಿರಂಗ ಸಭೆ ಅಂತ್ಯಗೊಂಡಿತು.

'ಉತ್ತಮ ಭಾರತ' ಕ್ಕಾಗಿ ಡಿವೈಎಫ್ಐ

ಸಮ್ಮೇಳನ ನಾಂದಿಯಾಗಲಿ, ಶ್ಯಾಮ್ ಬೆನಗಲ್

ಸಮ್ಮೇಳನದ ಪ್ರಮುಖ ಕಾರ್ಯಕ್ರಮವೇ ಉದ್ಘಾಟನೆ. ಇದಕ್ಕೆ ಮುಂಚಿತವಾಗಿ ಕೇರಳದ (ಪೋಲೀಸರ ದಾಳಿಗೆ ಬಲಿಯಾದ ಡಿವೈಎಫ್ಐ ಹುತಾತ್ಮರ ಸ್ಥಳ) ಕೂತುಪರಂಭ ದಿಂದ ಮತ್ತು ಚಿಕ್ಕಬಳ್ಳಾಪುರದ (ಸ್ವಾತಂತ್ರ್ಯ ಹೋರಾಟಗಾರರು ವೀರ ಮರಣ ಹೊಂದಿದ ಸ್ಥಳ) ವಿಧುರಾಶ್ವತದಿಂದ ಬಂದಿದ್ದ ಜಾಥಾ ಮತ್ತು ತುಮಕೂರಿನಿಂದ "ಕೋಮು ಸೌಹಾರ್ಧತೆಗಾಗಿ ಯುವಜನ" ಎಂಬ ಹೆಸರಿನಲ್ಲಿ ಬಂದಿದ್ದ ಜಾಥಾ ಮತ್ತು ತಮಿಳುನಾಡಿನ ಚೆನ್ನೈನಿಂದ "ಸಾಮಾಜಿಕ ನ್ಯಾಯಕ್ಕಾಗಿ ಯುವಜನ" ಎಂಬ ಘೋಷಣೆಯಡಿಯಲ್ಲಿ ಬಂದಿದ್ದ ಜಾಥಾ ಹೀಗೆ ನಾಲ್ಕು ದಿಕ್ಕುಗಳಿಂದ ಆಗಮಿಸಿದ್ದ ಜಾಥಾಗಳ ಪರವಾಗಿ ಮಹಾರಾಷ್ಟ್ರದ ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಕಾಂ. ಪ್ರೀತಿ ಶೇಖರ್ ಮತ್ತು ತಂಡದಿಂದ ಡಿವೈಎಫ್ಐ ಬಾವುಟವನ್ನು ಸ್ವೀಕರಿಸಿದ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್ ರವರು ಡಿವೈಎಫ್ಐ ಶ್ವೇತ ಪತಾಕೆಯನ್ನು ಹಾರಿಸುವುದರೊಂದಿಗೆ ಸಮ್ಮೇಳನದ ಕಲಾಪಗಳಿಗೆ ವಿದ್ಯುಕ್ತ ಚಾಲನೆ ನೀಡಿದರು. ನಂತರದಲ್ಲಿ ಹುತಾತ್ಮ ಸ್ತಂಭಕ್ಕೆ ನಮನ ಸಲ್ಲಿಸುವಾಗ "ಸಂಗಾತಿಗಳೇ ನೀವು ಬಿದ್ದ ಮರಗಳಲ್ಲ, ಬಿತ್ತಿದ ಬೀಜಗಳು" ನಮ್ಮ ಧೈರ್ಯ ಮತ್ತು ಆಶಯಗಳನ್ನು ಎತ್ತಿ ಹಿಡಿಯುತ್ತೇವೆ ಎಂಬ ಶಪಥದೊಂದಿಗೆ ಸಮ್ಮೇಳನದ ಒಳಾಂಗಣಕ್ಕೆ ಎಲ್ಲಾ ಗಣ್ಯರು ಮತ್ತು ಪ್ರತಿನಿಧಿಗಳು ಹಾಗೂ ಅಹ್ವಾನಿತರು ಪ್ರವೇಶಿಸಿದರು. ಕಿಕ್ಕಿರಿದಿದ್ದ ಸಮ್ಮೇಳನದ ಸಭಾಭವನದಲ್ಲಿ ಉದ್ಘಾಟನಾ ಸಮಾರಂಭ ಆರಂಭವಾಯಿತು.

ಮೊದಲಿಗೆ, ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಡಾ. ಬರಗೂರು ರಾಮಚಂದ್ರಪ್ಪ ನವರು ಸ್ವಾಗತ ಭಾಷಣ ಮಾಡಿ ಪ್ರಸ್ತುತ ಸಮಾಜದ ವಾಸ್ತವ ಸ್ಥಿತಿಯನ್ನು ಹೊರಹೊಮ್ಮಿಸಿದರು. ಭಗತ್ ಸಿಂಗ್‌ರನ್ನು ಮೂಲಭೂತವಾದಿಗಳಿಂದ ಬಿಡುಗಡೆ ಗೊಳಿಸಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ ವಿವೇಕಾನಂದರನ್ನು ಕೂಡ ಕೋಮುವಾದಿಗಳಿಂದ ಬಿಡಿಸಿಕೊಳ್ಳಬೇಕೆಂದು ಕರೆ ಕೊಟ್ಟರು. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಬರದೆ ಯಾವ ಅಭಿವೃದ್ಧಿಯಾದರೂ ಅದು ಅಸಮಾನತೆ ಸಮಸ್ಯೆಯೇ ಆಗಿರುತ್ತದೆ ಆದ್ದರಿಂದ ಪ್ರಜಾಸತ್ತಾತ್ಮಕ ಚಳುವಳಿಯ ಅಗತ್ಯವಿದೆ ಇದನ್ನು ಡಿವೈಎಫ್ಐ ನಂತಹ ಯುವಜನ ಸಂಘಟನೆ ಮುಂದೆ ಕೊಂಡೊಯ್ಯುತ್ತದೆ ಎಂದು ದೃಢವಾಗಿ ಹೇಳಿದರು.

ಪ್ರಖ್ಯಾತ ಚಿತ್ರ ನಿರ್ದೇಶಕರಾದ ಶ್ಯಾಮ್ ಬೆನಗಲ್‌ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ವಿಶ್ವದಲ್ಲೇ ಅತಿ ಹೆಚ್ಚು ಯುವಜನರನ್ನು ಹೊಂದಿರುವ ಭಾರತ ಭವಿಷ್ಯ ಕಾಣದ ರೀತಿಯಲ್ಲಿದೆ. ಕೇವಲ ಏಕಮುಖವಾದ ಅಭಿವೃದ್ಧಿ ನಮ್ಮಲ್ಲಿ ನಡೆಯುತ್ತಿದೆ. ಬಹುಸಂಖ್ಯಾತ ಭಾರತವಿನ್ನೂ ಹಸಿವು-ಬಡತನ, ಅನಾರೋಗ್ಯ ಮುಂತಾದ ಜ್ವಲಂತ ಸಮಸ್ಯೆಗಳಿಂದ ನರಳುತ್ತಿದೆ. ಹೀಗಾಗಿ ಭಾರತದ ಭವಿಷ್ಯ ಉತ್ತಮವಾಗಿಸಲು ದೊಡ್ಡ ದೊಡ್ಡ ಯುವಜನಾಂದೋಲನದ ಅವಶ್ಯವಿದೆ. ಇದನ್ನು ಡಿವೈಎಫ್ಐ ಮಾಡುವಂತಾಗಲಿ ಎಂದರು. ಸಮ್ಮೇಳನದ ಘೋಷ ವಾಕ್ಯ ಇದನ್ನೇ ಹೇಳುತ್ತಿದೆ. ಹೀಗಾಗಿ ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣವಾಗಲಿ ಇದಕ್ಕೆ ಪೂರಕವಾದ ಯುವಜನಾಂದೋಲನ ನಡೆಯಲಿ ಎಂದು ಹೇಳಿದರು. ಸಾಹಿತ್ಯ-ಸಂಗೀತ-ಸಾಂಸ್ಕೃತಿಕ ಕ್ಷೇತ್ರ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿರುವ ಕೊಡುಗೆ ನೀಡಿರುವ ಮಹನೀಯರಿಗೆ "ಯುವ ಸನ್ಮಾನ್" ಪುರಸ್ಕಾರ ನೀಡಿ ಗೌರವಿಸಲಾಯಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀರಾಮಕೃಷ್ಣನ್‌ವಹಿಸಿದ್ದರು.



ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಗಳು



ಸಾಮ್ರಾಜ್ಯಶಾಹಿ ವಿರೋಧಿ ಛಾಯಾಚಿತ್ರ ಪ್ರದರ್ಶನದ ಉದ್ಘಾಟನೆ ಎಂ.ಎ.ಬೇಬಿ

'ಪ್ರೀತಿಯ ಗಾಳಿ ಬೀಸುತ್ತಿದೆ'

"ಪ್ರೀತಿಯ ಗಾಳಿ ಬೀಸುತ್ತಿದೆ,
ಹಟ್ಟಿ ಮಹಲುಗಳ ನಡುವೆ,
ಬೇಲಿಗಳ ದಾಟಿ ಹಾಡೋಣ ಬಾ
ನನ್ನ ಸಂಗಾತಿ" ಎಂಬಂತಹ ಹೃದಯ ತಟ್ಟುವ ಮತ್ತು ಮನಕಲುಕುವ, ಮಾನವೀಯ ಸಂದೇಶದ, ಪ್ರೀತಿಯ ಸಂಕೇತದ ಶ್ರುಶ್ರಾವ್ಯ ಹಾಡುಗಳನ್ನು ಹಾಡಿದ 'ಭೂಮಿ ತಾಯಿ ಬಳಗ' ದ ಗ್ರಾಮೀಣ ಯುವ ಹಾಡುಗಾರರು ನೆರೆದಿದ್ದವರ ಮನಸೂರೆಗೊಂಡರು.

ಯುವಜನರ ಸಮಸ್ಯೆಗಳು ಮತ್ತು ಪರಿಹಾರದ ಮಾರ್ಗೋಪಾಯಗಳ ಬಗ್ಗೆ ಪ್ರತಿಧ್ವನಿಸಿದ -ಪ್ರತಿ ನಿಧಿ ಅಧಿವೇಶನ:

ಡಿವೈಎಫ್ಐನ . ಪ್ರಧಾನ ಕಾಯದರ್ಶಿ ತಪಸ್ ಸಿನ್ಹಾರವರು ಮಂಡಿಸಿದ ರಾಜಕೀಯ ಮತ್ತು ಸಂಘಟನಾ ವರದಿಯ ಆಧಾರದಲ್ಲಿ ಸುಮಾರು 60 ಜನ ಪ್ರತಿನಿಧಿಗಳು ಒಟ್ಟು 500 ನಿಮಿಷಕ್ಕೂ ಮೀರಿ ವಿಶ್ವ ಆರ್ಥಿಕ ಬಿಕ್ಕಟ್ಟು ಇದರಿಂದಾಗಿ ತಲೆದೋರಿರುವ ನಿರುದ್ಯೋಗ, ಉದ್ಯೋಗ ಅಭದ್ರತೆ, ಕೋಮುವಾದ, ಉಗ್ರವಾದ, ಪ್ರತ್ಯೇಕತಾವಾದ ಮೌಢ್ಯತೆ ವಿಚ್ಛಿದ್ರಕಾರಿ ಶಕ್ತಿಗಳ ಅಪಾಯ ಹೀಗೆ ಹಲವಾರು ಸಮಸ್ಯೆಗಳು ಇವುಗಳನ್ನು ಎದುರಿಸುವಾಗ ಅನುಭವಿಸುವ ದಬ್ಬಾಳಿಕೆಗಳು, ಸೋಲುಗಳು ಮತ್ತು ಗೆಲುವುಗಳು ಮತ್ತು ಸಂಘಟನಾತ್ಮಕ ಇತಿಮಿತಿಗಳು ಹಾಗೂ ಮುಂದಿರುವ ಸವಾಲುಗಳನ್ನು ಎದುರಿಸಲು ಮುಂದಿನ ದಿನಗಳಲ್ಲಿ ಅನುಸರಿಸಬೇಕಾದ ಕಾರ್ಯತಂತ್ರಗಳು ಹೀಗೆ ವಿವಿಧ ರಾಜ್ಯ ಪ್ರತಿನಿಧಿಗಳು ಚರ್ಚಿಸುವಾಗ ತಮ್ಮ ತಮ್ಮ ರಾಜ್ಯಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಒಳನೋಟ ವಿಶ್ಲೇಷಣೆ ಹೊರಹೊಮ್ಮುತ್ತಿದ್ದವು. ಪಶ್ಚಿಮ ಬಂಗಾಲ, ತ್ರಿಪುರ, ಕೇರಳ, ತಮಿಳುನಾಡು, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಕಾಶ್ಮೀರ, ಅಸ್ಸಾಂ ಮತ್ತು ಮಣಿಪುರ ಮುಂತಾದ ರಾಜ್ಯಗಳಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ಮತ್ತು ಯುವಜನತೆಯ ದೈನಂದಿನ ಸಮಸ್ಯೆಗಳ ವಿರುದ್ಧ ಬಲಿಷ್ಠ ಮತ್ತು ವಿಶಾಲವಾದ ಹೋರಾಟಗಳು ನಡೆದಿದ್ದು ದಾಖಲಾರ್ಹವಾಗಿವೆ. ಜೊತೆಗೆ ಕೇರಳ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳಲ್ಲಿ ಬಲ ಪಂಥೀಯ ರಾಜಕೀಯ ಶಕ್ತಿಗಳು ಆರಾಜಕತೆಯನ್ನು ಸೃಷ್ಟಿಸಿ ಯುವಜನತೆಯನ್ನು ನಮ್ಮ ಸಂಘಟನೆ ತೆಕ್ಕೆಗೆ ಹೋಗದಂತೆ ತಡೆಹಿಡಿಯುತ್ತಿವೆ. ಹೀಗೆ ಯುವಜನ ಸಂಘಟನೆಯ ಮುಂದಿರುವ ಹತ್ತು ಹಲವು ಸವಾಲುಗಳನ್ನು ಕುರಿತು ಪ್ರತಿನಿಧಿಗಳು ಚರ್ಚಿಸಿದರು.

ಪುಟ 12 ಕ್ಕೆ

ಕರ್ನಾಟಕದಿಂದ ಕೇಂದ್ರ ಸಮಿತಿಗೆ ಆಯ್ಕೆ



ಎನ್.ಎಲ್.ಭರತ್‌ರಾಜ್, ಕೇಂದ್ರ ಕಾರ್ಯದರ್ಶಿ ಮಂಡಳಿಯ ಸದಸ್ಯರು



ಬಿ.ರಾಜಶೇಖರ ಮೂರ್ತಿ, ಅಖಿಲ ಭಾರತ ಜಂಟಿ ಕಾರ್ಯದರ್ಶಿ

ಅಧ್ಯಕ್ಷ ಪಟ್ಟ ಕೊಡ್ತಿರೋ.....

ಪುಟ 5 ರಿಂದ

ಆಪ್ತರಾದ ಆಯನೂರು ಮಂಜುನಾಥ್ ಮತ್ತು ದೆಹಲಿಯ ಪ್ರತಿನಿಧಿ ಧನಂಜಯಕುಮಾರರನ್ನು ಆ ಸ್ಥಾನಗಳಿಂದ ವಜಾ ಮಾಡಿ ತಿರುಗೇಟು ನೀಡಿತು. ಈ ಕ್ರಮಗಳಿಗೆ ಮೊದಲು ಆರೆಸ್ಸೆಸ್ ನೊಂದಿಗೆ ನಿರಂತರ ಸಮಾಲೋಚನೆ ನಡಸಲಾಗಿತ್ತು ಎಂಬುದೂ ಗಮನಾರ್ಹ. ಈ ಕ್ರಮಗಳಿಂದ ಕೆರಳಿದ ಯಡಿಯೂರಪ್ಪ ಉಳಿದ 8–10 ಬೆಂಬಲಿಗ ಸಚಿವರನ್ನೂ ವಜಾ ಮಾಡಿ ಸರಕಾರ ಉಳಿಸಿಕೊಳ್ಳಿ ಎಂಬ ಬೆದರಿಕೆ ಹಾಕಿದ್ದು ಬಿಜೆಪಿಯೊಳಗಿನ ಕಿತ್ತಾಟ ತೀವ್ರಗೊಳಿಸಿತು. ಹೊಸ ಅಧ್ಯಕ್ಷರ ನೇಮಕದ ಪ್ರಸ್ತಾವವಂತೂ ನೆನೆಗುದಿಗೆ ಬಿತ್ತು.

ಅವಕಾಶವಾದದ ನಾಟಕಗಳು

ಈ ಬಾರಿಯ ಕಿತ್ತಾಟ ಮುಂದಿನ ಬೆಳವಣಿಗೆಗಳನ್ನು ಇನ್ನಷ್ಟು ನಿಚ್ಚಳಗೊಳಿಸಿದೆ. ಮುಖ್ಯಮಂತ್ರಿಯನ್ನಾಗಿ ಜಗದೀಶ್ ಶೆಟ್ಟರ್‌ರವರನ್ನು ಈ ಕೂಡಲೇ ಬದಲಾಯಿಸುವುದು ಅಸಾಧ್ಯ. ಹಾಗಾದಲ್ಲಿ ತನಗೇ ತಿರುಗುಬಾಣವಾಗುವುದೆಂಬ ಆತಂಕ ಯಡಿಯೂರಪ್ಪನಿಗೆ ಇದ್ದೇ ಇದೆ. ಆದ್ದರಿಂದ ಮುಂಬರುವ ಚುನಾವಣೆಯನ್ನು ಗಮನದಲ್ಲಿರಿಸಿ ತನ್ನ ಹೆಚ್ಚಿನ ಬೆಂಬಲಿಗರಿಗೆ ಟಿಕೇಟ್ ಸಿಗುವಂತಾಗಲು ರಾಜ್ಯ ಅಧ್ಯಕ್ಷನಾಗಲು ಶತಾಯಗತಾಯ ಯತ್ನಿಸುತ್ತಿದ್ದಾರೆ. ಹೀಗಾದಲ್ಲಿ ಮುಂದಿನ ಸಿ.ಎಂ ಗಾದಿಗೆ ಹಾದಿ ಸುಲಭವೆಂಬ ಲೆಕ್ಕಾಚಾರ!. ಆದರೆ ದೆಹಲಿ ಗದ್ದುಗೆಯ ಆಶೆಯಲ್ಲಿರುವ , ಕೇಂದ್ರದ ಭ್ರಷ್ಟಾಚಾರಗಳ ವಿರುದ್ಧ ದೊಡ್ಡ ಗಂಟಲಲ್ಲಿ ಕಿರುಚುವ ಬಿಜೆಪಿಗೆ ಯಡಿಯೂರಪ್ಪನಿಗೆ ಅಧ್ಯಕ್ಷ ಸ್ಥಾನ ನೀಡಿದರೆ ಜನರಿಂದ ತೀವ್ರ ಟೀಕೆಗೆ ಒಳಗಾಗುವ ಭಯ. ಇನ್ನೊಂದೆಡೆ ಅವರಿಗೆ ಯಡಿಯೂರಪ್ಪನ ಬೆಂಬಲ, ಸಂಘಟನಾ ಬಲ ಮುಖ್ಯವಾಗಿ ಆತನಿಗೆ ಇರುವ ಜಾತಿ ಬೆಂಬಲ ಕಳೆದುಕೊಳ್ಳುವ ಆತಂಕ ಬೇರೆ. ಹೀಗಾಗಿ ಯಡಿಯೂರಪ್ಪನ ಬೇಡಿಕೆಯನ್ನು ಹೈಕಮಾಂಡ್ ಈಡೇರಿಸುವ ಸ್ಥಿತಿಯಲ್ಲಿ ಇಲ್ಲ. ಯಡಿಯೂರಪ್ಪನವರ ಬಣ ಅದನ್ನು ಬಿಡುವಂತೆಯೂ ಇಲ್ಲ. ಈ ಹಿಂದೆ ತನಗೆ ನೀಡಿದ್ದ ವಚನವನ್ನು ಪಾಲಿಸಲಿಲ್ಲವೆಂಬ ಆಕ್ರೋಶ ಬೇರೆ. ಆದರೆ ಈಗಿನ ಚೌಕಾಶಿ ಇನ್ನು ಹೆಚ್ಚು ನಡೆಯುವಂತೆ ಕಾಣುತ್ತಿಲ್ಲ. ಹೀಗಾಗಿಯೇ 'ನನ್ನ ದಾರಿ ನನಗೆ ನಿಮ್ಮ ದಾರಿ ನಿಮಗೆ' ಎಂಬ ಅನಿವಾರ್ಯ ಸ್ಥಿತಿಗೆ ತಲುಪಿದ್ದಾರೆ. ಆದಾಗ್ಯೂ ಬಿಜೆಪಿಯಿಂದ ಸ್ವಯಂ ಹೊರ ಬರಲು ಯಡಿಯೂರಪ್ಪ ಬಣ ಸಿದ್ಧವಿಲ್ಲ. ಬದಲಾಗಿ ಹೊರ ಹಾಕಿಸಿಕೊಂಡು 40 ವರುಷದಿಂದಲೂ ಪಕ್ಷ ಕಟ್ಟಿದ ತಮಗೆ ಅನ್ಯಾಯವಾಗಿದೆಯೆಂದು ಜನರ ಸಹಾನುಭೂತಿ ಪಡೆದು, ಹುತಾತ್ಮ ಪಟ್ಟದ ಲಾಭ ಅನುಭವಿಸಲು ಕಾದಿದೆ. ಅದರೆ ಬಿಜೆಪಿ ಹೈಕಮಾಂಡ್ ಸಹ ಯಡಿಯೂರಪ್ಪ ಒಂದು ವೇಳೆ ನಾಯಕತ್ವದ ಪಟ್ಟು ಬಿಡದೇ ಅನಿವಾರ್ಯವಾಗಿ ಹೊರ ಹೋದರೆ ಅವರ ಲಿಂಗಾಯತ ಬೆಂಬಲಿಗರ ಮುಂದೆ ಹೇಳಿಕೊಳ್ಳಲು ಒಂದು ನೆಪವಾದರೂ ಸಿಗುತ್ತದೆಯೆಂಬ ಹಂಚಿಕೆ. ಆದ್ದರಿಂದಲೇ ಸಂಧಾನದ ನಾಟಕವನ್ನೂ ಜೊತೆಯಲ್ಲಿಯೇ ಜಾರಿಯಿಡಲಾಗಿದೆ.

ನಿಲ್ಲದ ಯುದ್ಧ

ಹತ್ತಾರು ಮೊಕದ್ದಮೆಗಳು, ಬೆನ್ನು ಹತ್ತಿರುವ ತನಿಖೆಗಳು, ಅಲ್ಲದೇ ಕೇಂದ್ರದಲ್ಲಿ ಅಧಿಕಾರವಿರುವ ಕಾಂಗ್ರೆಸ್‌ನ ಚಿತಾವಣೆಗಳ ಒತ್ತಡದಲ್ಲಿರುವ ಯಡಿಯೂರಪ್ಪ ಪಕ್ಷ ಬಿಡುವುದು ಗ್ಯಾರಂಟಿಯೆಂದೇ ವಿಶ್ಲೇಷಿಸಲಾಗುತ್ತಿದೆ. ಈಗಿನ ವಿಧ್ಯಮಾನಗಳನ್ನು ಗಮನಿಸಿದರೆ ಹಾಗೇ ಕಾಣುತ್ತದೆ. ಮೊನ್ನೆ ಖಾಸಗಿ ಕಾರ್ಯಕ್ರಮಕ್ಕೆ ಆದ್ವಾನಿ ಬಂದಾಗ ಹಲವು ಬಿಜೆಪಿ ನಾಯಕರು ಭೇಟಿಯಾದರಾದರೂ ಯಡಿಯೂರಪ್ಪನವರ ಬಣ ದೂರವೇ ಉಳಿಯಿತು. ಮಾತ್ರವಲ್ಲ ಆಗಲೇ ವಾಜಪೇಯಿಯನ್ನು ಹೊಗಳಿ, ಸಿ.ಎಂ ಸ್ಥಾನಾಕಾಂಕ್ಷಿ ಅನಂತ್‌ಕುಮಾರನು ಅದ್ವಾನಿ, ಜೇಟ್ಲಿ ಮುಂತಾದವರ ತಲೆ ಕೆಡಿಸಿದ್ದಾನೆಂದು ಬಹಿರಂಗವಾಗಿ ಟೀಕೆ ಮಾಡಿತು. ನಂತರ ಸಂಧಾನಕ್ಕೆಂದು ಅರುಣ್ ಜೇಟ್ಲಿ, ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಬೆಂಗಳೂರಿನತ್ತ ಹೊರಡುತ್ತಿರುವಾಗಲೇ ಯಡಿಯೂರಪ್ಪ ಶಿವಮೊಗ್ಗಕ್ಕೆ ಹೊರಟೇ ಹೋದದ್ದು ಮತ್ತು ಇನ್ನು ಯಾರೊಂದಿಗೂ ಮಾತನಾಡುವ ಅಗತ್ಯ ಇಲ್ಲವೆಂದು ಸಾರಿದ್ದು ಗಮನಾರ್ಹ. ಆದರೆ ಇದೇ ಸಮಯದಲ್ಲಿ ಯಡಿಯೂರಪ್ಪ ಬೆಂಬಲಿಗ ಮಂತ್ರಿಗಳಾದ ಶೋಭಾ ಕರಂದ್ಲಾಜೆ ಮತ್ತು ಬಸವರಾಜ ಬೊಮ್ಮಾಯಿ ಅವರು ಜೇಟ್ಲಿಯವರನ್ನು ಬೇಟಿ ಮಾಡಿ ಯಡಿಯೂರಪ್ಪ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಆಗ್ರಹ ಪಡಿಸಿದರು. ದೆಹಲಿಯಿಂದ ಬಂದವರು ವಾಪಾಸು ಹೋದರೂ ಯಡಿಯೂರಪ್ಪನವರ ವಾಗ್ದಾಳಿ ನಿಂತಿಲ್ಲ. ಈಶ್ವರಪ್ಪನನ್ನು ಮುಂದೆ ನಿಲ್ಲಿಸಿ ಅನಂತ್ ಕುಮಾರ್ ಕತ್ತಿ ಬೀಸುವ ವರಸೆಯೂ ಕೊನೆಗೊಂಡಿಲ್ಲ. ಇದರ ಬೆನ್ನಲ್ಲೇ ಯಡಿಯೂರಪ್ಪನವರು ತಮ್ಮ ಅಂತಿಮ ತೀರ್ಮಾನ ಡಿಶೆಂಬರ್ ಒಳಗೆ ಮಾಡುವುದಾಗಿ ಹೇಳುತ್ತಿದ್ದಾರೆ. ನವೆಂಬರ್ 17ರಂದು ಹೊಸ ಪಕ್ಷದ ಸ್ಥಾಪನೆಯ ಪ್ರಕಟಣೆ ಹೊರ ಬೀಳಲಿದೆಯೆಂದು ಹೇಳಲಾಗುತ್ತಿದೆ. ಆದರೆ ಹೊರ ಹೋಗುವಾಗ ಎಷ್ಟು ಜನ ಶಾಸಕರು ತನ್ನೊಂದಿಗೆ ಬರುವರೆಂಬ ಬಗ್ಗೆಯೂ ಖಚಿತತೆಯೂ ಇಲ್ಲ. ಇದೂ ಸಹ ಅವರ ಅಂತಿಮ ನಿರ್ಧಾರದ ಮೇಲೆ ಪ್ರಭಾವ ಬೀರಲಿದೆ.

ಇದರ ಜೊತೆಯಲ್ಲಿ ಖಾತೆಗಳ ಮರು ಹಂಚಿಕೆಯಾಗಬೇಕೆಂದೂ ಒಳ್ಳೇ ಖಾತೆ ಕೊಡುವುದಾಗಿ ಹೇಳಿ ವಚನಭ್ರಷ್ಟರಾಗಿದ್ದಾರೆಂದು ಜಾರಕಿಹೊಳಿ ಮುಂತಾದವರು ಬಂಡಾಯದ ದನಿ ಏರಿಸಿದ್ದಾರೆ. ಇದಕ್ಕೆ ಆಕ್ಷೇಪಿಸಿ ಕೊಡುವುದಿದ್ದರೆ ತನ್ನ ಬೆಂಬಲಿಗ ರಾಜುಗೌಡನಿಗೇ ಕೊಡಬೇಕು ಎಂದು ಮರು ವಾದ ಹೂಡಿದ್ದಾರೆ ಬಿಎಸ್‌ವೈ. ಹಾಗೆಯೇ ಅಂತೂ ಬಿಜೆಪಿಯೊಳಗಿನ ಈ ಕಿತ್ತಾಟ ನಿಲ್ಲುವ ಸಾಧ್ಯತೆಗಳೇ ಇಲ್ಲ. ಬರಪೀಡಿತ ಜನರ ಬವಣೆಗಳತ್ತ ಕತ್ತೆತ್ತಿ ನೋಡಲು ಅವರಿಗೆ ಸಮಯವೇ ಇಲ್ಲ! ಇದೇ ಸಮಯದಲ್ಲಿ ಬುಗಿಲೆದ್ದಿರುವ ಕಾವೇರಿ ನೀರಿನ ವಿವಾದದಿಂದಾಗಿ ರಾಜ್ಯ ಬಿಜೆಪಿ ಸರ್ಕಸ್‌ನಲ್ಲಿ ಮಧ್ಯಂತರ ವಿರಾಮ ಘೋಷಿಸಿದಂತಾಗಿದೆ.

ಜಾತಿ ಜನಾಂಗಗಳಿಗೆ ಗಾಳ ಹಾಕುತ್ತಿರುವ ಜಾತ್ಯಾತೀತ ಜನತಾದಳ

ಎರಡು ಪ್ರಮುಖ ಪಕ್ಷಗಳು ರಾಜ್ಯದ ಜನತೆಯಲ್ಲಿ ಹುಟ್ಟು ಹಾಕಿರುವ ಭ್ರಮೆಗಳು ಕರಗಿ ಹೋಗುತ್ತಿರುವಾಗ ಜೆಡಿ(ಎಸ್) ಮಾತ್ರ ಇದರ ಲಾಭ ಪಡೆಯಲು ಗಂಭೀರ ಪ್ರಯತ್ನ ನಡೆಸುತ್ತಿದೆ. ಆದರೆ ಜೆಡಿ(ಎಸ್) ಅನುಸರಿಸುತ್ತಿರುವ ದೋರಣೆಯೂ ಸಹ ಪ್ರತಿಗಾಮಿಯಾಗಿದೆ. ಅದು ಜನತೆಯ ಜ್ವಲಂತ ನೈಜ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಲು ಅಷ್ಟು ಆಸಕ್ತವಾಗಿಲ್ಲ. ಬದಲಾಗಿ ಜನರಲ್ಲಿ ಜಾತಿ ಆಧಾರಿತ ಭ್ರಮೆಗಳನ್ನು ಸೃಷ್ಟಿಸಿ ಅದರ ಲಾಭ ಪಡೆಯಲು ಹೊರಟಿದೆ. ಅಲ್ಪ ಸಂಖ್ಯಾತರ, ದಲಿತರ, ಹಿಂದುಳಿದವರ ಸಮಾವೇಶಗಳನ್ನು ನಡೆಸಿ ಮತಗಳ ಕ್ರೋಢೀಕರಣಕ್ಕೆ ಪ್ರಯತ್ನಿಸುತ್ತಿದೆ. ಅಂಗವಿಲಕರ, ಮಹಿಳೆಯರ,ಯುವಜನರ ಸಮಾವೇಶ ಮಾಡುವುದು ತಪ್ಪಾಗಲಾರದು. ಆದರೆ ಜಾತಿಗಳ ಸಮಾವೇಶ ಆಕ್ಷೇಪಾರ್ಹವಾಗಿದೆ. ಬೇರೆ ಪಕ್ಷಗಳ ಮುಖಂಡರನ್ನು ಸೇರಿಸಿಕೊಳ್ಳುವ ಮೂಲಕ ಪಕ್ಷದ ಪ್ರಭಾವವನ್ನು ಹೆಚ್ಚಿಸಲು ಅದು ಗಂಭೀರ ಪ್ರಯತ್ನ ನಡೆಸುತ್ತಿದೆ. ಬಿಜೆಪಿಯ ಮಾಜಿ ಸಚಿವ ಬಿ. ನಾಗರಾಜ ಶೆಟ್ಟಿ, ಕಾಂಗ್ರೆಸ್‌ನ ಇಕ್ಬಾಲ್ ಅನ್ಸಾರಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಲಾಗಿದ್ದು ಇನ್ನಷ್ಟು ನಾಯಕರನ್ನು ಸೇರ್ಪಡೆ ಮಾಡಲು ಪ್ರಯತ್ನ ಪಡುತ್ತಿದೆ.

ಇಂದು ಕರ್ನಾಟಕದಲ್ಲಿ ನಡೆಯುತ್ತಿರುವ ವಿಧ್ಯಮಾನಗಳು ನಿಜಕ್ಕೂ ಆಶಾದಾಯಕವಾಗಿಲ್ಲ. ಬರ, ಭ್ರಷ್ಟತೆ, ಬೆಲೆ ಏರಿಕೆಯಿಂದ ಜನತೆ ತತ್ತರಿಸುತ್ತಿದೆ. ಜನರ ಅತೃಪ್ತಿಯನ್ನು ಹಾದಿ ತಪ್ಪಿಸಲು ಕೋಮುವಾದಕ್ಕೆ ಆಡಳಿತ ಪಕ್ಷ ಪ್ರದೇಶಗಳನ್ನು ಆಯ್ದು ಇಳಿದಿದೆ. ಇದು ರಾಜ್ಯದ ಜನತೆಗೆ, ಮುಖ್ಯವಾಗಿ ಎಡ, ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸವಾಲಿನ ಸಂದರ್ಭ. ಭ್ರಷ್ಟ ಬಂಡವಾಳ ಶಾಹಿ ರಾಜಕೀಯ ಪಕ್ಷಗಳು ಚುನಾವಣಾ ತಾಲೀಮು ಆರಂಭಿಸಿರುವಾಗ ಜನತೆಯ ಭೂಮಿ, ವಸತಿ, ಕೂಲಿ, ಆಹಾರದಂತಹ ಮೂಲಭೂತ ಪ್ರಶ್ನೆಗಳನ್ನೆತ್ತಿ ಶ್ರಮಜೀವಿಗಳ ಆಂದೋಲನಕ್ಕೆ ಇಳಿಯುವುದು ಅಗತ್ಯ. ನಿಜವಾದ ಪರ್ಯಾಯ. ಜನ ಸಂಘರ್ಷದ ನಡುವೇ ಮೂಡಿಬರುವುದು.



ವರ್ತಮಾನ

ಎತ್ತ ನೋಡಿದರತ್ತ ಕತ್ತಲೆಯ ಗೂಡು
ಹುತ್ತದಾ ಘಟ ಸರ್ಪ ಸುತ್ತುತಿವೆ ನಾಡು
ಸುತ್ತಲೂ ಜೇಡ ಬಲೆ ಹಿಂಸ್ರ ಪಶು
ನೋಡು
ನೆತ್ತರೊಳು ಕೆಂಪಾಯ್ತೊ ಅಹಿಂಸೆ ಬೀಡು.


★

ಬಾಬಾ ರಾಮ ದೇವ

ಬಾಬಾ ರಾಮ ದೇವಗಳಿಸಿದ್ದು ಎಷ್ಟು ?
ಬರೇ ಸಾವಿರದೊಂದು ನೂರು
ಕೋಟಿಯಷ್ಟು
ಇವನದೇ ಒಡೆರನದ ಇನ್ನೊಂದು ದ್ವೀಪ
ಉಳಿದಂತೆ ಕಡು ಬಡವ ಇವನಯ್ಯ ಪಾಪ!

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ



ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ಬರೆ ಹಾಕಲು ನೆಪ ಕಾಯುತ್ತಿದ್ದವರು

ಈ ಜನ ಕೇಂದ್ರ ಸರ್ಕಾರ ಡೀಸೆಲ್ ದರವನ್ನು ಏರಿಸುವುದನ್ನೇ ಕಾದು ಕುಳಿತ್ತಿದ್ದರೇನೋ ಎನಿಸುವಂತೆ ರಾತ್ರೋ ರಾತ್ರಿ ಸಾರಿಗೆ ದರಗಳನ್ನು ಏಕಾಏಕಿ ಏರಿಸಿಬಿಟ್ಟರು. ಅದೂ ಅಬ್ಬಬ್ಬ ಎನಿಸುವಷ್ಟು.

ಜನಗಳಿಗೆ ಅಘಾತವೋ ಅಘಾತ.

ಕರ್ನಾಟಕದ ಜನ ಬರದಿಂದ ಕಂಗೆಟ್ಟಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯ ಹೊಡೆತದಿಂದಲೂ ತತ್ತರಿಸಿದ್ದಾರೆ. ಸಾರಿಗೆ ದರವನ್ನು ಏರಿಸದೇ ಬೇರೆ ಏನಾದರೂ ಪರ್ಯಾಯವಿದೆಯಾ ಅಂತ ಪ್ರಯತ್ನಿಸೋಣ... ಪರಿಸ್ಥಿತಿಯನ್ನು ನಿಭಾಯಿಸಲು ಪರ್ಯಾಯ ಮಾರ್ಗಗಳ ಬಗೆಗೆ ಸೂಚನೆ ಪಡೆಯಲು ವಿರೋಧ ಪಕ್ಷಗಳ-ಸರ್ವ ಪಕ್ಷಗಳ ಸಭೆ ಕರೆಯೋಣ. ಜನ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸೋಣ.... ತಜ್ಞರ ಸಲಹೆ ಪಡೆಯೋಣ.. ಅಂತ ಅವರಿಗೆ ಅನಿಸಲೇ ಇಲ್ಲ. ಬೆಲೆ ಏರಿಸಲೇ ಬೇಕಾಗಿ ಬಂದರೆ ಆಗ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಪ್ರಮಾಣದಲ್ಲಿ ಏರಿಸೋಣ ಅಂತಲೂ ಅವರಿಗೆ ಅನಿಸಲಿಲ್ಲ.

ಲಾಭದಲ್ಲಿ ನಡೆಯುತ್ತಿರುವ ದೇಶದ ಕೆಲವೇ ನಗರ ಸಾರಿಗೆಗಳಲ್ಲಿ ಬೆಂಗಳೂರು ನಗರದ ಸಾರಿಗೆಯೂ ಒಂದು ಎಂದು ಈ ಆಳುವ ಬಿಜೆಪಿ ಸರ್ಕಾರದ ಸಾರಿಗೆ ಮಂತ್ರಿಗಳು ಮತ್ತು ಹಲವರು ಕೊಚ್ಚಿಕೊಳ್ಳುತ್ತಾರೆ..

ಬೆಂಗಳೂರು ನಗರದ ಸಾರಿಗೆ ದರಗಳು ಮತ್ತು ಕರ್ನಾಟಕ ರಾಜ್ಯದ ಸಾರಿಗೆ ದರಗಳು ದೇಶದಲ್ಲೇ ಅತ್ಯಂತ ದುಬಾರಿ ದರಗಳಾಗಿ ದೇಶಕ್ಕೇ ಮುಂಚೂಣಿಯಲ್ಲಿವೆ ಎಂಬ ಅಂಶವನ್ನು ಅವರು ಹೇಳುವುದೇ ಇಲ್ಲ. ಅಷ್ಟೆ ಅಲ್ಲ. 'ತರಬೇತಿಯಲ್ಲಿರುವ ನೌಕರರು' ಎಂಬ ಹೆಸರಿನಲ್ಲಿ ಕಾರ್ಮಿಕರನ್ನು ಅಮಾನುಷವಾಗಿ ದುಡಿಸಿಕೊಳ್ಳುವ ಮತ್ತು ಅವರ ಶ್ರಮವನ್ನು ಕೊಳ್ಳೆ ಹೊಡೆಯುವ ಅತ್ಯಂತ ಶೋಷಕ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ರೂಪಿಸಲಾಗಿದೆ ಎಂಬ ಅಂಶವನ್ನು ಅವರು ಒಪ್ಪಿಕೊಳ್ಳುವುದಿಲ್ಲ.

ಕೇಂದ್ರ ಸರ್ಕಾರ ಲೀಟರ್ ಡೀಸೆಲ್‌ಗೆ 5 ರೂ. ಏರಿಸಿರುವುದು ಅನಗತ್ಯವಾದ ಮತ್ತು ಅನ್ಯಾಯದ ಕ್ರಮ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಈ ನೆಪದಲ್ಲಿ ನಗರ ಸಾರಿಗೆ ದರಗಳನ್ನು ಶೇ. 12 ರಷ್ಟು ಏರಿಸಿರುವುದು, ರಾಜ್ಯ ಸಾರಿಗೆ ದರಗಳನ್ನು ಶೇ. 14.44 ರಷ್ಟು ಏರಿಸಿರುವುದು ಯಾವ ರೀತಿಯಲ್ಲೂ ಸಮರ್ಥನೀಯವಾದ ಕ್ರಮ ಅಲ್ಲವೇ ಅಲ್ಲ.

ಇಲ್ಲಿ 'ಲಾಭದಲ್ಲಿ ನಡೆಯುತ್ತಿರುವ ಕೆಲವೇ ಸಾರಿಗೆ ಸಂಸ್ಥೆಗಳಲ್ಲಿ ಇದು ಒಂದು' ಎಂಬ ಹೆಗ್ಗಳಿಕೆಯ ಬಗ್ಗೆಯೇ ಜನ ಇನ್ನಷ್ಟು ಯೋಚಿಸಬೇಕಿದೆ. ಅಂದರೆ ಹಲವಾರು ರಾಜ್ಯಗಳಲ್ಲಿ ಸಾರಿಗೆ ಸಂಸ್ಥೆಗಳು ನಷ್ಟದಲ್ಲಿದ್ದರೂ ನಿರಂತರವಾಗಿ ಜನರಿಗೆ ಸೇವೆ ಒದಗಿಸುತ್ತಿವೆ. ಅಂದರೆ ರಾಜ್ಯ ಸರ್ಕಾರ ಆ 'ನಷ್ಟ'ವನ್ನು ಭರಿಸುತ್ತಿದೆ. ಅದರ ಅರ್ಥ ಏನೆಂದರೆ ತೈಲ ದರ ಏರಿಕೆಯ ಹೊರೆಯನ್ನು ಎಲ್ಲರೂ ರಾಜ್ಯ ಬಿಜೆಪಿ ಸರ್ಕಾರದಷ್ಟು ಸಲೀಸಾಗಿ ಪ್ರಯಾಣಿಕರ ಮೇಲೆ ಹೊತ್ತು ಹಾಕಲು ಧೈರ್ಯ ಮಾಡುವುದಿಲ್ಲ. ಪರ್ಯಾಯ ಕ್ರಮಗಳ ಬಗೆಗೆ ಯೋಚಿಸುತ್ತವೆ...ಅಂತಲ್ಲವೇ ?

ನೀರು, ವಿದ್ಯುತ್, ಮನೆ ಇತ್ಯಾದಿಗಳಂತೆ ಸಾರಿಗೆ ಸೌಕರ್ಯ ಕೂಡ ನಾಗರಿಕ ಬದುಕಿನ ಒಂದು ಅತಿ ಅವಶ್ಯಕ ಅಗತ್ಯ. ಈ ಬಗ್ಗೆ ಸರ್ಕಾರಗಳು ಬರೀ ಹಣಕಾಸು ಲೆಕ್ಕದ ಲಾಭ-ನಷ್ಟದ ಆಧಾರದಲ್ಲಿ

ಯೋಚಿಸುವುದು ಒಂದು ಅಪರಾಧ. ಜೊತೆಗೆ ರಾಜ್ಯ ಬಿಜೆಪಿ ಸರ್ಕಾರ ಪೆಟ್ರೋಲ್ ಡೀಸೆಲ್‌ಗಳ ಮೇಲೆ ತಾನು ಹಾಕುತ್ತಿರುವ ತೆರಿಗೆ ಇತರ ರಾಜ್ಯಗಳಿಗೆ ಹೋಲಿಸಿದರೆ ತೀರಾ ಹೆಚ್ಚಾಗಿದೆ. ಅದನ್ನು ಕಡಿಮೆ ಮಾಡುವ ಬಗೆಗೆ ಸರ್ಕಾರ ಯಾವ ರೀತಿಯಲ್ಲೂ ಯೋಚಿಸುತ್ತಲೇ ಇಲ್ಲ. ಹಲವಾರು ರಾಜ್ಯ ಸರ್ಕಾರಗಳು ಇಂತಹ ಕೈ ಗೊಂಡಿರುವ ಉದಾಹರಣೆ ನಮ್ಮ ಮುಂದಿದೆ.

ಸಾರ್ವಜನಿಕ ಹಿತಾಸಕ್ತಿ ಎನ್ನುವುದು ಪ್ರಧಾನ ಆದರೆ ಅನುಕೂಲಸ್ಥ -ಶ್ರೀಮಂತ ವಿಭಾಗಗಳಿಂದ



ಸಂಗ್ರಹಿಸಲ್ಪಡುವ ತೆರಿಗೆ ಸಂಪನ್ಮೂಲಗಳಿಂದ ಈ 'ನಷ್ಟ'ವನ್ನು ಭರಿಸಲು ಸಾಧ್ಯವಾಗುತ್ತದೆ. ಸಾಧ್ಯವಾಗಬೇಕು. ಅಂತಹ ಕ್ರಮಗಳಿಗೆ ಮುಂದಾದಲ್ಲಿ-'ವಿಮಾನಗಳಿಗೆ ಪೂರೈಕೆ ಆಗುವ ತೈಲಕ್ಕೆ ವಿಶೇಷ ಸಹಾಯ ಧನ ಕೊಡಲು ಸಾಧ್ಯವಾಗುತ್ತದೆ... ಜನ ಸಾಮಾನ್ಯರಿಗೆ ಹೊರೆಯಾಗುವ ತೈಲ ದರ ಏರಿಕೆಯನ್ನು ಯಾಕೆ ಕೈ ಬಿಡಬಾರದು ?'- ಎಂದು ಕೇಂದ್ರ ಸರ್ಕಾರವನ್ನು ಕೂಡ ಒತ್ತಾಯ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತದೆ. ತಾವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ-ಈಗ ಕೇಂದ್ರ ಯುಪಿಎ ಸರ್ಕಾರ ಹೇಳುತ್ತಿರುವ 'ತೈಲ ಕಂಪನಿಗಳಿಗೆ ನಷ್ಟ...." ಎನ್ನುವ ಸುಳ್ಳು ಮಂತ್ರವನ್ನೇ ಹೇಳಿ ಪದೇ ಪದೇ ಪೆಟ್ರೋಲ್-ಡೀಸೆಲ್ ದರಗಳನ್ನು ಏರಿಸಿದ, ತೈಲ ಬೆಲೆ ಏರಿಳಿತಗಳ ನಿಯಂತ್ರಣ ವ್ಯವಸ್ಥೆಯನ್ನೇ ಕಳಚಿ ಹಾಕಿದ ಬಿಜೆಪಿಗೆ ಆ ಮನಸ್ಸಾದರೂ ಎಲ್ಲಿದೆ ? ಒಂದು ಜನಪರ ತೈಲ ನೀತಿಯ ಬಿಜೆಪಿ ಮತ್ತು ಅದನ್ನು ನಿಯಂತ್ರಿಸಿ ನಿರ್ದೇಶಿಸುವ ಆರೆಸ್ಸೆಸ್‌ಗಳ ಎದೆಯೊಳಗೆ ಇಲ್ಲದಿರುವಾಗ ಪಾಪ, ಮುಖ್ಯಮಂತ್ರಿ ಜಗದೀಶ ಶೆಟ್ಟರ, ಸಾರಿಗೆ ಮಂತ್ರಿ ಆರ್. ಅಶೋಕ್ ಎಂಬ ಆರೆಸ್ಸೆಸ್ ಆಜ್ಞಾನುವರ್ತಿಗಳಾದರೂ ಏನು ಮಾಡಿಯಾರು ? ಬಸ್ ದರ ಏರಿಸಿ ರಾತ್ರೋ ರಾತ್ರಿ ಮಲಗಿರುವ ಜನಗಳ ಬೆನ್ನ ಮೇಲೆ ಬರೆ ಹಾಕುವುದು ಬಿಟ್ಟು.

★

ಬಡವರಿಗೆ ಮೂರು ಸಾವಿರ 'ಕಾಗದದ ಮನೆ'

15 ಕೋಟಿ ರೂ. ಭ್ರಷ್ಟಾಸುರರ ಹೊಟ್ಟೆಗೆ

ರಾಜ್ಯದಲ್ಲಿ 'ಕರ್ನಾಟಕ ಗೃಹ ಮಂಡಳಿ' ಅಂತ ಒಂದು ಇದೆ. ಅದರ ಕೆಲಸ ಏನೆಂದರೆ ಸಾರ್ವಜನಿಕರಿಗೆ ಅಗತ್ಯವಾದ ಮನೆಗಳನ್ನು ನಿರ್ಮಿಸಿಕೊಡುವುದು. ಮನೆ ನಿರ್ಮಿಸಿ ಕೊಡುವಾಗ ಬಡವರು, ಮನೆ ಇಲ್ಲದವರಿಗೆ ಮನೆ ನಿರ್ಮಿಸಿಕೊಡುವುದು ಆದ್ಯತೆ ಅಂತ ನಾವು ನೀವು ಯಾರೇ ಆದರೂ ಭಾವಿಸಬಹುದು. ಕ್ಷಮಿಸಿ.,

ನಾವು ನೀವು ಭಾವಿಸಬಹುದು. ಆದರೆ ಬಿಜೆಪಿ ದರ್ಬಾರಿನಲ್ಲಿ 'ಕರ್ನಾಟಕ ಗೃಹ ಮಂಡಳಿ'ಯೊಳಗೆ ಕೊಬ್ಬಿಹೋಗಿರುವ ನಾನಾ ಅಧಿಕಾರಿ ಗಣಗಳು, ಹಾಗೂ ಕ್ಷೇತ್ರದ ಶಾಸಕರು, ಮರಿ ಕಿರಿ ಪುಡಾರಿಗಳು ಸೇರಿದಂತೆ ಆಳುವ ಬಿಜೆಪಿ ಪಕ್ಷದ ನಾನಾ ಬಣಗಳ ಮುಖಂಡರು-ಈ ಜೋಡಿ ಕೂಡಿ ರೂಪುಗೊಳ್ಳುವ 'ಹೆಗ್ಗಣ'ಗಳಿಗೆ ಹಾಗೇ ಅನಿಸಬೇಕೆಲ್ಲ ?

ವಿಷಯ ಏನಪ್ಪ ಅಂದರೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದ 18 ತಾಲ್ಲೂಕುಗಳಲ್ಲಿ ಯಾವೊಂದು ಮನೆಯನ್ನೂ ಕಟ್ಟದೇ 3,000 ಮನೆಗಳನ್ನು ನಿರ್ಮಿಸಿರುವುದಾಗಿ ಸುಳ್ಳು ದಾಖಲೆ ತೋರಿಸಿ ಒಟ್ಟಾರೆ ಸುಮಾರು 15 ಕೋಟಿ ರೂಪಾಯಿಗಳನ್ನು 'ಗುಳುಂ' ಮಾಡಿರುವ ಹಗರಣವೊಂದು ಬಯಲಾಗಿದೆ.

ಬಿಜೆಪಿ ಸರ್ಕಾರದ ಹಾಲಿ ವಸತಿ ಸಚಿವ ವಿ. ಸೋಮಣ್ಣ ಅವರೇ ಈ ಹಗರಣದ ವಿವರಗಳನ್ನು ನೀಡಿದ್ದಾರೆ. ಈ ಸಂಬಂಧ 25 ಜನ ಪಿಡಿಒಗಳು ಹಾಗೂ 18 ತಾಲ್ಲೂಕು ನೋಡಲ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ ಎಂದು ಸಚಿವರು ಹೇಳಿದ್ದಾರೆ. ಸಚಿವರ ಕ್ರಮ ಪ್ರಾಮಾಣಿಕವಾದ್ದಾದರೆ ಖಂಡಿತ ಅದನ್ನು ಸ್ವಾಗತಿಸೋಣ.

ಆದರೆ ಇಲ್ಲಿ ಕೆಲವು ಗಂಭೀರವಾದ ಪ್ರಶ್ನೆಗಳು ಏಳುತ್ತವೆ. ಇಲ್ಲಿ ಕೇವಲ ಅಧಿಕಾರಿಗಳು ಮಾತ್ರವೇ ಅಪರಾಧಿಗಳಾಗಿದ್ದಾರಾ ?

ಮನೆಯ ಅಡಿಪಾಯಕ್ಕೆ ಒಂದು ಕಲ್ಲನ್ನೂ ಹಾಕದೇ-ಗೋಡೆ ಅನ್ನುವುದಕ್ಕೆ ಒಂದು ಇಟ್ಟಿಗೆಯನ್ನೂ ಇಡದೇ ಮೂರು ಸಾವಿರ ಮನೆಗೆ ನಕಲಿ ದಾಖಲೆ ಸೃಷ್ಟಿಸಿ ಬಡ ಬಗ್ಗರಿಗೆ ದಕ್ಕಬೇಕಾದ ಸೌಲಭ್ಯವನ್ನು ಹೀಗೆ ಮುಕ್ಕುವ ಧೈರ್ಯ ಅಧಿಕಾರಿಗಳಿಗೆ ಹೇಗೆ ಬಂತು ? ಮನೆ, ಸೇತುವೆ ಕಟ್ಟುವಾಗ ಹಾಕಬೇಕಾದಷ್ಟು ಸಿಮೆಂಟ್ ಹಾಕದೇ ಕಳಪೆ ಕಾಮಗಾರಿ ಮಾಡುವುದು. ಮನೆಗೆ ಕಡಿಮೆ ಗುಣಮಟ್ಟದ ಇಟ್ಟಿಗೆ ಬಳಸಿ ವಂಚಿಸುವುದು ಮುಂತಾದುವೆಲ್ಲಾ 'ಮಾಮೂಲಿ'ಯಾಗಿ ನಡೆಯುವ ಭ್ರಷ್ಟಾಚಾರ. ಆದರೆ 'ಶೂನ್ಯ'ದಲ್ಲಿ ಮನೆ ಸೃಷ್ಟಿಸುವ.. ಕ್ಷಮಿಸಿ ಕಲ್ಲು-ಇಟ್ಟಿಗೆ ಬಿಟ್ಟು ಕಾಗದದ ಮನೆಯನ್ನು ಕಟ್ಟುವ ಈ ಕಲೆಯನ್ನು ಈ ಅಧಿಕಾರಿಗಳು ಕರಗತ ಮಾಡಕೊಂಡಿದ್ದು ಹೇಗೆ ? ಕೃಷ್ಣಯ್ಯ ಶೆಟ್ಟಿಯಂತಹ ಬಿಜೆಪಿ ಸರ್ಕಾರದ ಸಚಿವ ಮಹಾಶಯರೇ ರಾಷ್ಟ್ರೀಕೃತ ಬ್ಯಾಂಕಿಗೆ ನಕಲಿ ದಾಖಲೆ ಕೊಟ್ಟು ಕೋಟ್ಯಾಂತರ ರೂಪಾಯಿಗಳನ್ನು ವಂಚಿಸುವುದು, ಬಿಜೆಪಿ ಸರ್ಕಾರದ ಶಾಸಕರು, ಸಂಸದರು, ಸಚಿವರು ಸುಳ್ಳು ಪ್ರಮಾಣ ಪತ್ರ ನೀಡಿ ಭೂಮಿ ನಿವೇಶನ ಕಬಳಿಸುವುದು. ಮುಖ್ಯಮಂತ್ರಿ ಮತ್ತು ಅವರ ಪುತ್ರರತ್ನರೇ 'ಭೂ ಕಬಳಿಕೆ ಆಂದೋಲನ'ದ ಬಿಜೆಪಿ ಸಚಿವರು-ನಾಯಕರ ತಂಡದ ಮುಂಚೂಣಿಯಲ್ಲಿ ನಿಲ್ಲುವುದು, ನಾಡಿನ ಗಣಿ ಸಂಪತ್ತನ್ನು ಬಿಜೆಪಿ ಸರ್ಕಾರದ ಸಚಿವರ ಹಿಂಡೇ ಹಾಡುಹಗಲೇ ಕೊಳ್ಳೆ ಹೊಡೆಯುತ್ತಿದ್ದರೇ... ಲೋಕಾಯುಕ್ತ ಸಂಸ್ಥೆಯ ಮಧ್ಯಂತರ ವರದಿ ಸಲ್ಲಿಕೆಯಾಗಿ ಅಪರಾಧಿಗಳನ್ನು ಗುರುತಿಸಿ, ಕ್ರಮ ಕೈಗೊಳ್ಳಿ ಅಂದರೂ ವರದಿಯ ಮೇಲೆ ಯಾವುದೇ ಕ್ರಮವಹಿಸದೇ ಇಡೀ ಬಿಜೆಪಿ ಸರ್ಕಾರದ ಯಂತ್ರವೇ ಹಗಲು ದರೋಡೆಕೋರರ ರಕ್ಷಣೆಗೆ ನಿರ್ಲಜ್ಜವಾಗಿ ಬಳಕೆಯಾಗುವುದು, ಬೇಲೆಕೇರಿ ಬಂದರಿನಿಂದ ಲೋಕಾಯುಕ್ತರು ಜಪ್ತಿ ಮಾಡಿ ಇಟ್ಟಿದ್ದ ಲಕ್ಷಾಂತರ ಟನ್ ಅದಿರು ವಿದೇಶಗಳಿಗೆ ಸದ್ದಿಲ್ಲದೇ ರಫ್ತಾಗಿ ಹೋಗುವ 'ಪವಾಡ' ಸಂಭವಿಸುವುದು ಇಂತಹದ್ದನ್ನೆಲ್ಲ ನೋಡಿದ ಅಧಿಕಾರಿಗಳ ಗಡಣ ನಕಲಿ ದಾಖಲೆ ಸೃಷ್ಟಿಯನ್ನಲ್ಲದೇ-ಅಸಲಿ ಮನೆಯನ್ನು ಯಾಕಾದರೂ ಸೃಷ್ಟಿಸಿಯಾರು. ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ ಅಂತ ಗಾದೆಯನ್ನು ಅವರೆಲ್ಲರೂ ಕೇಳಿಯೇ ಇರುತ್ತಾರಲ್ಲ !! ●

ತುಮಕೂರು: ಕಣ್ಣು, ಕಿವಿ, ಬಾಯಿಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ



ಅಗತ್ಯ ವಸ್ತುಗಳ ನಿರಂತರ ಬೆಲೆ ಏರಿಕೆ ಒಂದು ಕಡೆ. ಕರ್ನಾಟಕ ರಾಜ್ಯದಲ್ಲಿ ಬಡವರ ಬದುಕನ್ನು ಸುಡುವ ಭೀಕರ ಬರ ಮತ್ತೊಂದು ಕಡೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಹುಡುಕಿ ಸಂತ್ವಾನ ಇಂತಹ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಸರ್ಕಾರ ಡಿಸೇಲ್ ಬೆಲೆ ಏರಿಕೆ ನೆಪದಲ್ಲಿ ರಾಜ್ಯ ಸಾರಿಗೆ ಸಂಸ್ಥೆಯ ಪ್ರಯಾಣ ದರಗಳನ್ನು ಸು. ಶೇ 15 ಏರಿಕೆ ಮಾಡಿ ಜನರ ಬದುಕಿನ ಮೇಲೆ ಆಕ್ರಮಣವನ್ನೇ ಮಾಡಿದೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಈ ಜನ ವಿರೋಧಿ ಕ್ರಮವನ್ನು ಖಂಡಿಸಿ ಪ್ರತಿಭಟನೆ ನಡೆಸಲು ಕರೆ ನೀಡಿತ್ತು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬರುತ್ತಿವೆ. ಸರ್ಕಾರ ಡಿಸೇಲ್ ಬೆಲೆ ಹೆಚ್ಚಳ ಮಾಡಿದರೆ, ರಾಜ್ಯ ಬಿಜೆಪಿ ಸರ್ಕಾರ ಸಾರಿಗೆ ಬಸ್‌ದರ ಏರಿಕೆ ಮಾಡಿ ಸಮಾಜದ ಕಟ್ಟಕಡೆಯ ಮನುಷ್ಯನ ಬೆನ್ನಿಗೆ ಚೂರಿ ಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಅಕ್ಟೋಬರ್ 2ರ ಗಾಂಧಿಜಯಂತಿಯಂದು ತುಮಕೂರು ನಗರದ ಸ್ವತಂತ್ರ ಚೌಕದಲ್ಲಿ "ಬಸ್ ದರ ಮತ್ತು ಡಿಸೇಲ್ ಬೆಲೆ ಏರಿಕೆ ವಿರೋಧಿಸಿ ಸಿಪಿಐ[ಎಂ] ಹಾಗೂ ಸಿಐಟಿಯು ನೇತೃತ್ವದಲ್ಲಿ ಕಣ್ಣು, ಕಿವಿ, ಬಾಯಿಗೆ ಕಪ್ಪು ಬಟ್ಟೆ ಧರಿಸಿ ವಿಭಿನ್ನವಾಗಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ[ಎಂ] ಮುಖಂಡ ಬಿ.ಉಮೇಶ್ ಕೇಂದ್ರ ರಾಜ್ಯ ಸರ್ಕಾರಗಳು ಜನ ಸಾಮಾನ್ಯರ ಮೇಲೆ ಹೊರೆ ಹೆಚ್ಚಿಸಿ ಜನ ವಿರೋಧಿ ನೀತಿಯನ್ನು ಅನುಸರಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ[ಎಂ] ನಗರ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯ ಪೌರಕಾರ್ಮಿಕ ಸಂಘದ ಮಂಜುನಾಥ್, ಸಿಪಿಐಟಿಯು ಮುಖಂಡ ಷಣ್ಮುಖಪ್ಪ ಮಾತನಾಡಿದರು. ಪ್ರತಿಭಟನೆ ನೇತೃತ್ವವನ್ನು ಕಟ್ಟಡ ಕಾರ್ಮಿಕರ ಸಂಘದ ಶ್ರೀಧರ್, ಟಿ.ಹೆಚ್. ರಾಮು, ರಾಮಚಂದ್ರ, ಬೀಡಿ ಕಾರ್ಮಿಕ ಸಂಘದ ಸರ್ಧಾರ್, ನಾಗರಾಜು, ಸಂಘಟಿತ ವಲಯದ ಲೋಕೇಶ್, ಚಂದ್ರಮೌಳಿ, ಮಹೇಶ್, ಎಸ್.ಎಫ್.ಐನ ಕಾರ್ಯದರ್ಶಿ ಶಿವಣ್ಣ, ಜಿ. ದರ್ಶನ್, ಮುಂತಾದವರು ವಹಿಸಿದ್ದರು.

ವರದಿ– ದರ್ಶನ್

ಯುವಜನತೆಯ ಐಕ್ಯತೆಗೆ ಸಂಕಲ್ಪ...

ಪುಟ 9 ರಿಂದ

ಹಳೆ ಬೇರು–ಹೊಸ ಚಿಗುರು:

ಸಮ್ಮೇಳನದ ಸಂದರ್ಭದಲ್ಲಿ ಡಿವೈಎಫ್ಐ ಸಂಸ್ಥಾಪಕರಿಂದ ಹಿಡಿದು ಇಲ್ಲಿಯವರೆಗೆ ಯುವಜನ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದರ ಬಗ್ಗೆ ಅನುಭವ ಹಂಚಿಕೊಂಡರು ಮತ್ತು ಮಾರ್ಗದರ್ಶನ ನೀಡಿದರು. ಮುಖ್ಯವಾಗಿ ಅಂದಿನ ಸಂದರ್ಭದಲ್ಲಿ ಡಿವೈಎಫ್ಐ ಯುವಜನ ಸಂಘಟನೆಯನ್ನು ಕಟ್ಟಲು ಅನುಭವಿಸಿದ ಸಂಕಷ್ಟಗಳು ಮತ್ತು ಆ ಸಂದರ್ಭದಲ್ಲಿನ ಎದುರಾಳಿಗಳ ವಿರುದ್ಧ ಸೆಣೆಸಿ ನಿಂತದ್ದು. ಇದಕ್ಕಾಗಿ ನೂರಾರು ಯುವ ಸಂಗಾತಿಗಳು ಪ್ರಾಣ ತ್ಯಾಗ ಮಾಡಿದ್ದು. ಮುಖ್ಯವಾಗಿ ಪಂಜಾಬ್‌ನಲ್ಲಿ ರಾಜ್ಯ ಸಮ್ಮೇಳನ ಮಾಡುವ ಸಂದರ್ಭದಲ್ಲಿ ಪಟ್ಟಭದ್ರರನ್ನು ಎದುರಿಸಿದ್ದು. ಹೀಗೆ ಹಿಂದಿನ ಚಳವಳಿಯ ವೀರಗಾಥೆ ಎಲ್ಲಾ ಪ್ರತಿನಿಧಿಗಳಿಗೆ ಅತ್ಯಂತ ಸ್ಫೂರ್ತಿ ನೀಡುವಂತಹ ಕಾರ್ಯಕ್ರಮವಾಗಿತ್ತು.

ವಿದೇಶಿ ಸೌಹಾರ್ಧ ಪ್ರತಿನಿಧಿಗಳಿಂದ ವಿಶ್ವ ಶಾಂತಿ ಮತ್ತು ಸಹಬಾಳ್ವೆಗೆ ಕರೆ.

ವಿಶ್ವ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯೊಂದಿಗೆ ಅತ್ಯಂತ ನಿಕಟ ಸಂಬಂಧ ಹೊಂದಿರುವ ಡಿವೈಎಫ್ಐ ಎಲ್ಲಾ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಗಳೊಂದಿಗೆ ಸಖ್ಯತೆಯ ಹೋರಾಟಗಳನ್ನು ನಡೆಸಲು ಬದ್ಧವಾಗಿದೆ. ಉದಾ: ವಿಶ್ವ ಶಾಂತಿಗಾಗಿ ನಡೆದ ವಿದ್ಯಾರ್ಥಿ–ಯುವಜನ ಅಂತರಾಷ್ಟ್ರೀಯ ಉತ್ಸವ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದು, ಅದರಲ್ಲಿ ಪ್ರಮುಖ ಪಾತ್ರವನ್ನು ಡಿವೈಎಫ್ಐ ವಹಿಸಿದೆ. ಈ ಹಿನ್ನೆಲೆಯಯೂ ಸಮ್ಮೇಳನದಲ್ಲಿ ವಿದೇಶಿ ಪ್ರತಿನಿಧಿಗಳು ಭಾಗವಹಿಸಲು ಸಾಧ್ಯವಾಗಿದ್ದು. ಜೊತೆಗೆ ಇದು ಡಿವೈಎಫ್ಐ ಪರಂಪರೆಯೂ ಹೌದು. ಹೀಗಾಗಿ ಕ್ಯೂಬಾ, ಶ್ರೀಲಂಕಾ, ಸಿರಿಯಾ, ಬಾಂಗ್ಲಾ, ದಕ್ಷಿಣಾ ಆಫ್ರಿಕಾ ಮುಂತಾದ ದೇಶಗಳಿಂದ ಪಾಲ್ಗೊಂಡಿದ್ದ ವಿದೇಶಿ ಸಂಗಾತಿಗಳು ವಿಶ್ವ ಸಾಮ್ರಾಜ್ಯಶಾಹಿ ವಿರುದ್ಧ ಮತ್ತು ಶಾಂತಿ ಸೌಹಾರ್ದತೆಗಾಗಿ ವಿಶ್ವದ ಯುವಜನ ಒಂದಾಗೋಣ ಎಂಬ ಸಂದೇಶವನ್ನು ಸಾರಿದರು ಮತ್ತು ನಮ್ಮ ದೇಶದ ಜನಪರ ಹೋರಾಟಗಳಿಗೆ ನಮ್ಮ ಬೆಂಬಲ ಇದ್ದೇ ಇರುತ್ತದೆ ಎಂದು ಸಮ್ಮೇಳನಕ್ಕೆ ಶುಭಕೋರಿ ಸಮ್ಮೇಳನ ಯಶಸ್ವಿ ಆಗಲಿ ಮತ್ತು ನಿರ್ಣಯಗಳ ಜಾರಿಗೆ ಒಗ್ಗಟ್ಟಿನಿಂದ ಮುಂದಾಗಿ ಎಂದು ಶುಭ ಹಾರೈಸಿದರು.

ಸಹೋದರ ಸಂಘಟನೆಗಳ ಶುಭ ಹಾರೈಕೆ

ಎಸ್‌ಎಫ್ಐ, ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ರಿತೋ ಬ್ರತೋ ಬ್ಯಾನರ್ಜಿ, ಸಿಐಟಿಯು, ಅಖಿಲ ಭಾರತ ಕಾರ್ಯದರ್ಶಿ ಸೌಂದರ ರಾಜನ್, ಅಖಿಲ ಬಾರತ ಕಿಸಾನ್ ಸಭಾ, ರಾಷ್ಟ್ರ ಅಧ್ಯಕ್ಷರಾದ ರಾಮಚಂದ್ರ ಪಿಳ್ಳೆ, ಅಖಿಲ ಭಾರತ ಜೆಎಂಎಸ್, ಪ್ರಧಾನ ಕಾರ್ಯದರ್ಶಿ ಸುಧಾ ಸುಂದರ್ ರಾಮನ್ ರವರು ಸಮ್ಮೇಳನಕ್ಕೆ ಶುಭ ಕೋರಿ ಮಾತಾಡಿದರು. ಜೊತೆಗೆ ಎಡ ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಅಖಿಲ ಭಾರತ ಮುಖಂಡರು ಸಮ್ಮೇಳನಕ್ಕೆ ಶುಭ ಕೋರಿ ಮಾತಾಡಿದರು.

20 ನಿರ್ಣಯಗಳ ಅಂಗೀಕಾರ:

ನಿರುದ್ಯೋಗ, ಶಿಕ್ಷಣದ ವ್ಯಾಪಾರ, ಅರೋಗ್ಯ, ಭ್ರಷ್ಟಾಚಾರ, ಬೆಲೆ ಏರಿಕೆ, ಕೋಮುವಾದ, ಗುತ್ತಿಗೆ ಆಧಾರ ಉದ್ಯೋಗ ವಿರೋಧಿಸಿ, ನಗರ ಉದ್ಯೋಗ ಖಾತ್ರಿಗೆ ಒತ್ತಾಯಿಸಿ, ದಲಿತರ ಹಕ್ಕು, ಬುಡಕಟ್ಟು ಜನರ ಹಕ್ಕು, ಅಹಾರದ ಹಕ್ಕು, ಸಾಮಾಜಿಕ ಭದ್ರತೆ, ಕ್ಯೂಬಾ ಮತ್ತು ಪಾಲೆಸ್ತೇನ್ ಜನತೆಯ ಹೋರಾಟಗಳಿಗೆ ಸೌಹಾರ್ದ ಬೆಂಬಲ, ಈಶಾನ್ಯ ರಾಜ್ಯ ಸಮಸ್ಯೆಗಳ ಕುರಿತು, ಕೃಷಿ ಬಿಕ್ಕಟ್ಟು, ಕೃಷಿ ವಿರೋಧಿ ಭೂಕಾಯ್ದೆ ವಿರುದ್ಧ ಮತ್ತು ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣಕ್ಕೆ ಒತ್ತಾಯಿಸಿ ಒಟ್ಟು 20 ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿದೆ.

ಸಮ್ಮೇಳನದ ಅಂಗವಾಗಿ: ಚಿತ್ರಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲ್ಪಟ್ಟದ್ದವು.



ಪ್ರಯಾಣ ದರ ಏರಿಕೆ ವಾಪಸಾಗಲಿ!!

ಪ್ರಯಾಣ ದರಗಳ ತೀವ್ರ ಏರಿಕೆ ಖಂಡಿಸಿ ಬೆಂಗಳೂರಿನ ಸಾರಿಗೆ ಭವನದ ಮುಂದೆ ಅ.3 ರಂದು ಡಿವೈಎಫ್ಐ ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆ.

2ಜಿ ರಾಷ್ಟ್ರಪತಿ ಪರಾಮರ್ಶೆಯ ಮೇಲಿನ ತೀರ್ಪು

ದೋಷಮುಕ್ತಿಯ ಮುಖವಾಡ ತೊಡಿಸುವ ಯತ್ನ




ವೇದರಾಜ ಎನ್.ಕೆ.

ದೇಶದ ಸರ್ವೋಚ್ಚ ನ್ಯಾಯಾಲಯ 2ಜಿ ತರಂಗಾಂತರ ಹಂಚಿಕೆಯ ಮೇಲೆ ನೀಡಿದ ತೀರ್ಪಿನ ಸಂದರ್ಭದಲ್ಲಿ ಯುಪಿಎ-2 ಸರಕಾರ ರಾಷ್ಟ್ರಪತಿಯ ಮೂಲಕ ಒಂದು ಪರಾಮರ್ಶೆ ಅರ್ಜಿ ಹಾಕಿತ್ತು- ನೈಸರ್ಗಿಕ ಸಂಪನ್ಮೂಲಗಳನ್ನು ಹಂಚಲು ಸ್ಪರ್ಧಾತ್ಮಕ ಹರಾಜು ಏಕಮಾತ್ರ ವಿಧಾನವೇ ಎಂದು ಅಭಿಪ್ರಾಯ ಕೇಳುವ ಹೆಸರಿನಲ್ಲಿ. ಈ ವಾರ ಈ ಬಗ್ಗೆ ತೀರ್ಪು ಹೊರಬಿದ್ದಿದೆ. ಹರಾಜು ಪ್ರಕ್ರಿಯೆಯಿಂದ ಮಾತ್ರವೇ ಎಲ್ಲಾ ವಲಯಗಳಲ್ಲೂ ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ ಮಾಡಬೇಕೆಂದೇನಿಲ್ಲ, ಅದೇ ಏಕಮಾತ್ರ ವಿಧಾನ ಆಗಿರಬೇಕಿಲ್ಲ ಎಂದು ಐವರು ನ್ಯಾಯಾಧೀಶರ ಸಂವಿಧಾನ ಪೀಠ ಅಭಿಪ್ರಾಯ ನೀಡಿದೆ.

ಯುಪಿಎ-2 ಸರಕಾರ ಈ ಮೂಲಕ ಸುಪ್ರಿಂ ಕೋರ್ಟ್ 2ಜಿ ತರಂಗಾಂತರ ಮತ್ತು ಕಲ್ಲಿದ್ದಲು ಗಣಿಗಳ ಹಂಚಿಕೆಯಲ್ಲಿ ತನ್ನ ಪರವಾಗಿ ತೀರ್ಪಿತ್ತಿದೆ, ತನ್ನನ್ನು ದೋಷಮುಕ್ತಗೊಳಿಸಿದೆ ಎಂಬಂತೆ ಬಿಂಬಿಸುವ ಪ್ರಯತ್ನ ನಡೆಸಿದೆ. ಕಲಿದ್ದಲು ಹಗರಣ ಬಯಲಾದಂದಿನಿಂದ ಸಿಎಜಿಯನ್ನು ಟೀಕಿಸುವಲ್ಲಿ ಪ್ರಧಾನ ಮಂತ್ರಿಗಳು ಸೇರಿದಂತೆ ಯುಪಿಎ-2 ಘಟಾನುಘಟಿಗಳೆಲ್ಲ ಸ್ಪರ್ಧೆಗಿಳಿದಂತೆ ಕಾಣುತ್ತಿತ್ತು. ಈಗ ಸುಪ್ರಿಂ ಕೋರ್ಟ್ ತೀರ್ಪನ್ನೂ ಬಳಸಲು ಮುಂದಾಗಿದ್ದಾರೆ. ಇದಕ್ಕಾಗಿ ಸಂಪುಟದ ಮೂರು ಮಂತ್ರಿಗಳ (ಹಣಕಾಸು ಮಂತ್ರಿ, ಮಾನವ ಸಂಪನ್ಮೂಲ ಮಂತ್ರಿ ಮತ್ತು ಕಾನೂನು ಮಂತ್ರಿ) ತಂಡವನ್ನು ನೇಮಿಸಿರುವಂತೆ ಕಾಣುತ್ತದೆ, ಈ 'ಮೂವರು ಬುದ್ಧಿವಂತರು' (ಮೂವರೂ ವಕೀಲರು) ಸಿಎಜಿ ತನ್ನ ಮುಂದಿನ ವರದಿಗಳಲ್ಲಿ ಸುಪ್ರಿಂ ಕೋರ್ಟಿನ ಈ ತೀರ್ಪನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು 'ಸಲಹೆ' ಮಾಡಿದ್ದಾರೆ. ಹರಾಜು ಏಕಮಾತ್ರ ವಿಧಾನವಲ್ಲದಿದ್ದರೆ ಹರಾಜಿನಿಂದ ಬರಬಹುದಾಗಿದ್ದ ಆದಾಯವನ್ನು ಲೆಕ್ಕ ಹಾಕಿ ಬೊಕ್ಕಸಕ್ಕೆ ನಷ್ಟವಾಗಿದೆ ಎಂಬ ಸಿಎಜಿ ಲೆಕ್ಕಾಚಾರ ಬುಡವಿಲ್ಲದ್ದು ಎಂಬುದು ಈ 'ಬುದ್ಧಿವಂತರ' ತರ್ಕ. ಹಾಗಿದ್ದರೆ ಸುಪ್ರಿಂ ಕೋರ್ಟ್ 2ಜಿ ತರಂಗಾಂತರ ಹಂಚಿಕೆಯಲ್ಲಿ 'ಮೊದಲು ಬಂದವರಿಗೆ ಮೊದಲ ಸೇವೆ' ಎಂಬ ಧೋರಣೆ ಅಸಿಂಧು ಎನ್ನುತ್ತಾ ಸರಕಾರ ನೀಡಿದ್ದ 122 ಲೈಸೆನ್ಸ್‌ಗಳನ್ನು ರದ್ದು ಮಾಡಿದ ತನ್ನ ತೀರ್ಪನ್ನು ಪರಾಮರ್ಶಿಸಲು ನಿರಾಕರಿಸಿದ್ದೇಕೆ ಎಂಬ ಪ್ರಶ್ನೆಗೆ ಈ 'ಮೂವರು ಬುದ್ಧಿವಂತರ' ಬಳಿ ಉತ್ತರವಿಲ್ಲ.

ವಾಸ್ತವವಾಗಿ ಈ ಪ್ರಯತ್ನಗಳು ಈ ಹಗರಣಗಳ ಮಸಿಯನ್ನು ಹೇಗಾದರೂ ಒರೆಸಿ ಹಾಕಬೇಕೆಂಬ ಹತಾಶ ಪ್ರಯತ್ನವೆಂದರೆ ತಪ್ಪಾಗಲಾರದು. ಈ ಸಂಪನ್ಮೂಲಗಳನ್ನು ಹಂಚುವುದು ಹೇಗೆ ಎಂಬುದನ್ನು ಕಾರ್ಯಾಂಗವೇ ನಿರ್ಧರಿಸಬೇಕು. ಆದರೆ ಹೀಗೆ ನಿರ್ಧರಿಸುವಾಗ ಸದಾ ಸಾರ್ವಜನಿಕ ಒಳಿತನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು, ಅವನ್ನು ಸರಕಾರ ತನಗೆ ತೋಚಿದಂತೆ ಅಪಾರದರ್ಶಕ ವಿಧಾನಗಳಲ್ಲಿ ಬಕ್ಷೀಸಿನಂತೆ ಹಂಚಬಾರದು ಎಂದು ಸುಪ್ರಿಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂಬುದನ್ನು ಈ ಯುಪಿಎ-2 ವಕೀಲ ಮಂತ್ರಿಗಳು ಮರೆಮಾಚುತ್ತಾರೆ. 2ಜಿಯಲ್ಲಾಗಲೀ, ಕಲ್ಲಿದ್ದಲು ಗಣಿ ನೀಡಿಕೆಯಲ್ಲಾಗಲೀ ಇರುವ ಪ್ರಶ್ನೆ ಇದೇ, ತಮಗೆ ಬೇಕಾದವರಿಗೆ ಬಕ್ಷೀಸಿನಂತೆಯೇ ಹಂಚಿ ದೇಶದ ಬೊಕ್ಕಸಕ್ಕೆ ಅಗಾಧ ನಷ್ಟ ಉಂಟು ಮಾಡಲಾಗಿದೆ ಎಂಬುದನ್ನು ಅವರು ಮರೆಮಾಚುವ ಜಾಣ ಪ್ರಯತ್ನ ನಡೆಸಿದ್ದಾರೆ.



2ಜಿ ತರಂಗಾಂತರ ಹಂಚಿಕೆಯಲ್ಲಿ ಇದಕ್ಕೆ 'ಮೊದಲು ಬಂದವರಿಗೆ ಮೊದಲು ಸೇವೆ' ಎಂಬುದನ್ನು ಬಳಸಿಕೊಂಡು ದೇಶದ ಬೊಕ್ಕಸಕ್ಕೆ ಭಾರೀ ನಷ್ಟವುಂಟುಮಾಡಲಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯವೇ ಹೇಳಿದೆ. ಕಲ್ಲಿದ್ದಲು ಗಣಿಗಾರಿಕೆಯಂತೂ ರಾಷ್ಟ್ರೀಕೃತ ಉದ್ದಿಮೆ. ಅದನ್ನು ಖಾಸಗೀಕರಿಸಲಿಕ್ಕಾಗಿಯೇ ಗಣಿ ಹಂಚಿಕೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿ ಸ್ಪರ್ಧಾತ್ಮಕ ಹರಾಜು ಅನುಸರಿಸಬೇಕು ಎಂದು ಯಾರೂ ಹೇಳುತ್ತಿಲ್ಲ. ಅದು ಖಾಸಗೀಕರಣದತ್ತ ಮತ್ತೊಂದು ಹೆಜ್ಜೆಯೂ ಆಗುತ್ತದೆ ಎಂದೇ ಎಡಪಕ್ಷಗಳು ಎಚ್ಚರಿಸುತ್ತ ಬಂದಿವೆ. ಸ್ವತಃ ಸಿಎಜಿ ಕೂಡ ಕಲ್ಲಿದ್ದಲು ಗಣಿ ಹಂಚಿಕೆಯಲ್ಲಿ ಹರಾಜು ಪ್ರಕ್ರಿಯೆಯನ್ನು ಅನುಸರಿಸಬೇಕೆಂದು ತನ್ನ ವರದಿಯಲ್ಲಿ ತಾನು ಎಲ್ಲೂ ಹೇಳಿಲ್ಲ ಎಂದು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ದೇಶದ ಮಹಾಲೆಕ್ಕ ಪರಿಶೋಧಕರು ಸ್ಪಷ್ಟಪಡಿಸಿದ್ದಾರೆ. ಖಾಸಗಿಯವರಿಗೆ ಅಪಾರ ಲಾಭವಾಗುವಂತೆ ಮಾಡಲಾಗಿದೆ, ಇದರಿಂದ ದೇಶದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎಂದು ಲೆಕ್ಕ ಹಾಕಲು ಕೋಲ್ ಇಂಡಿಯಾದ ಬೆಲೆಗಳನ್ನು ಆಧರಿಸಲಾಗಿದೆ, ಇ-ಹರಾಜು ಅಥವ ಆಮದು ಬೆಲೆಗಳ ಆಧಾರದಲ್ಲಿ ಲೆಕ್ಕ ಹಾಕಿದ್ದರೆ, ಬೊಕ್ಕಸಕ್ಕೆ ಆಗಿರುವ ನಷ್ಟದ ಅಂದಾಜು ಇನ್ನೂ ಬಹಳ ಹೆಚ್ಚಿರುತ್ತಿತ್ತು ಎಂದು ಅವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ತಮ್ಮ ಲೆಕ್ಕಾಚಾರವನ್ನು ಸಮರ್ಥಿಸಿ ಕೊಂಡಿದ್ದಾರೆ.

ನಿಜವಾದ ಪ್ರಶ್ನೆಯೆಂದರೆ, ದೇಶದ ಖನಿಜ ಸಂಪತ್ತನ್ನು ಖಾಸಗಿ ದೇಶಿ-ವಿದೇಶಿ ಬೃಹತ್ ಖಾಸಗಿ ಕಂಪನಿಗಳ ಲೂಟಿಗೆ ವಹಿಸಿ ಕೊಡಬೇಕೇ ಎಂಬುದು. ಸಾರ್ವಜನಿಕ ಒಳಿತು ಗಮನಿಸಬೇಕು ಎಂದರೆ, ಈ ಸಂಪನ್ಮೂಲಗಳು, ಸಮತ್ವ, ತಾಳಿಕೆ ಮತ್ತು ಪರಿಸರದ ಪರಿಗಣನೆಗಳ ಪ್ರಕಾರ ಪ್ರಭುತ್ವದ ಒಡೆತನದಲ್ಲಿಯೇ ಇರಬೇಕು, ನೀರು ಕೂಡ ಇದರಲ್ಲಿ ಸೇರುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಖಾಸಗಿಯವರಿಗೆ ಅಗ್ಗ ದರಗಳಲ್ಲಿ ಕೊಡುವುದನ್ನೇನೂ ಇದು ಮಾನ್ಯ ಮಾಡುವುದಿಲ್ಲ.

ಈ ನಡುವೆ, ಇದೇ ಸುಪ್ರಿಂ ಕೋರ್ಟ್, ಸರಕಾರದ ಧೋರಣೆಯ ನಿರ್ಧಾರಗಳ ಬಗ್ಗೆ ವಿಮರ್ಶಾತ್ಮಕವಾಗಿ ಟಿಪ್ಪಣಿ ಮಾಡುವ ಅಧಿಕಾರ ಸಿಎಜಿಗಿದೆ, ಅದು ಅದರ ಕರ್ತವ್ಯ ಕೂಡ ಎಂದು ಈ ವಾರ ನೀಡಿರುವ ಇನ್ನೊಂದು ತೀರ್ಪಿನಲ್ಲಿ ಹೇಳಿದೆ. ಮಹಾಲೆಕ್ಕ ಪರಿಶೋಧಕರು ಎಂಬುದು ಒಂದು ಸಾಂವಿಧಾನಿಕ ಹುದ್ದೆ, ಅದು ಕಂಪೆನಿಯ ಅಥವ ಕಾರ್ಪೊರೇಶನ್‌ಗಳ ಆಡಿಟರ್‌ಗಳಂತೆ ಎಂದು ಗೊಂದಲ ಮಾಡಿಕೊಳ್ಳಬಾರದು ಎಂದಿರುವ ಸುಪ್ರಿಂ ಕೋರ್ಟ್, ಅದರ ಕೆಲಸ ಬ್ಯಾಲೆನ್ಸ್ ಶೀಟುಗಳನ್ನು ತಯಾರಿಸುವುದಲ್ಲ, ಈ ಸಂಪನ್ಮೂಲಗಳ ಬಳಕೆಯಲ್ಲಿ ಸರಕಾರದ ದಕ್ಷತೆ, ಸಾಮರ್ಥ್ಯ ಮತ್ತು ಎಷ್ಟು ಮಿತವ್ಯಯ ಪ್ರಯತ್ನಿಸಲಾಗಿದೆ ಎಂಬುದನ್ನು ಪರೀಕ್ಷಿಸುವ ಸಾಂವಿಧಾನಿಕ ಕರ್ತವ್ಯ ಸಿಎಜಿ ಮೇಲಿದೆ, ಅದನ್ನು ಸಿಎಜಿ ಮಾಡದಿದ್ದರೆ, ಇನ್ನಾರು ಮಾಡುತ್ತಾರೆ ಎಂದೂ ಅದು ಪ್ರಶ್ನಿಸಿದೆ.

★

ಹಗರಣ ಕಳಂಕಿತರಿಗೆ ಪುರಸ್ಕಾರ!

ಹಗರಣಗಳಲ್ಲಿ ಹೆಸರಿಸಲ್ಪಟ್ಟು ಜೈಲು ಸೇರಿ ಈಗ ಜಾಮೀನಿನ ಮೇಲೆ ಹೊರಗೆ ಬಂದಿರುವ ಯುಪಿಎ-2ರ ಮೂವರು ಸಂಸತ್ ಸದಸ್ಯರನ್ನು ವಿವಿಧ ಸಂಸದೀಯ ಸ್ಥಾಯೀ ಸಮಿತಿಗಳ ಸದಸ್ಯರನ್ನಾಗಿ ಮಾಡಲಾಗಿದೆ. 2ಜಿ 'ಖ್ಯಾತಿ'ಯ ಮಾಜಿ ದೂರಸಂಪರ್ಕ ಮಂತ್ರಿಗಳನ್ನು ಇಂಧನ, ಡಿಎಂಕೆಯ ಮುಖ್ಯಸ್ಥೆಯ ಪುತ್ರಿಯನ್ನು ಗೃಹ ವ್ಯವಹಾರಗಳು ಮತ್ತು ಕಾಮನ್ವೆಲ್ತ್ ಕ್ರೀಡಾಕೂಟ ಹಗರಣದ ಕೇಂದ್ರ ವ್ಯಕ್ತಿಯನ್ನು ವಿದೇಶಾಂಗ ವ್ಯವಹಾರಗಳು, ಈ ಮೂರು ಸಂಸದೀಯ ಸ್ಥಾಯೀ ಸಮಿತಿಗಳಿಗೆ ನೇಮಕ ಮಾಡಲಾಗಿದೆ. ಸುಪ್ರಿಂ ಕೋರ್ಟ್ ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆಯ ವಿಧಾನ ಕುರಿತಂತೆ ತನ್ನ ಪರವಾದ ತೀರ್ಪು ನೀಡಿದೆ, ವಾಸ್ತವವಾಗಿ ಇವೆಲ್ಲ ಹಗರಣಗಳೇ ಅಲ್ಲ ಎಂಬುದನ್ನು ಸ್ಥಾಪಿಸುವ ಇನ್ನೊಂದು ಕ್ರಮ ಇದಾಗಿರಬಹುದೇ?

ಆವಶ್ಯಕ ಔಷಧಿಗಳ ಪಟ್ಟಿಗೆ 9 ವರ್ಷ ಬೇಕೇ?–ಸುಪ್ರಿಂ ಕೋರ್ಟ್ ಪ್ರಶ್ನೆ

2003ರಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಔಷಧಿ ಬೆಲೆಗಳ ಮೇಲೆ ಹತೋಟಿಗಾಗಿ ಅತ್ಯಂತ ಆವಶ್ಯಕ ಔಷಧಿಗಳ ಪಟ್ಟಿಯನ್ನು ವಿಸ್ತರಿಸಿ ಸಲ್ಲಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಹೇಳಿತ್ತು. ಆಮೇಲೆ ಹಲವು ಬಾರಿ ಇದನ್ನು ನೆನಪಿಸಿತ್ತು. ಸರಕಾರ ಒಂದು ಅಧಿಕಾರಿಕ ಮಂತ್ರಿ ಗುಂಪನ್ನೂ ಇದಕ್ಕೆ ರಚಿಸಿತ್ತು. ಆದರ ಒಂಭತ್ತು ವರ್ಷಗಳಾದರೂ ಈ ಗುಂಪಿನ ಶಿಫಾರಸು ಇದುವರೆಗೂ ಬಂದಿಲ್ಲ. ಸದಾ ಎಫ್‌ಡಿಐ ಗೆ ಅವಕಾಶ ನೀಡುವ ತರಾತುರಿಯಲ್ಲಿರುವ ಸರಕಾರಕ್ಕೆ ಇದಕ್ಕೆ ಪುರುಸೊತ್ತಾದರೂ ಎಲ್ಲಿ? ಬೇಸತ್ತ ಸುಪ್ರಿಂ ಕೋರ್ಟ್ ಈ ವಾರ ಮತ್ತೊಮ್ಮೆ ಯುಪಿಎ-2 ಸರಕಾರ ಒಂದು ವಾರದೊಳಗೆ, ಈ ಪಟ್ಟಿಯನ್ನು ಸಲ್ಲಿಸಲು ಅದಕ್ಕೆ ಇನ್ನೆಷ್ಟು ಸಮಯ ಬೇಕು ಎಂದು ನಿಖರವಾಗಿ ಹೇಳುವಂತೆ ತಾಕೀತು ಮಾಡಿದೆ. ಔಷಧಿ ಬೆಲೆಗಳು ಯಾವ ಮಟ್ಟದಲ್ಲಿವೆಯೆಂದರೆ ಜನಸಾಮಾನ್ಯರಿಗೆ ಇರುವ ಆಯ್ಕೆಯೆಂದರೆ ಕಾಯಿಲೆಯಿಂದ ಸಾಯುವುದು ಅಥವ ತನ್ನ ಮನೆಮಾರುಗಳನ್ನು ಮಾರಿ ಔಷಧಿಗೆ ಸುರಿದು ಬದುಕುವುದು ಎಂದು ಸುಪ್ರಿಂ ಕೋರ್ಟ್ ಟಿಪ್ಪಣಿ ಮಾಡಿದೆ. ಒಂಭತ್ತು ವರ್ಷವಾದರೂ ಏಕೆ ಏನೂ ಆಗಿಲ್ಲ, ಸರಕಾರ ನ್ಯಾಯಾಲಯ ಮಧ್ಯ ಪ್ರವೇಶಿಸಿದಾಗ ಮಾತ್ರ ಚಲನೆ ತೋರುತ್ತದೆ ಏಕೆ ಎಂದೂ ಅದು ಟಿಪ್ಪಣಿ ಮಾಡಿದೆ.

ಈ ಟಿಪ್ಪಣಿಯ ಹಿನ್ನೆಲೆಯಲ್ಲಿ ಒಂದೆಡೆ ಯುಪಿಎ-2

ಪುಟ 15ಕ್ಕೆ

ಜಗದಗಲ

ಶರತ್‌ಚಂದ್ರ

ಅಮೆರಿಕದ ಜನತೆಗೆ 'ಅತ್ತ ದರಿ ಇತ್ತ ಪುಲಿ'

ಅಮೆರಿಕದ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಅಧ್ಯಕ್ಷೀಯ ಚುನಾವಣೆಗಳ ಬಿಸಿ ಶುರುವಾಗಿದೆ. ಪಕ್ಷದ ಒಳಗಿನ ಪ್ರಾಥಮಿಕ ಚುನಾವಣೆಗಳು ನಡೆದು, ಡೆಮೊಕ್ರಾಟ್ ಅಭ್ಯರ್ಥಿಯಾಗಿ ಬರಾಕ್ ಒಬಾಮಾ ಮತ್ತು ರಿಪಬ್ಲಿಕನ್ ಅಭ್ಯರ್ಥಿಯಾಗಿ ಮಿಟ್ ರೊಮ್ನಿ ಚುನಾಯಿತರಾಗಿದ್ದಾರೆ. ಇಬ್ಬರೂ ಚುನಾವಣೆ ಪ್ರಚಾರ ಆರಂಭಿಸಿದ್ದಾರೆ. ರಿಪಬ್ಲಿಕನ್ ಅಭ್ಯರ್ಥಿ ರೊಮ್ನಿ, ಪಾಲ್ ರ್‍ಯಾನ್ ಅವರನ್ನು ತಮ್ಮ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಪ್ರಸ್ತುತ ಉಪಾಧ್ಯಕ್ಷ ಜೊ ಬಿಡೆನ್ ಡೆಮೊಕ್ರಾಟ್ ಉಪಾಧ್ಯಕ್ಷ ಅಭ್ಯರ್ಥಿಯಾಗಿರುತ್ತಾರೆ.

ರಿಪಬ್ಲಿಕನ್ ಅಧ್ಯಕ್ಷ ಅಭ್ಯರ್ಥಿ ಮಿಟ್ ರೊಮ್ನಿ 2003–2007 ಅವಧಿಯಲ್ಲಿ ಮಸಾಚುಸೆಟ್ಸ್ ಗವರ್ನರ್ ಆಗಿದ್ದವರು. ಅವರ ತಂದೆ ಸಹ 1963–1969 ಅವಧಿಯಲ್ಲಿ ಮಿಚಿಗನ್ ಗವರ್ನರ್ ಆಗಿದ್ದವರು. ರೊಮ್ನಿ 2008ರಲ್ಲಿ ರಿಪಬ್ಲಿಕನ್ ಪಕ್ಷದ ಒಳಗಿನ ಪ್ರಾಥಮಿಕ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದರು. ಬೈನ್ ಎಂಬ ಕಂಪನಿಯ ಮುಖ್ಯಸ್ಥರಾಗಿದ್ದ ರೊಮ್ನಿ ಬೈನ್ ಕ್ಯಾಪಿಟಲ್ ಎಂಬ ಬಂಡವಾಳ ಹೂಡಿಕೆ ಕಂಪನಿಯನ್ನು ಸ್ಥಾಪಿಸಿದ್ದರು. ಕೋಟ್ಯಾಧೀಶ (ವಾರ್ಷಿಕ ಆದಾಯ 25 ಕೋಟಿ ಡಾಲರ್) ರಾಗಿರುವ ರೊಮ್ನಿ ತಮ್ಮ ಆದಾಯ ತೆರಿಗೆ ಸಂದಾಯ ಬಹಿರಂಗ ಪಡಿಸಲು ನಿರಾಕರಿಸಿದ್ದಾರೆ.

ರಿಪಬ್ಲಿಕನ್ ಉಪಾಧ್ಯಕ್ಷ ಅಭ್ಯರ್ಥಿ 42 ವರ್ಷದ ಪಾಲ್ ರ್‍ಯಾನ್ ಪ್ರತಿನಿಧಿ ಸಭೆಯಲ್ಲಿ ವಿಸ್ಕೊನ್ಸಿನ್ ಯುವ ಪ್ರತಿನಿಧಿಯಾಗಿದ್ದು, ಬಜೆಟ್ ಸಮಿತಿಯ ಪ್ರಬಲ ಮುಖ್ಯಸ್ಥ. ವೃದ್ಧರ ಆರೋಗ್ಯ ಸೇವೆ ಮತ್ತು ಇತರ ಕಲ್ಯಾಣ ಸವಲತ್ತುಗಳನ್ನು ತೀವ್ರವಾಗಿ ಕಡಿತ ಮಾಡಿದ ಬಜೆಟ್ ಪ್ರಸ್ತಾವ ಮಂಡಿಸಿ ಕುಖ್ಯಾತರಾಗಿದ್ದರು. ರಿಪಬ್ಲಿಕನ್ ಪಕ್ಷದ ಒಳಗೆ ಕೆಲಸ ಮಾಡುತ್ತಿರುವ ಉಗ್ರ ಬಲಪಂಥೀಯ ಟೀ ಪಾರ್ಟಿಯ ಕಣ್ಮಣಿ. ರೊಮ್ನಿ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಮಹಿಳೆ ಅಥವಾ ಕರಿಯ ಅಥವಾ ಲ್ಯಾಟಿನೊ ವ್ಯಕ್ತಿಯನ್ನು ಆರಿಸಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ.



ಎರಡೂ ಪಕ್ಷಗಳ ಅಭ್ಯರ್ಥಿ ಗೊತ್ತಾದ ಮೇಲೆ ಅಗಸ್ಟ್‌ನಲ್ಲಿ ನಡೆದ ಮೊದಲ ಚುನಾವಣಾ-ಪೂರ್ವ ಸಮೀಕ್ಷೆಯಲ್ಲಿ ಒಬಾಮಾ ಶೇ.49 ಮತ್ತು ರೊಮ್ನಿ ಶೇ.46 ಬೆಂಬಲ ಪಡೆದಿದ್ದರು. ಪ್ರಸ್ತುತ ಅಧ್ಯಕ್ಷರಿಗೆ ಶೇ.3 ಮುನ್ನಡೆ ಬಹಳ ಚಿಕ್ಕದು. ಆದರೆ ಇತ್ತೀಚೆಗೆ ಒಬಾಮಾ ಪ್ರಮುಖ ಹೊಯ್ದಾಡುವ ರಾಜ್ಯಗಳು ಎಂದು ಪರಿಗಣಿಸಲಾದ ಎರಡು ರಾಜ್ಯಗಳಲ್ಲಿ ನಡೆದ



ಸಮೀಕ್ಷೆಗಳಲ್ಲಿ – ಫ್ಲೋರಿಡಾದಲ್ಲಿ ಶೇ.53 (ರೊಮ್ನಿ ಶೇ.44), ಒಹಾಯೊದಲ್ಲಿ ಶೇ. 53 (ರೊಮ್ನಿ ಶೇ.43)ರ ಭಾರೀ ಮುನ್ನಡೆ ಸಾಧಿಸಿದ್ದಾರೆ. ಆದರೆ ಮುಂದಿನ ಎರಡು ತಿಂಗಳುಗಳಲ್ಲಿ ಸಾಕಷ್ಟು 'ತಮಾಶಾ' ನಡೆಯಲಿದ್ದು ಈ ಸಮೀಕ್ಷೆಗಳಲ್ಲಿ ಕಂಡಂತೆ ಬೆಂಬಲ ಸಾಕಷ್ಟು ಹೊಯ್ದಾಡಲಿದೆ.

ಒಬಾಮಾರ ಪುನರಾಯ್ಕೆ ಮಾಡಬೇಕೆ ?

ಅಮೆರಿಕದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯ್ಕೆ ಬಹಳ ಸೀಮಿತ. ಎಲ್ಲವೂ ಪ್ರಚಾರ ಮತ್ತು ಅದಕ್ಕೆ ಬೇಕಾದ ಭಾರೀ ಹಣದ ಮೇಲೆ ಅವಲಂಬಿಸಿರುತ್ತದೆ. ಮಿಲಿಟರಿ–ಕೈಗಾರಿಕಾ ಸಂಕೀರ್ಣ, ಬ್ಯಾರಿಕು ಮುಂತಾದ ದೈತ್ಯ ಹಣಕಾಸು ಸಂಸ್ಥೆಗಳು, ದೈತ್ಯ ಮಾಧ್ಯಮ ಸಂಸ್ಥೆಗಳು, ಜ್ಯೂ ಲಾಬಿ ಮತ್ತು ಇವೆಲ್ಲದರ ಬೆಂಬಲ ಪಡೆದ ಗಣ್ಯರ ಬೆಂಬಲ ಪಡೆಯದ ಯಾವುದೇ ಅಭ್ಯರ್ಥಿ ಇಂತಹ ಭಾರೀ ಹಣ ಸಂಗ್ರಹಿಸುವುದು ಸಾಧ್ಯವಿಲ್ಲ. ಯಾವನೇ ಅಧ್ಯಕ್ಷನಾಗಿ ಚುನಾಯಿತನಾದ ಮೇಲೆ (ಅವನ ಅಭಿಪ್ರಾಯಗಳು ಏನೇ ಇರಲಿ, ಆತ ಜನಬೆಂಬಲ ಯಾವುದೇ ನೀತಿಗಳ ಮೇಲೆ ಗಳಿಸಿರಲಿ) ಇವರ ವಿರುದ್ಧ ಹೋಗಲು ಸಾಧ್ಯವಿಲ್ಲ. ಇದು ಅಧ್ಯಕ್ಷರಾಗಿ ಒಬಾಮಾರ ಕಳೆದ ನಾಲ್ಕು ವರ್ಷಗಳ 'ಸಾಧನೆ'ಗಳನ್ನು ನೋಡಿದರೆ ತಿಳಿಯುತ್ತದೆ.

ಒಬಾಮಾರ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಆರೋಗ್ಯ ಸೇವಾ ಯೋಜನೆ ಬಿಟ್ಟರೆ(ಅದೂ ಬಹಳ ಆಂಶಿಕವಾಗಿ) ಯಾವುದೂ ಈಡೇರಿಲ್ಲ. 2008ರ ಬಿಕ್ಕಟ್ಟಿಗೆ ಕಾರಣವಾದ ಹಣಕಾಸು ಸಂಸ್ಥೆಗಳ ಮೇಲೆ ಬಿಗಿ ಕ್ರಮ ತೆಗೆದು ಕೊಳ್ಳುವ ಬದಲು ಅವರಿಗೆ ಭಾರೀ ಬೆಲೌಟ್ ಕೊಡಲಾಯಿತು. ಉದ್ಯೋಗ ಸೃಷ್ಟಿ ಮಾಡುವ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನದ ಪರಿಣಾಮ ಬಹಳ ಸೀಮಿತವಾಗಿತ್ತು. ನಾಲ್ಕು ವರ್ಷಗಳ ನಂತರ 30 ಲಕ್ಷ ಹೆಚ್ಚು ನಿರುದ್ಯೋಗಿಗಳು ಇದ್ದಾರೆ. ಭಯೋತ್ಪಾದಕತೆ ವಿರುದ್ಧ ಯುದ್ಧದ ಹೆಸರಲ್ಲಿ, ಗ್ವಾಟನಾಮೊ ಜೈಲು ಮತ್ತಿತರ ಮಾನವ ಹಕ್ಕುಗಳ ಮೇಲೆ ಕಾನೂನು–ವಿರೋಧಿ ಬರ್ಬರ ಹಲ್ಲೆಗಳನ್ನು



ನಿಲ್ಲಿಸುವ ಭರವಸೆ ಹುಸಿಯಾಗಿದೆ. ಗ್ವಾಟನಾಮೊ ಇನ್ನೂ ತೆರೆದಿದೆ. 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳುವಳಿಯಂತಹ ಶಾಂತಿಯುತ ಪ್ರತಿಭಟನೆಗಳನ್ನು ದಮನ ಮಾಡುವ ನೀತಿ ಬುಶ್ ನೀತಿಗಿಂತ ಬೇರೆಯದಲ್ಲ.

ಮಿಲಿಟರಿ ಮಧ್ಯಪ್ರವೇಶಗಳನ್ನು ನಿಲ್ಲಿಸುವ ಅಫ್ಘಾನಿಸ್ತಾನದಿಂದ ಮಿಲಿಟರಿ ಹಿಂತೆಗೆಯುವ ಭರವಸೆ ಬದಲು ಡ್ರೋನ್ ದಾಳಿಗಳಲ್ಲಿ ಅಮಾಯಕ ನಾಗರಿಕರ ಕೊಲೆಗಳು ಬುಶ್ ಅವಧಿಗಿಂತಲೂ ಹೆಚ್ಚಾಗಿದೆ. ಮಿಲಿಟರಿ ಅತಿಕ್ರಮಣದಿಂದ ಸರ್ಕಾರ ಬದಲಾವಣೆ ಮಾಡುವ ಬುಶ್ ನೀತಿ ನಿಲ್ಲಿಸುವ ಬದಲು ಲಿಬ್ಯಾ ಮತ್ತು ಸಿರಿಯಾಗಳಲ್ಲಿ ಮುಂದುವರೆದಿದೆ. ಇತರ ಪ್ರಮುಖ ಶಕ್ತಿರಾಷ್ಟ್ರಗಳ ಜತೆ ಸಂಬಂಧ ಉತ್ತಮಪಡಿಸಿ ಜಾಗತಿಕ ಶಾಂತಿ ಸ್ಥಾಪಿಸುವ ಭರವಸೆ ಸಹ ಈಡೇರಿಲ್ಲ. ರಶ್ಯಾ ಮತ್ತು ಚೀನಾ ವಿರುದ್ಧ ಕತ್ತಿ ಮಸೆಯಲಾಗುತ್ತಿದೆ. ಹವಾಮಾನ ಬದಲಾವಣೆಯಂತಹ ತೀವ್ರ ಪರಿಸರ ಸಮಸ್ಯೆಗಳಿಗೆ ಅಮೆರಿಕ ಜವಾಬ್ದಾರಿಯುತವಾಗಿ ಸ್ಪಂದಿಸುವ ನಿರೀಕ್ಷೆ ಸಹ ಕೊಪನ್ ಹೇಗನಿನಲ್ಲಿ ಸುಳ್ಳಾಗಿದೆ. 8 ವರ್ಷಗಳ ಬುಶ್ ಅಧ್ಯಕ್ಷೀಯ ಅವಧಿಯ ಬಳುವಳಿಯಾಗಿ ಒಬಾಮಾರಿಗೆ ಬಂದ ಆರ್ಥಿಕ, ಅಂತರ್ರಾಷ್ಟ್ರೀಯ ಸನ್ನಿವೇಶಗಳ ದುಸ್ಥಿತಿಯನ್ನು ಪರಿಗಣಿಸಿದರೂ, ನಿರ್ಣಾಯಕ ಬದಲಾವಣೆಗೆ ಗಂಭೀರ ಪ್ರಯತ್ನ ಸಹ ಮಾಡದ ಒಬಾಮಾರ ವೈಫಲ್ಯ ಕಣ್ಣಿಗೆ ರಾಚುವಂತಿದೆ.

ರೊಮ್ನಿಯ "ಭಯಾನಕ' ಬದಲಿ

ಆದರೆ 'ವಚನಭ್ರಷ್ಟ' ಒಬಾಮಾರನ್ನು ಸೋಲಿಸಿ ಬುದ್ಧಿ ಕಲಿಸಬೇಕು ಎಂದು ರೇಗುವ ಸ್ವಾತಂತ್ರ್ಯ ಅಮೆರಿಕನ್ ಮತದಾರನಿಗೆ ಇಲ್ಲ. ಯಾಕೆಂದರೆ ಒಬಾಮಾರಿಗೆ ಇರುವ ಬದಲಿ ಇನ್ನೂ "ಭಯಾನಕ'ವಾದದ್ದು. ಅಂತಹ ಸ್ಪಷ್ಟ ರಾಜಕೀಯ ನಿಲುವುಗಳಿಲ್ಲದ ರೊಮ್ನಿ ತೆಗೆದುಕೊಂಡ ನಿಲುವುಗಳು ಅಭೂತಪೂರ್ವ ಬಿಕ್ಕಟ್ಟಿನ ಹೊಡೆತ ತಿನ್ನುತ್ತಿರುವ ಅಮೆರಿಕದ ಜನತೆಗೆ ಸಮಾಧಾನ ತರುವಂತಹದ್ದಲ್ಲ. ಸಾಮಾಜಿಕ ಭದ್ರತೆ ಹಣವನ್ನು ಶೇರು ಮಾರುಕಟ್ಟೆಯಲ್ಲಿ ಹೂಡುವ ಬಗ್ಗೆ ಕೇಳಿದಾಗ, ಶೇರು ಮಾರುಕಟ್ಟೆ ಕುಸಿದರೆ ಸಾಮಾಜಿಕ ಭದ್ರತೆ ಸಹ ಕುಸಿಯುತ್ತದೆ, ತಪ್ಪೇನು ? ಎಂದು ಉತ್ತರಿಸಿದ ಭೂಪ ಈತ. ಸಾಮಾಜಿಕ ಭದ್ರತೆ ಉತ್ತಮ ಪಡಿಸಲು ನಿವೃತ್ತಿ ವಯಸ್ಸು ಕೆಲವು ವರ್ಷಗಳಷ್ಟು ಏರಿಸಿದರಾಯ್ತು ಎಂಬ ಸರಳ ಪರಿಹಾರ ರೊಮ್ನಿಯದು.

ವೃದ್ಧರು ಮತ್ತು ಅಶಕ್ತರ ಆರೋಗ್ಯ ಸೇವೆಗೆ ಜಾರಿಯಲ್ಲಿರುವ ಮೆಡಿಕೇರ್ ಮತ್ತು ಒಬಾಮಾ ತಂದ ಸ್ವಲ್ಪವಾದರೂ ಜನ–ಸ್ನೇಹಿ ಆರೋಗ್ಯ ಸೇವೆ ಕಾನೂನನ್ನು ಕಿತ್ತು ಹಾಕುತ್ತೇನೆ ಎಂದು ಘಂಟಾಘೋಷವಾಗಿ ಹೇಳಿದ್ದಾರೆ ರೊಮ್ನಿ. ರಾಷ್ಟ್ರೀಯ ಸಾಲ ಹೆಚ್ಚಳದ ಬಗ್ಗೆ ಚಿಂತೆ ಮಾಡುವ ರೊಮ್ನಿಗೆ, ಅದಕ್ಕೆ ಕಾರಣವಾದ ಹೊಸ ಶಸ್ತ್ರಾಸ್ತ್ರಗಳ ಮೇಲೆ ಹೆಚ್ಚಿನ ಖರ್ಚು ಮತ್ತು ಇರಾಕ್ ಅಫ್ಘಾನಿಸ್ತಾನದಂತಹ ಯುದ್ಧಗಳನ್ನು ಬೆಂಬಲಿಸುವುದಕ್ಕೆ ಯಾವುದೇ ಮುಲಾಜು ಇಲ್ಲ. ಸಿರಿಯಾ ಮತ್ತು ಇತರ ದೇಶಗಳಲ್ಲಿ ನಿರ್ಣಾಯಕ ಮಿಲಿಟರಿ ದಾಳಿ ನಡೆಸಬೇಕು ಎನ್ನುತ್ತಾರೆ ರೊಮ್ನಿ.

ಒಟ್ಟಾರೆಯಾಗಿ ರೊಮ್ನಿ ಆಯ್ಕೆಯಾದರೆ 'ಬುಶ್ ಕತ್ತಲ ಯುಗ' ಪುನಃ ಬಂದಂತೆ. ಒಬಾಮಾ ಪುನರಾಯ್ಕೆಯಾದರೆ ಮುಂದಿನ 4 ವರ್ಷಗಳು ಯಥಾಸ್ಥಿತಿ ಮುಂದುವರೆಯಬಹುದು. ಮಾತ್ರವಲ್ಲ ರಿಪಬ್ಲಿಕನ್ ಪಕ್ಷ ಸೋತರೆ ಅದು ಕುಸಿದು ಟೀ ಪಾರ್ಟಿಯಂತಹ ಫ್ಯಾಸಿಸ್ಟ್ ಪಕ್ಷ ಪ್ರಮುಖ ವಿರೋಧ ಪಕ್ಷವಾಗಬಹುದು. ಅಥವಾ ರಿಪಬ್ಲಿಕನ್ ಪಕ್ಷವೇ ಟೀ ಪಾರ್ಟಿಯಂತಹ ಫ್ಯಾಸಿಸ್ಟ್ ನೀತಿಗಳನ್ನು ಅಪ್ಪಿಕೊಳ್ಳಬಹುದು. ನಿರ್ಣಾಯಕ ಬದಲಾವಣೆಯಂತೂ ಸಾಧ್ಯವಿಲ್ಲ. ಇದು ಅಮೆರಿಕನ್ ಮತದಾರ ಎದುರಿಸುತ್ತಿರುವ 'ಅತ್ತ ದರಿ ಇತ್ತ ಪುಲಿ' ಪರಿಸ್ಥಿತಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾವೇರಿ ವಿವಾದ–ಭಾವೋನ್ಮಾದ.....

ಪುಟ 3 ರಿಂದ

ಈ 'ಕಾಳಜಿ' ನಾಟಕವಲ್ಲದೇ ಮತ್ತೇನು?

ಈಗಲೂ ಇಲ್ಲಿ ಹೋರಾಟವನ್ನು ಬೆಂಬಲಿಸುವ, ಕಣ್ಣೀರು ಸುರಿಸುವ, ರಾಜೀನಾಮೆ ಸಲ್ಲಿಸುವ, ಕೇಂದ್ರವನ್ನು ಟೀಕಿಸುವ, ಸಮರ್ಥಿಸುವ ಪಕ್ಷಗಳು ನಿಜಕ್ಕೂ ಹಿಂದೆಲ್ಲಾ ಏನು ಮಾಡಿದವು. ಈ ಪ್ರಶ್ನೆ ಬೀದಿಯಲ್ಲಿ ಇತ್ಯರ್ಥವಾಗುವುದಿಲ್ಲವೆಂದು ಹೇಳಿದ್ದ ಬಿಜೆಪಿ ಸರಕಾರ ಮತ್ತು ಆಡಳಿತ ಪಕ್ಷ ಪ್ರಾಧಿಕಾರದ ಸಭೆಯಲ್ಲಿ ತನ್ನ ಪಾಲಿನ ಹೊಣೆಯನ್ನು ಈಗ ನಿಭಾಯಿಸಿತೇ? ಸರಿಯಾದ ವಾಸ್ತವಾಂಶಗಳನ್ನಿಟ್ಟು ಸಮರ್ಥವಾದ ಕಾರಣಗಳನ್ನು ವಿವರಿಸಿ, ತಮಿಳುನಾಡಿಗೆ ಹರಿಸಲು ಸಾಧ್ಯವಿರುವ ನೀರಿನ ಪ್ರಮಾಣವನ್ನಾದರೂ ವಿವರಿಸಿತೇ? ಅಲ್ಲಿ ಏನೂ ಮಾಡದೇ ಪ್ರಾಧಿಕಾರದ ಮೇಲೆಯೇ ಪೂರ್ಣ ಹೊಣೆ ಹಾಕಿ ಈಗ ಬೊಬ್ಬೆ ಹೊಡೆದರೆ ಹೇಗೆ? ಈ ಎಡಬಿಡಂಗಿತನದ ಉದ್ದೇಶವಾದರೂ ಏನು. ಇನ್ನು ಮುಂದಾದರೂ ನ್ಯಾಯಾಲಯದ ಮುಂದೆ ಸರಿಯಾಗಿ ವಾದ ಹೂಡದಿದ್ದರೆ ಏನಾದೀತು? ಹಾಗೆಯೇ ಆರಂಭದಲ್ಲಿ ಪ್ರಾಧಿಕಾರದ ಸೂಚನೆಯನ್ನು ಅರ್ಥಾತ್ ಪ್ರಧಾನಿ ನಿರ್ದೇಶನವನ್ನು ಸಮರ್ಥಿಸಿ ನಂತರ ಜನರ ಆಕ್ರೋಶ ಎದುರಿಸಬೇಕಾಗುತ್ತದೆ ಎಂದಾಗ ಕಾಂಗ್ರೆಸ್ ಪಕ್ಷವು ರಾಜಕಾರಣ ಮಾಡಲು ಮುಂದಾಗಿರುವುದು ವಂಚನೆಯಲ್ಲವೇ? ಆಡಳಿತದ, ರಾಷ್ಟ್ರೀಯ ಪಕ್ಷವೊಂದು ಹೀಗೆ ಸಂಕುಚಿತ ನಿಲುಮೆ ತಾಳಿದರೆ ಹೇಗೆ? 'ನೀರು ಬಿಡಲಾಗದು ಎಂದು ಹೇಳಲಾಗದು ಬಿಡಬೇಕು' ಎಂದೆಲ್ಲಾ ಸಂವಿಧಾನಾತ್ಮಕ ಹೊಣೆಗಾರಿಕೆಯಿಂದ ಮಾತನಾಡಿದ ಜೆಡಿಎಸ್ ಪಕ್ಷ ನಂತರದಲ್ಲಿ ಮಂಡ್ಯ ಜಿಲ್ಲೆಯ ನಾಲ್ಕು ಶಾಸಕರು, ಒಬ್ಬ ಸಂಸದರ ರಾಜೀನಾಮೆ ಬರೆಸಿ ಇಟ್ಟುಕೊಂಡ ಉದ್ದೇಶವಾದರೂ ಏನು? ಅದು ನೀರು ತಂದೀತೇ? ಅಲ್ಲಿ ರೈತರೆದುರು ಮಾಜಿ ಪ್ರಧಾನಿಗಳು ಕಣ್ಣೀರು ಸುರಿಸಿ ಭಾವೋನ್ಮಾದ ಪ್ರಚೋದಿಸುವ ಅಗತ್ಯವಾದರೂ ಏನಿತ್ತು?

ಇವರೆಲ್ಲರ ನಡೆ ನುಡಿಯಲ್ಲಿ ಮುಂಬರುವ ಚುನಾವಣೆಯದ್ದೇ ಚಿಂತೆ, ಓಟಿನ ಕಾಳಜಿ!. ಕಾವೇರಿ ನೀರಿನ ವಿಷಯದಲ್ಲಿ ಒಬ್ಬರು ಇನ್ನೊಬ್ಬರಿಗಿಂತ ಮೇಲುಗೈ ಸಾಧಿಸಲು, ಕಾಳಜಿಯಲ್ಲಿ ತಾವೇ ಅಮೋಘ, ಅನನ್ಯ ಎಂದು ತೋರಿಸಲು ಸ್ಪರ್ಧೆ. ಕಾವೇರಿ ಕೊಳ್ಳದಜಿಲ್ಲೆಗಳಲ್ಲಿ ಬಿಜೆಪಿಗೆ ಇಲ್ಲದ ನೆಲೆಯನ್ನು ಕಂಡುಕೊಳ್ಳಲು ಸದು ರಾಜಕೀಯ ಮಾಡುತ್ತಿದೆ. ಕಾಂಗ್ರೆಸ್ ಪಕ್ಷ ಆ ಪ್ರದೇಶದಲ್ಲಿ ಜೆಡಿಎಸ್ ಬಲವನ್ನು ಕುಗ್ಗಿಸಲು ಹೊಂಚು ಹಾಕುತ್ತಿದೆ. ಜೆಡಿಎಸ್ ತನ್ನ ನೆಲೆಯನ್ನು ಉಳಿಸಿಕೊಳ್ಳಲು ಹೆಣಗಾಡಿತ್ತಿದೆ. ಯಡಿಯೂರಪ್ಪ ಸಹ ಈಗ ರಂಗ ಪ್ರವೇಶ ಮಾಡಿ ತನ್ನ ಬೇಳೆ ಬೇಯಿಸಿಕೊಳ್ಳಲು ಹೊರಟಿದ್ದಾರೆ.

ಸಹಬಾಳ್ವೆ– ಗೌರವವಿರಲಿ

ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ.ನ್ಯಾಯಾಲಯದ, ಸಂವಿಧಾನಾತ್ಮಕ ಸಂಸ್ಥೆಗಳ ನಿರ್ಣಯಗಳನ್ನು ಗೌರವಿಸಬೇಕಾದ, ಪಾಲಿಸಬೇಕಾದ ಹೊಣೆ ಒಕ್ಕೂಟದ ಎಲ್ಲಾ ರಾಜ್ಯಗಳ ಮೇಲಿದೆ. ನಿಜ, ಪ್ರಕೃತಿಯ ಕಾರಣದಿಂದ ಈ ಬಾರಿ ಮಳೆಯ ಕೊರತೆಯಿಂದ ಹಿಂದಿಗಿಂತ ನೀರಿನ ಸಂಗ್ರಹದಲ್ಲಿ ಕೊರತೆಯುಂಟಾಗಿದೆ. ಇದು ಎಂಟು ವರುಷಗಳ ಬಳಿಕ ಪುನರಾವರ್ತನೆಯಾಗಿದೆ. ಈ ಸ್ಥಿತಿಯ ಪರಿಣಾಮಗಳನ್ನು ಉಭಯ ರಾಜ್ಯಗಳ ರೈತರು ಅನುಭವಿಸಬೇಕಾಗಿದೆ. ಕಾವೇರಿ ನದಿ ಒಂದು ಜಿಲ್ಲೆಯ, ರಾಜ್ಯದ ಸ್ವತ್ತೇನಲ್ಲ. ಅದು ರಾಷ್ಟ್ರೀಯ ಸಂಪತ್ತು. ಹೀಗಾಗಿ ಇರುವಷ್ಟರಲ್ಲಿಯೇ ನೀರನ್ನೂ,ಸಂಕಷ್ಟಗಳನ್ನೂ ಹಂಚಿಕೊಳ್ಳುವುದೂ, ಸಹ ಬಾಳ್ವೆ ನಡೆಸುವುದೂ ಅನಿವಾರ್ಯ. ಅದಕ್ಕಾಗಿ ಸೌಹಾರ್ಧಯುತವಾಗಿಯೇ ಪರಸ್ಪರ ಮಾತುಕತೆ ಸಂಧಾನ, ಇಲ್ಲವಾದಲ್ಲಿ ನ್ಯಾಯಾಲಯದ ಮೂಲಕ ಬಗೆಹರಿಸಿಕೊಳ್ಳಬೇಕು.

ಅಂತೂ ಈಗಲಾದರೂ ಸರಕಾರ ನ್ಯಾಯಾಧಿಕರಣದ ತೀರ್ಪನ್ನು ಪುನರ್ ಪರಿಶೀಲಿಸಬೇಕೆಂದು ಮೇಲ್ಮನವಿ ಸಲ್ಲಿಸುತ್ತಿರುವುದು ಸ್ವಾಗತಾರ್ಹ. ಸರಕಾರ ವಾಸ್ತವಗಳ ಆಧಾರದಲ್ಲಿ ಸಮರ್ಥವಾಗಿ ತನ್ನ ವಾದ ಮಂಡಿಸಿ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳಲು ಮುಂದಾಗಬೇಕು.ದೊರೆತ ಅವಕಾಶವನ್ನು ಕಳೆದುಕೊಳ್ಳಬಾರದು. ಸಂಕಷ್ಟ ಸೂತ್ರವನ್ನು ಕೂಡಲೇ ರೂಪಿಸಬೇಕು.

ಈ ಕೂಡಲೇ ಎಲ್ಲರೂ ಜನತೆಯನ್ನು ಭಾವೋದ್ರೇಕಗೊಳಿಸುವ ಯತ್ನಗಳನ್ನು ನಿಲ್ಲಿಸಿ ಶಾಂತಿ, ಸೌಹಾರ್ದತೆ ಕಾಪಾಡಲು ಮುಂದಾಗಬೇಕು. ವಿಶೇಷವಾಗಿ ಬಂದ್ ದಿನ, ನಂತರದಲ್ಲಿಯೂ ತಮಿಳು ಭಾಷಿಕರು, ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆಯ ಹೊಣೆ ಎಲ್ಲರದ್ದೂ ಆಗಬೇಕು. ●

ಯುಪಿಎ ದರ್ಬಾರ್...

ಪುಟ 13 ರಿಂದ

ಸರಕಾರಕ್ಕೆ ಸುಪ್ರಿಂ ಕೋರ್ಟನ್ನು ತೃಪ್ತಿ ಪಡಿಸಲು 348 ಆವಶ್ಯಕ ಔಷಧಿಗಳ ಪಟ್ಟಿಯನ್ನು ಕೊಡದಿರಲು ಸಾಧ್ಯವಿಲ್ಲವಾದರೆ, ಇನ್ನೊಂದೆಡೆ ತನ್ನ ನವ–ಉದಾರವಾದಿ ತೆವಲಿಗೆ ಅನುಗುಣವಾಗಿ ಔಷಧಿ ಬೆಲೆಗಳನ್ನು ಇಳಿಸಿ ಔಷಧಿ ಉದ್ದಿಮೆಯ ಮಹಾಕುಳಗಳ 'ಉತ್ತೇಜನೆ'ಯನ್ನು ಇಳಿಸುವುದಾದರೂ ಸಾಧ್ಯವೇ ಎಂಬ ಯೋಚನೆಗೀಡಾಗಿದೆಯಂತೆ. ಅದಕ್ಕೆ ಒಂದು ಉಪಾಯವನ್ನೂ ಅದು ಕಂಡುಕೊಳ್ಳುತ್ತಿದೆಯಂತೆ. ಅದೆಂದರೆ 'ಮಾರುಕಟ್ಟೆ ಆಧಾರಿತ ಬೆಲೆ ನಿರ್ಧಾರಣೆ'ಯ ಹೆಸರಿನಲ್ಲಿ ಈಗ ಮಾರುಕಟ್ಟೆಯಲ್ಲಿರುವ ಬೆಲೆಗಳ ಸರಾಸರಿ ಆಧಾರದಲ್ಲಿ ಔಷಧಿ ಬೆಲೆಗಳನ್ನು ನಿರ್ಧರಿಸುವುದು. ಇದರ ಅರ್ಥ ಔಷಧಿ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಹೊಂದಿರುವ ಉದ್ದಿಮೆಯ ಭಾರೀ ಕುಳಗಳು ಹೇರಿರುವ ಬೆಲೆಗಳ ಹತ್ತಿರವೇ ಅದನ್ನು ನಿಗದಿ ಮಾಡುವುದು.

ಆಧಿಕಾರಿಕ ಮಂತ್ರಿಗಳ ಗುಂಪು ಇದನ್ನೇ ಶಿಫಾರಸು ಮಾಡುವ ಸಂಭವ ಇದೆಯೆಂದು ಹೇಳಲಾಗುತ್ತಿದೆ. ಅಂದರೆ ಇದರಿಂದ ಜನಸಾಮಾನ್ಯರ ಮುಂದೆ, ಸುಪ್ರಿಂ ಕೋರ್ಟ್ ಹೇಳಿರುವ ಆಯ್ಕೆ, ಕಾಯಿಲೆಯಿಂದ ಸಾಯುವುದು ಅಥವ ತನ್ನ ಮನೆಮಾರುಗಳನ್ನು ಮಾರಿ ಔಷಧಿಗೆ ಸುರಿದು ಬದುಕುವ ಆಯ್ಕೆ, ಹಾಗೆಯೇ ಮುಂದುವರೆಯಬೇಕು!

ದಿನಕ್ಕೆ 28 ರೂ.ಸಾಕು ಎನ್ನುವ ಸರಕಾರದ ಭೋಜನ ಕೂಟಕ್ಕೆ 28 ಲಕ್ಷರೂ.

ಬಡತನದಿಂದ ಮುಕ್ತಿ ಪಡೆಯಲು ದಿನಕ್ಕೆ 28ರೂ. ಖಂಡಿತಾ ಸಾಕು ಎನ್ನುವ ಸರಕಾರ, ಮಿತವ್ಯಯದ ಉಪದೇಶ ಮಾಡುವ ಯುಪಿಎ–2 ಸರಕಾರ ತನ್ನ ಮೂರನೇ ವಾರ್ಷಿಕೋತ್ಸವ ಕೂಟಕ್ಕೆ ಆಮಂತ್ರಿಸಿದ 375 'ಅತಿಥಿ'ಗಳ ಊಟೋಪಚಾರ ಇತ್ಯಾದಿಗಳಿಗೆ ಮಾಡಿದ ಖರ್ಚು 28 ಲಕ್ಷೂ ಹೆಚ್ಚು, ನಿಖರವಾಗಿ ರೂ.28,95,503, ಅಂದರೆ ಒಂದು ಹೊತ್ತಿನ ಊಟಕ್ಕೆ ತಲಾ ರೂ.7700 !

ಇದು ಹರ್ಯಾಣದ ಹಿಸ್ಸಾರ್‌ನ ರಮೇಶ್ ವರ್ಮ ಎಂಬುವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿ.

28ರೂ. ಸಾಕು ಎಂಬ ಘನ ಲೆಕ್ಕಾಚಾರವನ್ನು ಕೊಟ್ಟ ಯೋಜನಾ ಆಯೋಗವೇ ತನ್ನ ಶೌಚಾಲಯ ರಿಪೇರಿಗೆ 35ಲಕ್ಷ ರೂ. ಖರ್ಚು ಮಾಡಿದ ಸುದ್ದಿ ನಮ್ಮ ಓದುಗರ ನೆನಪಿನಲ್ಲಿರಬಹುದು. ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ದೊರೆತ ಮತ್ತೊಂದು ಮಾಹಿತಿಯ ಪ್ರಕಾರ ಈ ವರ್ಷ ಯುಪಿಎ ಸರಕಾರದ ಮಂತ್ರಿಗಳ ವಿದೇಶ ಪ್ರಯಾಣದ ವೆಚ್ಚ 678 ಕೋಟಿ ರೂ. ಇದು ಕಳೆದ ವರ್ಷದ 12 ಪಟ್ಟು! ಎಲ್ಲವೂ ಆಮ್ ಆದ್ಮಿಗಾಗಿ ತಾನೇ!. ○

ಡಿಸೇಲ್ ಬೆಲೆ ಏರಿಕೆ ಹಾಗೂ ಅಡುಗೆ ಅನಿಲ ಪೂರೈಕೆ ಕಡಿತ ನೀತಿ ವಿರೋಧಿಸಿ ಸೆ.20 ರಂದು ಬೆಂಗಳೂರಿನ ಕೆ.ಆರ್.ಪುರಂ ಪ್ರದೇಶದಲ್ಲಿ ನಡೆದ ಸಿಪಿಐ(ಎಂ) ನೇತೃತ್ವದ ವಿಶೇಷ ಪ್ರತಿಭಟನೆ– ಯುಪಿಎ ಸರ್ಕಾರದ ಅಣಕು ಶವಯಾತ್ರೆ.





ವಿದ್ಯಾರ್ಥಿ ಚಳುವಳಿಗೊಂದು ಹೊಸ ಕ್ರಿಯಾಶೀಲತೆಯ ಅರ್ಥ ನೀಡಿದ ಮಾವೋ

ಜಿ.ಎನ್.ನಾಗರಾಜ್ 9

ಗ್ರಂಥಾಲಯದಲ್ಲಿ ಪುಸ್ತಕಗಳ ಅಧ್ಯಯನದಲ್ಲಿ ತಲ್ಲೀನರಾಗಿದ್ದ ಮಾವೋರವರನ್ನು ಬದುಕಿನ ವಾಸ್ತವತೆ ಅಲುಗಾಡಿಸಿತು. ಅವರ ತಂದೆ ಯಾವ ಡಿಗ್ರಿಯನ್ನೂ ಪಡೆಯುವ ಪ್ರಯತ್ನ ಮಾಡದೆ ಕೇವಲ 'ಉಪಯೋಗವಿಲ್ಲದ' ಓದಿನಲ್ಲಿ ಮಗ ಸಮಯ ವ್ಯರ್ಥ ಮಾಡುತ್ತಿರುವುದಕ್ಕೆ ಹಣ ಕಳುಹಿಸಲು ನಿರಾಕರಿಸಿದರು. ಮಾವೋ ಯಾವುದಾದರೊಂದು ಕಾಲೇಜು ಸೇರಲೇಬೇಕಾದ ಒತ್ತಡಕ್ಕೆ ಒಳಗಾದರು. ಸರಿ, ಮತ್ತೆ ಕಾಲೇಜಿನ ಹುಡುಕಾಟಕ್ಕೆ ತೊಡಗಿದರು. ಕಡಿಮೆ ಶುಲ್ಕ, ಕಡಿಮೆ ವಸತಿ ಹಾಗೂ ಊಟದ ವೆಚ್ಚದ ಶಿಕ್ಷಣ ಎಂಬ ಜಾಹಿರಾತು ನೋಡಿ ಅವರು ಶಿಕ್ಷಕರ ತರಬೇತಿ ನೀಡುವ ಹುನಾನ್ ನಾರ್ಮಲ್ ಸ್ಕೂಲ್ ಎಂಬ ಕಾಲೇಜಿಗೆ ಸೇರಿದರು. ಬೇರೆ ಯಾವ ಕಾಲೇಜುಗಳ ಜಾಹಿರಾತುಗಳಿಗೆ ಮರುಳಾಗದೆ 1913 ರಿಂದ 1918ರವರೆಗೆ ಐದು ವರ್ಷಗಳ ಕಾಲ ಆ ಕಾಲೇಜಿನಲ್ಲೇ ಉಳಿದರು.

ನಾರ್ಮಲ್ ಸ್ಕೂಲೆಂಬ ಈ ಕಾಲೇಜು ನಾಲ್ಕು ನೂರು ವಿದ್ಯಾರ್ಥಿಗಳನ್ನು ಹಾಗೂ ಅದಕ್ಕೆ ಸೇರಿಕೊಂಡಂತೆ ಒಂದು ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಯನ್ನು ಹೊಂದಿದ ಪ್ರತಿಷ್ಠತೆ ಪಡೆದ ಕಾಲೇಜಾಗಿತ್ತು. ಈ ಕಾಲೇಜಿನಲ್ಲಿ ಅವರಿಗೆ ಶಿಕ್ಷಕರಾಗಿ ದೊರೆತವರಲ್ಲಿ ಇಬ್ಬರು ಅವರ ಇಡೀ ಜೀವನದ ಮೇಲೆ ಪರಿಣಾಮ ಬೀರಿದವರು. ಅವರಲ್ಲಿ ಶು ತೆ-ಲಿ ಎಂಬ ಶಿಕ್ಷಕರು ಬುದ್ಧಿಜೀವಿ ಕ್ರಾಂತಿಕಾರಿಗಳಿಗೊಬ್ಬ ಮಾದರಿಯಂತಿದ್ದರು. 1911 ರ ಕ್ರಾಂತಿಯ ಸಮಯದಲ್ಲಿ ಸಾಮ್ರಾಟನನ್ನು ತೊಲಗಿಸಿ ಗಣರಾಜ್ಯವನ್ನು, ಸಂಸದೀಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ತಮ್ಮದೇ ರಕ್ತದಲ್ಲಿ ಪತ್ರ ಬರೆದಿದ್ದವರು. ಮಾವೋರವರು ಅವರ ವಿದ್ಯಾರ್ಥಿಯಾದ ಮೇಲೆ ಅವರ ಎಲ್ಲ ಪ್ರಗತಿಪರ ಚಟುವಟಿಕೆಗಳಿಗೆ ಆಧಾರವಾಗಿದ್ದರು. ಮಾವೋರಿಗಿಂತ ಹದಿನೆಂಟು ವರ್ಷ ದೊಡ್ಡವರಾಗಿದ್ದರೂ ಕೂಡ ಮಾವೋರನ್ನು ತಮ್ಮ ನಾಯಕರೆಂದು ಸ್ವೀಕರಿಸಿದರು. ಮುಂದೆ ಅವರಿಂದ ಪ್ರೇರಿತರಾಗಿ ಕಮ್ಯುನಿಸ್ಟ್ ಪಕ್ಷ ಸೇರಿದರು. ಅತಿ ಕಠಿಣ ಕ್ರಾಂತಿಕಾರಿ ಸಂಘರ್ಷವಾದ ಲಾಂಗ್ ಮಾರ್ಚ್‌ನಲ್ಲಿ ಭಾಗವಹಿಸಿದ್ದರು.

ಮತ್ತೊಬ್ಬ ಶಿಕ್ಷಕರಾದ ಯಾಂಗ್ ಚಾಂಗ್‌ಜಿ ನೀತಿ ಶಾಸ್ತ್ರದ ಉಪನ್ಯಾಸಕರು. ಮಹಿಳೆಯರ ಶಿಕ್ಷಣ, ಕುಟುಂಬದೊಳಗೆ ಮಹಿಳೆಯರ ಸಮಾನತೆ, ವಿಧವೆಯರ ವಿವಾಹಗಳ ಪ್ರತಿಪಾದಕರಾಗಿದ್ದರು. ಮಾವೋ ಇವರ ಜೊತೆ ದೀರ್ಘ ಕಾಲ ಚರ್ಚಿಸುತ್ತಿದ್ದರು. ಮುಂದೆ ಇವರು ಬೀಜಿಂಗ್ ವಿಶ್ವವಿದ್ಯಾಲಯದ ಉಪನ್ಯಾಸಕರಾದ ಮೇಲೆ ಅಲ್ಲಿ ಕೂಡ ಅವರಿಗೆ ಸಹಾಯ ಮಾಡಿದರು. ಆ ಸಮಯದಲ್ಲಿ ಯಾಂಗ್‌ರವರ ಸಹೋದರಿ ಮಾವೋರವರಿಗೆ ಪರಿಚಯವಾಗಿ ಪ್ರೇಮಕ್ಕೆ ತಿರುಗಿತು. ಪ್ರಗತಿಪರ ವಿಚಾರದವರಾದ ಈಕೆ ಮಾವೋರವರ ಕ್ರಾಂತಿಕಾರಿ ಚಳುವಳಿಗಳಲ್ಲಿ ಸಹಕಾರಿಯಾಗಿದ್ದರು. ಮಾವೋರವರ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಚೀನದ ಪಾಳೆಯಗಾರಿ ಯುದ್ಧಕೋರರ ಮುಷ್ಠಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಕೋಮಿಂಟಾಗ್‌ನ ಕ್ರೂರಿಗಳು ಅವರ ಪತ್ನಿ ಯನ್ನು ಬಂಧಿಸಿ ಕೊಂದರು.

ವಿದ್ಯಾರ್ಥಿ ನಾಯಕರಾಗಿ ಮಾವೋ

1915ರಲ್ಲಿ ಮಾವೋರವರು ನಾರ್ಮಲ್ ಸ್ಕೂಲಿನ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಆ ಸಮಯದಲ್ಲಿ ಯುರೋಪಿನಲ್ಲಿ ನಡೆಯುತ್ತಿದ್ದ ಮೊದಲನೆಯ ಮಹಾ ಯುದ್ಧದಲ್ಲಿ ಚೀನಾವನ್ನು ಆಕ್ರಮಿಸಿದ್ದ ಬ್ರಿಟನ್, ಫ್ರಾನ್ಸ್, ಜರ್ಮನಿಗಳೆಲ್ಲ ,ಮಗ್ನರಾಗಿದ್ದ ಸಮಯವನ್ನು ಸಾಧಿಸಿ ಜಪಾನೀಯರು ಚೀನಾದ ಹಲವು ಭಾಗಗಳನ್ನು ವಶಪಡಿಸಿಕೊಂಡಿದ್ದರು. 1915ರ ಮೇ ತಿಂಗಳಿನಲ್ಲಿ ಜಪಾನೀಯರು ಇಡೀ ಚೀನಾವನ್ನು ತಮ್ಮ ಗುಲಾಮ ದೇಶವನ್ನಾಗಿಸುವ ಹುನ್ನಾರದಿಂದ ಇಪ್ಪತ್ತೆರಡು ಅಂಶಗಳ ಒಪ್ಪಂದವೊಂದನ್ನು ಮಾಡಿಕೊಳ್ಳಲು ಬಲಾತ್ಕರಿಸಿದರು. ಚೀನಾದ ಯುದ್ಧಕೋರರ ಸರ್ಕಾರ ಸ್ವಾರ್ಥದಿಂದ ಅದಕ್ಕೆ ಸಹಿಹಾಕಲು ಒಪ್ಪಿದಾಗ ಜಪಾನೀಯರ ವಿರುದ್ಧ ಹೋರಾಟಗಳು ಭುಗಿಲೆದ್ದವು. ಈ ಸಂದರ್ಭದಲ್ಲಿ ತಮ್ಮ ಶಾಲೆಯ ವಿದ್ಯಾರ್ಥಿಗಳೊಂದಿಗೆ ಮಾವೋ ಪ್ರತಿಭಟನೆ ಮಾಡಲು ಹೊರಟಾಗ ಕಾಲೇಜಿನ ಮುಖ್ಯಸ್ಥರು ಅನುಮತಿ ನಿರಾಕರಿಸಿದರು. ಮಾವೋ ಅದನ್ನು ಲೆಕ್ಕಿಸದೇ ಪ್ರತಿಭಟನೆಯನ್ನು ಸಂಘಟಿಸಿದರು. ಕಾಲೇಜಿನ ಮುಖ್ಯಸ್ಥರು ಹೇರುತ್ತಿದ್ದ ಇಂತಹ ಅನೇಕ ಮಿತಿಗಳ ವಿರುದ್ಧ ಒಟ್ಟಾಗಿ ಹೋರಾಡಲು ಅವರು ವಿದ್ಯಾರ್ಥಿ ಸ್ವಯಮಾಡಳಿತದ ಸಂಘವೊಂದನ್ನು ಕಟ್ಟಿದರು.

ಹಿಂದಿನ ಸಂಚಿಕೆಗಳಲ್ಲಿ ವಿವರಿಸಿದಂತೆ 1911ರ ಕ್ರಾಂತಿಯಲ್ಲಿ ಸಾಮ್ರಾಟರ ಆಳ್ವಿಕೆ ಕುಸಿದು ಬಿದ್ದರೂ ಪ್ರಜಾಪ್ರಭುತ್ವ ಸ್ಥಾಪನೆಯಾಗದೇ ಚೀನಾ ಪಾಳೆಯಗಾರೀ ಯುದ್ಧಕೋರರ ಪಾಲಾಗಿತ್ತು. ಹುನಾನ್‌ನಲ್ಲಿ ಆ ಸಮಯದಲ್ಲಿ ಏಳು ಜನ ಯುದ್ಧಕೋರರು ತಮ್ಮ ಮೇಲುಗೈಗಾಗಿ ನಿರಂತರ ಒಳಜಗಳದಲ್ಲಿ ಮುಳುಗಿದ್ದರು. ಎಲ್ಲಿ ಯಾವಾಗ ಇವರು ಧಾಳಿ



ಮಾಡುವರೋ ಯಾರೂ ಊಹಿಸಲಾಗುತ್ತಿರಲಿಲ್ಲ. ಅವರು ಶಾಲೆ, ದೇವಾಲಯಗಳನ್ನು ಯಾವಾಗೆಂದರೆ ಆಗ ಆಕ್ರಮಿಸಿಕೊಳ್ಳುತ್ತಿದ್ದರು. ಜನತೆಯನ್ನು ಲೂಟಿ ಮಾಡುತ್ತಿದ್ದರು. ಈ ಯುದ್ಧಕೋರರಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸ್ವರಕ್ಷಣಾ ದಳಗಳನ್ನು ಸಂಘಟಿಸಿಕೊಳ್ಳುವುದು ತೀರಾ ಅವಶ್ಯಕವಾಗಿತ್ತು. ಹುನಾನ್ ಸ್ಕೂಲಿನಲ್ಲಿ ಕೂಡ ರಚಿತವಾದ ಸ್ವರಕ್ಷಣಾ ದಳದ ನೇತೃತ್ವವನ್ನು ಮಾವೋ ವಹಿಸಿದರು. ಒಮ್ಮೆ ಯುದ್ಧಕೋರನೊಬ್ಬನ ಪಡೆ ಮಾವೋರವರ ಶಾಲೆಯನ್ನು ಆಕ್ರಮಿಸಿದಾಗ ಹಠಾತ್ತನೇ ಧಾಳಿಮಾಡಿ ತಂತ್ರಗಾರಿಕೆಯಿಂದ ಆ ಪಡೆಯನ್ನು ಚದುರಿಸಿದರು. ಇಂತಹ ಪರಿಸ್ಥಿತಿ ಚೀನಾದ ವಿದ್ಯಾರ್ಥಿಗಳಲ್ಲಿ ದೇಶ ಪ್ರೇಮದ ಜೊತೆಗೆ ದೈಹಿಕ ಧಾರ್ಢ್ಯತೆಯ ಅಗತ್ಯವನ್ನೂ ಉಂಟು ಮಾಡಿತ್ತು. ಎರಡನೆಯ ಸಂಚಿಕೆಯಲ್ಲಿ ವಿವರಿಸಿದ, ಮಾವೋರವರು ಬರೆದ ದೈಹಿಕ ಶಿಕ್ಷಣದ ಬಗ್ಗೆಗಿನ ಲೇಖನ ಇದೇ ಸಮಯದ್ದು. ಮಾವೋರವರು ಕೊರೆವ ಚಳಿಯಲ್ಲಿಯೂ, ಹಿಮಪಾತವಾಗುತ್ತಿದ್ದಾಗಲೂ ತಣ್ಣೀರಿನ ಸ್ನಾನ ಮಾಡುತ್ತಿದ್ದ ಭಾವಿಯೊಂದನ್ನು ಇಂದಿಗೂ ಆ ಶಾಲೆಯಲ್ಲಿ ತೋರಿಸುತ್ತಾರೆ.

ಅಧ್ಯಯನ, ಹಲವು ರೀತಿಯ ಅಧ್ಯಯನ

ಈ ಶಿಕ್ಷಕ ತರಬೇತಿ ಕಾಲೇಜಿನಲ್ಲಿ ಅವರು ತರಗತಿಗಳಲ್ಲಿ ಕಲಿತದ್ದಕ್ಕಿಂತ ಹೊರಗೆ ಕಲಿತದ್ದೇ ಹೆಚ್ಚು. ಹೊರಗೆ ಎಂದ ಕೂಡಲೆ ಅದಕ್ಕೆ ಬೇರೆ ಬೇರೆಯವರು ಬೇರೆ ಬೇರೆ ವ್ಯಾಪ್ತಿಯನ್ನು, ಅರ್ಥವನ್ನು ಕಲ್ಪಿಸಿಕೊಳ್ಳಬಹುದು. ಮಾವೋರವರು ಅದಕ್ಕೆ ನೀಡಿದ ವಿಶಾಲತೆ, ನಮ್ಮ ಕಲ್ಪನೆಗೆ ಮೀರಿದ್ದು.

ಹುನಾನ್ ನಾರ್ಮಲ್ ಶಾಲೆಯಲ್ಲಿ ಒಳ್ಳೆಯ ಪುಸ್ತಕ ಭಂಡಾರವಿತ್ತು. ಎಂದ ಮೇಲೆ ಕೇಳಬೇಕೆ ! ಮಾವೋರವರು ಕಬ್ಬಿನ ಗದ್ದೆ ಕಂಡ ಆನೆಯಂತೆ ಆನಂದ ತುಂದಿಲರಾದರು. ಸಮಯ ಸಿಕ್ಕಾಗೆಲ್ಲ ಪುಸ್ತಕಗಳ ಅಧ್ಯಯನ ನಿರತರಾದರು. ಈಗಲೂ ಮಾವೋರವರು ಓದಿದ ಪುಸ್ತಕಗಳಲ್ಲಿ ಕೆಲವನ್ನು ಈ ಶಾಲೆಯಲ್ಲಿ ಹೆಮ್ಮೆಯಿಂದ ಪ್ರದರ್ಶಿಸಿದ್ದಾರೆ. ತರ್ಕಶಾಸ್ತ್ರದ ಪುಸ್ತಕವೊಂದರ ಪುಟಗಳ ಅಂಚಿನಲ್ಲಿ ಅವರ ಕೈ ಬರಹದ ಟಿಪ್ಪಣಿ ಗಳನ್ನು, ಅಡಿಗೆರೆಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಇಲ್ಲಿ ಕಳೆದ ಐದು ವರ್ಷಗಳಲ್ಲಿ ಅವರು ಓದಿದ ಪುಸ್ತಕಗಳಲ್ಲಿ ಮಾಡಿದ ಟಿಪ್ಪಣಿಗಳು ಲಕ್ಷಗಟ್ಟಲೇ ಸಂಖ್ಯೆಯನ್ನು ಮೀರುತ್ತವಂತೆ. ಇದು ಅವರು ಈಗಾಗಲೇ ಅನುಸರಿಸಿಕೊಂಡು ಬಂದ ಕಲಿಕೆಯ ವಿಧಾನ. ಹೊಸತೇನು? ಅದೇ ವಿಶೇಷತೆ.

ತರಗತಿಗಳ ಅದಕ್ಕಿಂತ ಹೆಚ್ಚಾಗಿ ಪತ್ರಿಕೆಗಳ, ಪುಸ್ತಕಗಳ ಓದಿನಿಂದ ಮಾವೋರವರ ಜ್ಞಾನದ ಹಸಿವು ತಣಿಯುಲಿಲ್ಲ. ಪುಸ್ತಕಗಳು ಅರಿವಿನ ದಾರಿಯನ್ನೇನೋ ತೋರಿಸಿಕೊಟ್ಟವು. ಆದರೆ ಅಂದಿನ ಚೀನಾದ ಜನತೆಯ ಸಮಸ್ಯೆಗಳಿಗೆ, ಅವರ ಬಿಡುಗಡೆಗೆ ದಾರಿಯೇನು ಎಂಬುದು ಅವರ ಎದುರಿನ ಜೀವಂತ ಪ್ರಶ್ನೆ. ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಚೀನದ ಅರಾಜಕ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇದು ಅತಿ ಜರೂರಿನ ಪ್ರಶ್ನೆ. ಆದ್ದರಿಂದ ಅಧ್ಯಯನ ಎಂಬುದು ಮಾವೋರವರಿಗೆ ಕೇವಲ ಶಿಕ್ಷಣದ ಅಕ್ಯಾಡೆಮಿಕ್ ಪ್ರಶ್ನೆಯಾಗಿರಲಿಲ್ಲ. ಅದು ತುರ್ತಿನ ರಾಜಕೀಯ ಪ್ರಶ್ನೆಯಾಗಿತ್ತು. ಆಗ ಅವರು ಅದನ್ನು ಒಂದು ರಾಜಕೀಯ ಪ್ರಶ್ನೆಯೆಂದು ಯೋಚಿಸಿದ್ದರು ಅಥವಾ ಪ್ರಜ್ಞಾಪೂರ್ವಕವಾಗಿ ವಿಶ್ಲೇಷಿಸಿದ್ದರು ಎಂದು ಅರ್ಥವಲ್ಲ. ಆದರೆ ಅವರು ಅಧ್ಯಯನಕ್ಕೆ ಸಂಬಂಧಿಸಿ ಕೈಗೊಂಡ ಚಟುವಟಿಕೆಗಳು ತಂತಾನೆ ಅದನ್ನೊಂದು ರಾಜಕೀಯ ಕ್ರಮವನ್ನಾಗಿಸಿತು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12,18th Cross, S.R.Nagar, BANGALORE - 560027 Karnataka (State) and Published at BANGALORE No 12,18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor : S.Y.GURUSHANTH